ಐಕ್ಯರಂಗ



ಸ್ವಾತಂತ್ರ್ಯ ಸ್ವರ್ಣಜಯಂತಿ ವಿಶೇಷಾಂಕ

ಭಾರತದ ಸ್ವಾತಂತ್ರ್ಯ ಸುವರ್ಣ ಮಹೋತ್ಸವ

ಸತ್ಯ ಅಹಿಂಸೆ ಶಾಂತಿ ಸಹನೆ ಸಹಬಾಳ್ವೆಗಳಿಗೆ ಧೃಢಸಂಕಲ್ಪ

ವಿಶ್ವ ಇತಿಹಾಸದಲ್ಲಿ ಭಾರತದ ಸ್ವಾತಂತ್ರ್ಯ ಹೋರಾಟ ಒಂದು ಅತ್ಯಪೂರ್ವ ಅಧ್ಯಾಯ. ಸ್ವಾತಂತ್ರ್ಯ ಗಳಿಕೆಯಲ್ಲಿ ಅದು ಅನುಸರಿಸಿದ ಸಂಯಮ ಮಾರ್ಗ ಜಗತ್ತಿಗೇ ಅನುಸರಣೀಯ. ಅದಕ್ಕಾಗಿಯೆ ಇತಿಹಾಸದಲ್ಲಿ ಅದಕ್ಕೆ ಅಗ್ರಪಟ್ಟ.

ಟಿಪ್ಪು ಸುಲ್ತಾನ್, ಕಿತ್ತೂರು ಚೆನ್ನಮ್ಮ, ಝಾನ್ಸಿರಾಣಿ ಲಕ್ಷ್ಮಿಭಾಯಿ, ತಾತ್ಯಾ ಟೋಪಿ, ನಾನಾ ಸಾಹೇಬರಂತಹ ಸ್ವಾಭಿಮಾನಿ, ಸಾಹಸಿ ರಾಜಮನೆತನಗಳು ಸ್ವಾತಂತ್ರ್ಯಕ್ಕೆ ಧಕ್ಕೆಯೊದಗಿದಾಗ ವೀರಾವೇಶದಿಂದ ಹೋರಾಟ ಮಾಡಿ, ಪರತಂತ್ರಕ್ಕೆ ಬಲಿಯಾಗದೇ ವೀರಮರಣವನ್ನೇ ಕಂಡರು. ಭಗತ್ ಸಿಂಗ್, ಸುಖದೇವ್, ರಾಜಗುರು, ಚಂದ್ರಶೇಖರ್ ಅಜಾದ್ ಅವರಂತಹ ಬಿಸಿರಕ್ತದ ಯುವಕರು, ಲಾಲಾ ಲಜಪತರಾಯ್, ಬಾಲಗಂಗಾಧರ ತಿಲಕ್, ಬಿಪಿನ್ ಚಂದ್ರಪಾಲ್ (ಲಾಲ-ಬಾಲ-ಪಾಲ) ಮುಂತಾದ ಉಗ್ರ ಹೋರಾಟಗಾರರ ಸ್ಫೂರ್ತಿ ಸ್ವಾತಂತ್ರ್ಯ ಚಿಲುಮೆಯಾಗಿ ಚಿಮ್ಮಿತು. ಸ್ವಾತಂತ್ರ್ಯ ಹೋರಾಟವೆಂಬ ಉಗ್ರ ಸ್ವರೂಪದ ಸಾಗರದಲ್ಲಿ ಮುಂದೆ 1917 ರಲ್ಲಿ ಮೋಹನದಾಸ ಗಾಂಧಿ ಎಂಬ ತಂಗಾಳಿಯು ಚುಕ್ಕಾಣಿ ಹಿಡಿದು ಮುನ್ನಡೆಯಿತು. ಸತ್ಯ, ಅಹಿಂಸೆ ಮತ್ತು ಸಂಯಮಗಳೇ ಈ ಮಹಾನ್ ನಾಯಕನ ಪ್ರಬಲ ಅಸ್ತ್ರಗಳಾದವು.

ಸ್ವಾತಂತ್ರ್ಯ ಹೋರಾಟಕ್ಕೆ ಹೊಸ ಸ್ವರೂಪ ಬಂತು. ಗಾಂಧಿ ಎಂಬ ಮಹಾ ಮಂತ್ರದಂಡಕ್ಕೆ ದೇಶದ ಸಮಸ್ತ ಜನ ಸಮುದಾಯವೇ ಮುನ್ನುಗ್ಗಿ ಬಂತು. ಹೆಣ್ಣು, ಗಂಡು, ಯುವಕರು, ಮುದುಕರು, ಬಡವರು, ಸಿರಿವಂತರು ಎಂಬ ಭೇದಭಾವವಿಲ್ಲದೆ ತಮ್ಮ ಗುಡಿ, ಗುಡಾರಗಳು, ಶಾಲೆ-ಕಾಲೇಜುಗಳು, ಗುಡಿಸಲು, ಮನೆಗಳು, ಮಹಲುಗಳಿಂದ ಹೊರಬಂದರು. ಅದುವರೆಗೆ ಕತ್ತಿ, ಖಡ್ಗ, ಮದ್ದು, ಗುಂಡುಗಳ ಸಹಾಯದಿಂದ ಗೆದ್ದಿದ್ದ ಬ್ರಿಟಿಷ್ ಸಾಮ್ರಾಜ್ಯದ ಜಂಘಾಬಲವೇ ಉಡುಗಿ ಹೋಯಿತು. ಈ ನಿಶ್ಶಸ್ತ್ರಧಾರಿ, ತ್ಯಾಗಿ ಜನಸಾಗರದ ಎದುರು. ಜವಾಹರಲಾಲ ನೆಹರು, ಸರ್ದಾರ್ ವಲ್ಲಭಾಯಿ ಪಟೇಲ್, ಸುಭಾಷ್ ಚಂದ್ರಬೋಸ್, ಮೌಲಾನಾ ಅಬುಲ್ ಕಲಾಮ್ ಅಜಾದ್, ಡಾ. ಅಂಬೇಡ್ಕರ್ ಮುಂತಾದ ನೇತಾರರ ಸಹಯೋಗದಲ್ಲಿ ಗಾಂಧೀಜಿ ಸಾಗಿದ್ದ ಅಹಿಂಸಾತ್ಮಕ ಸ್ವಾತಂತ್ರ್ಯ ಸಮರ, ಅಭಿಪ್ರಾಯ ಭೇದಗಳ ಮಧ್ಯದಲ್ಲೂ ತನ್ನ ಸಾಮರ್ಥ್ಯವನ್ನು ಪ್ರದರ್ಶಿಸಿತು. ಮಹಾತ್ಮ ಗಾಂಧಿಯ ಸಂಮೋಹನಕ್ಕೆ ಒಳಗಾದ "ಸೂರ್ಯ ಮುಳುಗದ ಸಾಮ್ರಾಜ್ಯ" ಮನಸೋತು ಸ್ವಾತಂತ್ರ್ಯ ಜ್ಯೋತಿಯನ್ನು ಕೈಗಿತ್ತು ಕಾಲ್ತೆಗೆಯಿತು.

ಈ ಮಹಾನ್ ವಿಜಯಗಾಥೆಯಲ್ಲಿ ಕನ್ನಡಿಗರ ಕೊಡುಗೆ ಅನುಪಮ. ಮೈಸೂರು ಹುಲಿ ಟಿಪ್ಪು ಸುಲ್ತಾನ್, ರಾಣಿ ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ಅಬ್ಬಕ್ಕದೇವಿ, ವೀರ ಸಿಂಧೂರ ಲಕ್ಷ್ಮಣರ ವೀರಗಾಥೆಗಳು ಮೈನವಿರೇಳಿಸುತ್ತವೆ.

ಅಹಿಂಸಾ ಪಥದಲ್ಲಿ ಸಾಗಿದ್ದ ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಲು ತಮ್ಮ ಸಕಲ ಸಂಪತ್ತನ್ನು ತ್ಯಾಗ ಮಾಡಿ ಬಂದ ಮಹನೀಯರು, ಶಾಲಾ ಕಾಲೇಜುಗಳನ್ನು ತೊರೆದ ವಿದ್ಯಾರ್ಥಿ ಸಮುದಾಯ, ಹಳ್ಳಿಗಳಿಂದ ಬಂದ ಜನರೆಲ್ಲರ ಏಕಮಾತ್ರ ಮಂತ್ರ- "ಸ್ವತಂತ್ರ ಭಾರತ".

ಆಗಸ್ಟ್ 1942 ರಲ್ಲಿ "ಕ್ವಿಟ್ ಇಂಡಿಯಾ" ಚಳುವಳಿಯಲ್ಲಿ ಕರ್ನಾಟಕದ ಸ್ವಾತಂತ್ರ್ಯ ಯೋಧರ ಪಾತ್ರ ಬಹಳ ಹಿರಿದು. ಮೈಲಾರ ಮಹದೇವಪ್ಪ ಮೆಣಸಿನ ಕಾಳು ತಿಮ್ಮಣ್ಣಗೌಡ, ಕೊಟ್ರ ನಂಜಪ್ಪ ಈ ಚಳುವಳಿಯಲ್ಲಿ ವೀರಮರಣವನ್ನಪ್ಪಿದ್ದ ಪ್ರಮುಖರು.

ಗಂಗಾಧರರಾವ್ ದೇಶಪಾಂಡೆ, ತಗಡೂರು ರಾಮಚಂದ್ರರಾವ್, ಕೌಜಲಗಿ ಹನುಮಂತರಾವ್, ಕೌಜಲಗಿ ಶ್ರೀನಿವಾಸ್ ರಾವ್, ಎಸ್. ಚೆನ್ನಯ್ಯ, ಗೋವಿಂದರಾವ್ ಯಾಲಗಿ, ಹನುಮಂತರಾವ್ ದೇಶಪಾಂಡೆ, ಕಾರ್ನಾಡ್ ಸದಾಶಿವರಾವ್, ರಂಗನಾಥ, ದಿವಾಕರ್, ಡಾ.ನಾ.ಸು.ಕರ್ಡೀಕರ್, ಅಂಬಲಿ ಚೆನ್ನಬಸಪ್ಪ, ಕೆ.ಸಿ.ರೆಡ್ಡಿ, ಟೇಕೂರು ಸುಬ್ರಮಣ್ಯಂ, ಕೆ.ಟಿ, ಭಾಷ್ಯಂ, ಹೆಚ್.ಸಿ.ದಾಸಪ್ಪ, ವೀರಣ್ಣಗೌಡ, ಶ್ರೀರಂಗ ಕಾಮತ್, ಬಿಂದುಮಾಧವ, ಬುರ್ಲಿ, ನರಸಿಂಹ ದಾಬಡೆ, ಸಂಗೂರು ಬದಿಯಪ್ಪ, ವೆಂಕಟೇಶ್ ಮಾಗಡಿ, ಕೆ.ಬಿ.ದುಂದುರ್, ಶಂಕರ್ ಕುರ್ತಕೋಟಿ ಮುಂತಾದ ಮಹನಿಯರು ತೋರಿದ ನಿಸ್ವಾರ್ಥ ಮನೋಭಾವ ಮತ್ತು ತ್ಯಾಗಜೀವನ ಸದಾ ಸ್ಮರಣೀಯ. ರಾಜ್ಯದ ಮಾಜಿ ಮುಖ್ಯಮಂತ್ರಿ ಹಾಗೂ ಹಿರಿಯ ಮುತ್ಸದ್ದಿ ಸಿದ್ದವನಹಳ್ಳಿ ನಿಜಲಿಂಗಪ್ಪ, ಕೆಂಗಲ್ ಹನುಮಂತಯ್ಯ, ಕಡಿದಾಳ್ ಮಂಜಪ್ಪ, ಶಿಕ್ಷಣ ತಜ್ಞ ಮತ್ತು ಬೆಂಗಳೂರು ವಿಶ್ವವಿದ್ಯಾನಿಲಯದ ಮಾಜಿ ಕುಲಪತಿ ಡಾ.ಹೆಚ್. ನರಸಿಂಹಯ್ಯನವರಂತಹ ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ನಮ್ಮ ನಡುವೆ ಇದ್ದು ನಿರಂತರ ಸ್ಫೂರ್ತಿಯ ನೆಲೆಯಾಗಿರುವುದು ಕನ್ನಡಿಗರೆಲ್ಲರಿಗೂ ಹೆಮ್ಮೆಯ ಸಂಗತಿ.

ವಿಜ್ಞಾನ, ಕೃಷಿ, ನೀರಾವರಿ ಕ್ಷೇತ್ರಗಳಲ್ಲಿ ಮಹತ್ತರ ಪ್ರಗತಿಯನ್ನು ಸಾಧಿಸಿ ದೇಶ ಅಭಿವೃದ್ಧಿಶೀಲ ದೇಶಗಳ ಸಾಲಿನ ಮುಂಚೂಣಿಯಲ್ಲಿದೆ.

ರಾಷ್ಟ್ರದ ಅಭಿವೃದ್ಧಿಯ ಜತೆಜತೆಯಲ್ಲಿ ಕರ್ನಾಟಕವೂ ಗಮನಾರ್ಹ ಪ್ರಗತಿ ಸಾಧಿಸುತ್ತಾ ಇಡೀ ದೇಶದ ದೃಷ್ಟಿಯನ್ನು ತನ್ನೆಡೆಗೆ ಸೆಳೆದಿದೆ.

ಆಡಳಿತ ಯಂತ್ರವನ್ನು ಚುರುಕುಗೊಳಿಸಿ ಸರ್ಕಾರವನ್ನು ಜನರ ಸಮೀಪಕ್ಕೊಯ್ಯಲು ಮತ್ತಷ್ಟು ಅವಕಾಶವಾಗುವಂತೆ ಒಂಭತ್ತು ಹೊಸ ಜಿಲ್ಲೆಗಳ ಆರಂಭಕ್ಕೆ ಕ್ರಮ, ಮೊದಲ ಹಂತದಲ್ಲಿ 7 ಜಿಲ್ಲೆಗಳ ಉದಯ, 40 ವರ್ಷಗಳಿಂದಲೂ ನೆನೆಗುದಿಯಲ್ಲಿದ್ದ ಈ ವಿಷಯದಲ್ಲಿ ಸರ್ಕಾರದ ದಿಟ್ಟ ನಿರ್ಧಾರದ ಮೂಲಕ ಅಂತಿಮ ತೆರೆ.

ಅಧಿಕಾರ ವಿಕೇಂದ್ರಿಕರಣಗೊಂಡು ಪರಿಣಾಮಕಾರಿ ಆಡಳಿತ ಸಿಗುವಂತಾಗಲು ಸರ್ಕಾರ ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತ್‌ಗಳಿಗೆ ಚುನಾವಣೆ ನಡೆಸಿ, ಜನರ ಕೈಗೆ ಅಧಿಕಾರ ಕೊಟ್ಟು ಪ್ರಜಾಪ್ರಭುಚತ್ವಕ್ಕೆ ಭದ್ರ ಬುನಾದಿ ಹಾಕಿದೆ.

ರಾಜ್ಯದ ಗ್ರಾಮೀಣ ಬದುಕಿನಲ್ಲಿ ಹೊಸ ಬೆಳಕು ಮೂಡಿಸಿ ಜನರಲ್ಲಿ ಆದಮ್ಯ ಚೈತನ್ಯ ತರಲು 'ಸ್ವಸ್ತಿ' ಗ್ರಾಮ ಯೋಜನೆ ಎಂಬ ವಿನೂತನ ಯೋಜನೆ ಆರಂಭ. ಈ ಮೂಲಕ ಮಹಾತ್ಮ ಗಾಂಧೀಜಿಯವರ ಕನಸಿನ ಸಾಕಾರಕ್ಕೆ ಸಂಕಲ್ಪ. ಈ ಯೋಜನೆಯಡಿ ಮೊದಲ ಹಂತವಾಗಿ ರಾಜ್ಯದ ಪ್ರತಿ ಜಿಲ್ಲೆಯಿಂದ ಅತ್ಯಂತ ಹಿಂದುಳಿದ ಒಂದೊಂದು ಗ್ರಾಮವನ್ನು ಆಯ್ಕೆ ಮಾಡಿ ಅದನ್ನು ಮಾದರಿ ಮತ್ತು ಆಧುನಿಕ ಗ್ರಾಮವನ್ನಾಗಿಸಲು ಸನ್ನದ್ಧತೆ. 27,000 ಗ್ರಾಮಗಳಲ್ಲಿ ವಾಸಿಸುತ್ತಿರುವ 350 ಲಕ್ಷ ಗ್ರಾಮೀಣ ಜನರ ಮೊಗದಲ್ಲಿ ನಗೆಹೊನಲಿಗೆ ನಾಂದಿ.

50ನೇ ಸ್ವಾತಂತ್ರ್ಯೋತ್ಸವದ ಕೊಡುಗೆ-ಸ್ವಾತಂತ್ರ್ಯ ಹೋರಾಟಗಾರರ ಮಾಸಾಶನ ರೂ.750 ಕ್ಕೆ ಹೆಚ್ಚಳ, 10,000 ಶಾಲಾ ಕೊಠಡಿಗಳ ನಿರ್ಮಾಣ, 18,500 ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ, ಶಾಲೆಗಳೇ ಇಲ್ಲದ ಪ್ರದೇಶಗಳಲ್ಲಿ 2000 ನೂತನ ಕಿರಿಯ ಪ್ರಾಥಮಿಕ ಶಾಲೆಗಳ ಆರಂಭ, 2000 ಹಿರಿಯ ಪ್ರಾಥಮಿಕ ಶಾಲೆಗಳ ಪ್ರಾರಂಭಕ್ಕೆ ಕ್ರಮ. ಗ್ರಾಮೀಣ ಪ್ರದಂಶಗಳಲ್ಲಿ ಜನರಿಗೆ ತಮ್ಮ ಅಗತ್ಯಗಳನ್ನು ಸುಲಭವಾಗಿ ಪಡೆದುಕೊಳ್ಳುವಂತಾಗಲು ಸುಧಾರಿತ ರಸ್ತೆ ಸಂಪರ್ಕ.

ಭಾರತ ಸ್ವಾತಂತ್ರ್ಯದ ಸುವರ್ಣ ಮಹೋತ್ಸವದ ಶುಭದಿನದಂದು
ನಾವೆಲ್ಲರೂ ಸ್ವಾತಂತ್ರ್ಯ ಹೋರಾಟದ ಘನ ಉದ್ದೇಶಕ್ಕೆ
ನಮ್ಮನ್ನು ಪುನರ್ ಸಮರ್ಪಿಸಿಕೊಳ್ಳೋಣ.
ನಮ್ಮ ಸ್ವಾತಂತ್ರ್ಯ ನೇತಾರರ ಕನಸನ್ನು ನನಸಾಗಿಸಲು
ಕಂಕಣಬದ್ಧರಾಗೋಣ.

ಶ್ರೀ. ಜೆ.ಹೆಚ್. ಪಟೇಲ್.
ಮಾನ್ಯ ಮುಖ್ಯ ಮಂತ್ರಿಗಳು.

ಸುವರ್ಣ ಭಾರತ - ಸಮೃದ್ಧ ಕರ್ನಾಟಕ

ಕರ್ನಾಟಕ ವಾರ್ತೆ

ಎಂವಿ. 13897



ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)ದ ವಾರಪತ್ರಿಕೆ

ಸಂಪುಟ 19 ಸಂಚಿಕೆ 35-36 ಆಗಸ್ಟ್ 1997

ಸ್ವಾತಂತ್ರ್ಯ ಸ್ವರ್ಣಜಯಂತಿ ವಿಶೇಷಾಂಕ

ಮುಖಪುಟ ವಿನ್ಯಾಸ : ಟಿ.ಎಸ್.ರಾಜೀವ್

ಮುದ್ರಣ : ಅಕ್ಷರ ವಿನ್ಯಾಸ, ನಂ.24, 5ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು-09 ಫೋನ್ : 2200783

ಬೆಲೆ : ರೂ. 5.00

ಸಂಪಾದಕೀಯ

ಭಾರತ ದೇಶದ ಸ್ವಾತಂತ್ರ್ಯದ ಸ್ವರ್ಣ ಮಹೋತ್ಸವವನ್ನು ಆಚರಿಸುತ್ತಿರುವಾಗ ನಾವು ಮಾರ್ಕ್ಸ್‌ವಾದಿ ಕಮ್ಯುನಿಸ್ಟ ಪಕ್ಷದ ಮುಖಪತ್ರವಾದ "ಐಕ್ಯರಂಗ" ದ ವಿಶೇಷ ಸಂಚಿಕೆಯನ್ನು ಹೊರತರುತ್ತಿದ್ದೇವೆ. ಸ್ವತಂತ್ರ ಭಾರತ ದೇಶ ಐವತ್ತೊಂದಕ್ಕೆ ಪಾದಾರ್ಪಣೆ ಮಾಡುತ್ತಿದೆ. "ಐಕ್ಯರಂಗ" ೨೨ ನೇ ವರ್ಷಕ್ಕೆ ಕಾಲಿಡುತ್ತಿದೆ.

ಬ್ರಿಟಿಷ್ ವಸಾಹತುಶಾಹಿಯ ಕ್ರೂರ ದಬ್ಬಾಳಿಕೆಯ ವಿರುದ್ಧ ಯಾವ ಫಲಾಪೇಕ್ಷೆಗಳೂ ಇಲ್ಲದೆ ಅಪ್ರತಿಮವಾದ ಧೀರೋದಾತ್ತವಾದ, ಶೂರತನದ ಹೋರಾಟಗಳನ್ನು ನಡೆಸಿ ಅಮಾನುಷ ದಬ್ಬಾಳಿಕೆಗಳನ್ನೆದುರಿಸಿ, ಗೋಲಿಬಾರಿಗೆ ಎದೆಕೊಟ್ಟು ನಿಂತು, ಅತ್ಯಾನಂದದಿಂದ ಗಲ್ಲಿಗೇರಿ ಪ್ರಾಣತೆತ್ತ ನಿಷ್ಠ ನಿರ್ಮಲ ಹೃದಯದ ಸ್ವಾತಂತ್ರ್ಯ ಯೋಧರಿಗೆಲ್ಲ "ಐಕ್ಯರಂಗ" ಶ್ರದ್ಧಾಂಜಲಿಯನ್ನರ್ಪಿಸುತ್ತದೆ. ಹಾಗೆಯೇ ಅವರೆಲ್ಲರ ತ್ಯಾಗ ಬಲಿದಾನಗಳನ್ನು ತುಂಬು ಹೃದಯದಿಂದ ಸ್ಮರಿಸಿಕೊಳ್ಳುತ್ತದೆ.

ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡ ಭಾರತ ದೇಶದ ದುಡಿಯುವ ಜನತೆ ನಾನಾ ತರಹದ ಕನಸುಗಳನ್ನು ಕಂಡಿದ್ದರು. ಆದರೆ ನಂತರ ಅವುಗಳಲ್ಲಿ ಕೆಲವನ್ನಾದರೂ ಸಾಧಿಸಿಕೊಳ್ಳಬೇಕೆಂಬ ಛಲದಿಂದ ಮುಂದೊತ್ತಿದಾಗ ಸ್ವಾತಂತ್ರ್ಯಗಳಿಸಿದ ನಂತರ ಅಧಿಕಾರ ಚಲಾಯಿಸುತ್ತಿದ್ದ ಸರಕಾರಗಳ ವಿರುದ್ಧ ವಿಪುಲ ಹೋರಾಟಗಳನ್ನು ನಡೆಸಬೇಕಾದ ಪರಿಸ್ಥಿತಿ ಉಂಟಾಗಿತ್ತು. ಸ್ವಾತಂತ್ರ್ಯ ಹೋರಾಟದಲ್ಲಿ ಮುಖಂಡತ್ವ ವಹಿಸಿದವರೇ ಅಧಿಕಾರ ಚಲಾಯಿಸುತ್ತಿದ್ದರೂ, ಬಂಡವಾಳಶಾಹಿ-ಭೂಮಾಲಿಕರ ಒತ್ತಡದಿಂದಾಗಿ ಹಲವಾರು ಕನಸುಗಳು ನನಸಾಗದೆ ಉಳಿದಿವೆ. ಸ್ವಾತಂತ್ರ್ಯ ಪೂರ್ವದಲ್ಲಿಯೇ ಎಡಪಂಥೀಯ ನೆಲೆಗಟ್ಟು ಹೊಂದಿದ್ದ ಪಶ್ಚಿಮ ಬಂಗಾಳ, ಕೇರಳ, ತ್ರಿಪುರ ರಾಜ್ಯಗಳಲ್ಲಿ ಕೆಂಬಾವುಟದ ನೇತೃತ್ವದಲ್ಲಿ ನಿರಂತರ ಧೀರೋದಾತ್ತ ಹೋರಾಟ ನಡೆಸಿದ ಪರಿಣಾಮವಾಗಿ ಪಶ್ಚಿಮ ಬಂಗಾಲ, ತ್ರಿಪುರಗಳಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ನೇತೃತ್ವದಲ್ಲಿ ಎಡರಂಗ ಸರಕಾರ, ಕೇರಳದಲ್ಲಿ ಸಿ.ಪಿ.ಐ(ಎಂ) ನೇತೃತ್ವದಲ್ಲಿ ಎಡ ಪ್ರಜಾಪ್ರಭುತ್ವರಂಗದ ಸರಕಾರ ರಚಿಸಿ ರೈತ-ಕಾರ್ಮಿಕರ, ದುಡಿಯುವ ಜನತೆಯ ಕೆಲವು ಸಮಸ್ಯೆಗಳಿಗಾದರೂ ಪರಿಹಾರ ಒದಗಿಸಲು ಸಾಧ್ಯವಾಗಿದೆ. ಎಡ ಮತ್ತು ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳ ಶ್ರಮದಿಂದ ಕಾಂಗ್ರೇಸ್ ಮತ್ತು ಬಿಜೆಪಿ ಗಳನ್ನು ಹೊರಗಿಟ್ಟು ಅಧಿಕಾರಕ್ಕೆ ಬಂದ ಸಂಯುಕ್ತ ರಂಗ ಸರಕಾರ ಜನರ ಆಶೋತ್ತರಗಳನ್ನು ಸ್ವಲ್ಪ ಮಟ್ಟಿಗಾದರೂ ಪೂರೈಸಬಹುದೆಂಬ ನಿರೀಕ್ಷೆ ಸುಳ್ಳಾಗುತ್ತಿದೆ. ಜನರ ಆಸೆಗಳನ್ನು ವಿಫಲಗೊಳಿಸಿ ಮತದಾರರಿಂದ ಧಿಕ್ಕರಿಸಲ್ಪಟ್ಟ ಹಿಂದಿನ ಕಾಂಗ್ರೇಸ್ ಸರಕಾರದ ಆರ್ಥಿಕ ಧೋರಣೆಯನ್ನೇ ಮುಂದುವರಿಸುತ್ತ, ವಿಶ್ವಬ್ಯಾಂಕ್ ಮತ್ತು ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಯ ನಿರ್ದೇಶನಕ್ಕೆ ತಾಳಹಾಕುತ್ತ ಹೊರಟಿದೆ ಸಂಯುಕ್ತರಂಗ ಸರಕಾರ. ಈ ಸರಕಾರದ ಜನವಿರೋಧಿ ನೀತಿಗಳ ವಿರುದ್ಧ ಬಲಿಷ್ಟವಾದ ಜನಾಂದೋಲನ ನಡೆಸಿ, ಸಂಯುಕ್ತರಂಗದ ಸರಕಾರ ಜನಸಾಮಾನ್ಯರಿಗಿತ್ತ ಆಶ್ವಾಸನೆಗಳಿಗೆ ಸ್ಪಂದಿಸಬೇಕು, ಜನಪರ ನೀತಿಯನ್ನನುಸರಿಸಿ ಕೆಲವು ವಚನಗಳನ್ನಾದರೂ ಅನುಷ್ಠಾನಕ್ಕೆ ತರುವಂತೆ ಮಾಡಲು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತು ಅದರ ನೇತೃತ್ವದ ಸಾಮೂಹಿಕ ಸಂಘಟನೆಗಳು ಪ್ರಚಾರ-ಪ್ರಕ್ಷೋಭೆ ನಡೆಸುತ್ತಿವೆ.

ಕಳೆದ ೨೨ ವರ್ಷಗಳಿಂದಲೂ "ಐಕ್ಯರಂಗ" ದುಡಿಯುವ ಜನರಲ್ಲಿ ಜಾಗೃತಿ ಮೂಡಿಸಲು, ಅವರ ಸಮಸ್ಯೆಗಳನ್ನು ಜನರ ಮುಂದಿಡಲು, ಚಳುವಳಿಗಳಿಗೆ ಸರಿಯಾದ ಮಾರ್ಗದರ್ಶನ ನೀಡಲು ಸಹಾಯಮಾಡಿದೆ.

ಸ್ವಾತಂತ್ರ್ಯೋತ್ಸವದ ೫೦ನೇ ವಾರ್ಷಿಕೋತ್ಸವವನ್ನು ಆಚರಿಸುತ್ತಿರುವ ಈ ಸಂದರ್ಭದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಎಡ ಮತ್ತು ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳನ್ನೆಲ್ಲಾ ಇನ್ನಷ್ಟು ಸಂಯೋಜಿಸಿ ಬಲಿಷ್ಟಗೊಳಿಸಿ, ದೇಶದ ಸ್ವಾತಂತ್ರ್ಯ ಮತ್ತು ಸಾರ್ವಭೌಮತ್ವಕ್ಕೆ ಉಂಟಾಗಿರುವ ಅಪಾಯದಿಂದ ದೇಶವನ್ನು ರಕ್ಷಿಸಿ, ಜನತಾ ಪ್ರಜಾಪ್ರಭುತ್ವ ರಂಗ ಸ್ಥಾಪನೆಗಾಗಿ ಶಕ್ತಿಮೀರಿ ದುಡಿಯುತ್ತದೆಂದೂ, "ಐಕ್ಯರಂಗ" ಆ ಮಹಾಚರಿತ್ರಾರ್ಹ ಜವಾಬ್ದಾರಿಯ ನಿರ್ವಹಣೆಯತ್ತ ಪ್ರಚಾರ-ಪ್ರಕ್ಷೋಭೆಯಲ್ಲಿ ಪಾಲ್ಗೊಂಡು, ಜನತಾ ಚಳುವಳಿ ಮುನ್ನುಗ್ಗುವಂತೆ ಮಾಡುವಲ್ಲಿ ತನ್ನ ಜವಾಬ್ದಾರಿಯನ್ನು ನಿರ್ವಹಿಸುತ್ತದೆಂಬ ಆಶ್ವಾಸನೆಯನ್ನು ಓದುಗರಿಗೆ ನೀಡಲು ಇಚ್ಛೆ ಪಡುತ್ತದೆ.

ಭಾರತೀಯ ಸ್ವಾತಂತ್ರ್ಯ 1947-1997

ಇ.ಎಂ.ಎಸ್

ಭಾರತದ ಸ್ವಾತಂತ್ರ್ಯಕ್ಕೆ ಆಧಾರವಾದ ಮೌಂಟ್‌ಬ್ಯಾಟನ್ ತೀರ್ಪನ್ನು ಗಾಂಧೀಜಿಯವರೂ ಖಂಡಿಸಿದ್ದರು. ಭಾರತ ಕಮ್ಯುನಿಸ್ಟ್ ಪಕ್ಷವೂ ಖಂಡಿಸಿತು. ಹಾಗಿದ್ದರೆ ಈ ಸ್ವಾತಂತ್ರ್ಯದ ಸ್ವರೂಪವೇನು? ಕಳೆದ ಐವತ್ತು ವರ್ಷಗಳಲ್ಲಿ ಇದರ ಫಲಿತಾಂಶವೇನು? ಈಗ ದೇಶ ಎದುರಿಸುತ್ತಿರುವ ಪ್ರಧಾನ ಪ್ರಶ್ನೆಯೇನು?



ನಾವೀಗ ಭಾರತೀಯ ಸ್ವಾತಂತ್ರ್ಯದ 50ನೇ ವಾರ್ಷಿಕೋತ್ಸವವನ್ನು ಆಚರಿಸುತ್ತಿದ್ದೇವೆ. ಸಹಜವಾಗಿಯೇ ನಾವೊಂದು ಹೊಸ ಸ್ವತಂತ್ರ ದೇಶವಾಗಿ ಉದಯವಾದ ನಂತರದ 50 ವರ್ಷಗಳ ಸಾಧನೆಗಳು ಹಾಗೂ ನ್ಯೂನ್ಯತೆಗಳನ್ನು ಈ ಅವಧಿಯಲ್ಲಿ ಪರೀಕ್ಷಿಸಲಿದ್ದೇವೆ.

ಆದರೆ ಆಗಸ್ಟ್ 15, 1947 ರಂದು ಗೆದ್ದ ಸ್ವಾತಂತ್ರ್ಯದ ಸ್ವರೂಪವನ್ನು ಪರೀಕ್ಷಿಸುವುದು ಅಗತ್ಯ. ಏಕೆಂದರೆ 50 ವರ್ಷಗಳ ಸ್ವಾತಂತ್ರ್ಯದ ಸಾಧನೆಗಳು ಹಾಗೂ ನ್ಯೂನ್ಯತೆಗಳಿಗೂ ಈ ಸ್ವರೂಪವನ್ನು ಗ್ರಹಿಸಿದ ವಿವಿಧ ರೀತಿಗಳಿಗೂ ನಿಕಟ ಸಂಬಂಧವಿದೆ. ಪಾಕಿಸ್ತಾನದಲ್ಲಿ ಮುಸ್ಲಿಂ ಲೀಗ್‌ಗೆ, ಭಾರತೀಯ ಸಂಘದಲ್ಲಿ ಕಾಂಗ್ರೆಸ್‌ಗೆ ಬ್ರಿಟಿಶ್ ಆಳರಸರು ಯಾವ ಆಧಾರದಲ್ಲಿ ಅಧಿಕಾರವನ್ನು ವರ್ಗಾಯಿಸಿದರೋ ಆ ಮೌಂಟ್‌ಬ್ಯಾಟನ್ ತೀರ್ಪಿನ (Mount battan Award) ಸ್ವರೂಪವೇನು?

ಮುಸ್ಲಿಂ ಲೀಗ್ ಈ ತೀರ್ಪನ್ನು ತನ್ನ ವಿಜಯವೆಂದು ಹೊಗಳಿತು. ಏಕೆಂದರೆ ಅದು ಭಾರತವನ್ನು 'ಎರಡು ರಾಷ್ಟ್ರ ಸಿದ್ಧಾಂತ' ದ ಆಧಾರದ ಮೇಲೆ ವಿಭಜಿಸಿತು. ಭಾರತವನ್ನು ಕೋಮು ಆಧಾರದಲ್ಲಿ ವಿಭಜಿಸಲಾಯಿತು ಎಂದು ಕಾಂಗ್ರೆಸ್‌ಗೆ ಖೇದವಾಯಿತು. ಆದರೆ ಭಾರತೀಯ ಸಂಘ ಎನಿಸಿಕೊಂಡ ಒಂದು ಭಾಗದಲ್ಲಾದರೂ ಆಳುವ ಪಕ್ಷವಾಗಿಬಿಟ್ಟ ಬಗ್ಗೆ ಅದಕ್ಕೆ ತೃಪ್ತಿಯೂ ಇತ್ತು.

ಆದರೆ ಕಾಂಗ್ರೆಸ್ ಮುಖಂಡರಲ್ಲಿ ಮಹಾತ್ಮ ಗಾಂಧಿಯವರೊಬ್ಬರು ಮಾತ್ರ 'ದೇಶವನ್ನು ಕೋಮು ಆಧಾರದಲ್ಲಿ ವಿಭಜಿಸಲಾಗುತ್ತಿದೆ, ಇದರಿಂದ ಗಡಿಯ ಎರಡೂ ಕಡೆ ಕೋಮುದಂಗೆಗಳಾಗುತ್ತವೆ' ಎಂದು ಸ್ಪಷ್ಟಪಡಿಸಿದರು. ಆದ್ದರಿಂದ ಅವರು ಆಗಸ್ಟ್ 15, 1947 ರ ಸಂಭ್ರಮ, ಸಡಗರಗಳಲ್ಲಿ ಭಾಗವಹಿಸಲು ನಿರಾಕರಿಸಿದರು; ಭಾರತೀಯ ಸಂಘದಲ್ಲೂ, ಪಾಕಿಸ್ತಾನದಲ್ಲೂ ಭುಗಿಲೆದ್ದ ದುರಂತ ಬೆಳವಣಿಗೆಯಾದ ದಂಗೆಗಳಿಗೆ ಬಲಿಯಾಗುತ್ತಿದ್ದ ಗಂಡಸರನ್ನು, ಹೆಂಗಸರನ್ನು ಸಂತೈಸಲು ತನ್ನೆಲ್ಲಾ ಶಕ್ತಿಯನ್ನು ಬಳಸುತ್ತಿದ್ದರು.

ಇಷ್ಟೇ ಅಲ್ಲ, ಈ ಹಿಂದಿನ ಸ್ವಾತಂತ್ರ್ಯ ಹೋರಾಟದ ತನ್ನ ಸಹಯೋಗಿಗಳು, ಶಿಷ್ಯರು ಆಗಸ್ಟ್ 15 ರಂದು ಪಡೆದ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳುವುದನ್ನು ಕಂಡ ಅವರು ಕಾಂಗ್ರೆಸ್ ತನ್ನನ್ನು ವಿಸರ್ಜಿಸಿಕೊಂಡು ಒಂದು ರಾಜಕೀಯೇತರ ಲೋಕಸೇವಕ ಸಂಘವಾಗಿ ಅರಳಬೇಕು ಎಂದು ಸಲಹೆ ನೀಡಿದರು.

ಇನ್ನು ಕಮ್ಯುನಿಸ್ಟ್ ಪಕ್ಷದ ಮಟ್ಟಿಗೆ ಹೇಳುವುದಾದರೆ, ಅದು ಆರಂಭದಲ್ಲಿ ಜನರ ಸಂತೋಷೋನ್ಮಾದದಲ್ಲಿ ಸೇರಿಕೊಂಡಿತು; ಕೇಂದ್ರ ಸಮಿತಿಯ ಹೇಳಿಕೆಯಲ್ಲಿ ಮೌಂಟ್‌ಬ್ಯಾಟನ್ ತೀರ್ಪು ಒಂದು ಮುನ್ನಡೆ ಎಂದು ವಿಶ್ಲೇಷಿಸಿತು; ಆದರೆ ಬಿಸಿ ಬಿಸಿ ಚರ್ಚೆಯ ನಂತರ ಸ್ವಾತಂತ್ರ್ಯ ನೀಡಿಕೆ ಭಾರತ ಜನಗಳನ್ನು ಮರುಳುಮಾಡುವ ಬ್ರಿಟಿಶ್ ಸಾಮ್ರಾಜ್ಯಶಾಹಿಗಳ ಒಂದು 'ಧೂರ್ತ ಕಸರತ್ತು' ಎಂಬ ತೀರ್ಮಾನಕ್ಕೆ ಅದು ಬಂತು.

ಅಂದರೆ ಮಹಾತ್ಮ ಗಾಂಧಿಯವರು ಆರಂಭದಿಂದಲೇ ಹಾಗೂ ಭಾರತ ಕಮ್ಯುನಿಸ್ಟ್ ಪಕ್ಷ ಕೆಲವು ತಿಂಗಳ ನಂತರ ಆಗಸ್ಟ್ 15, 1947 ರಂದು ಯಾವ ಆಧಾರದ ಮೇಲೆ ಭಾರತ ಸ್ವಾತಂತ್ರ್ಯವಾಯಿತೋ ಆ ಮೌಂಟ್‌ಬ್ಯಾಟನ್ ತೀರ್ಪನ್ನು ಖಂಡಿಸಿದರು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಮುಖಂತ್ವದಲ್ಲಿ ಈ ಬಗ್ಗೆ ಭಿನ್ನಾಭಿಪ್ರಾಯಗಳಿದ್ದರೆ ಭಾರತ ಕಮ್ಯುನಿಸ್ಟ್ ಪಕ್ಷ ತನ್ನ ಆರಂಭದ ಉತ್ಸಾಹವನ್ನು ಸರಿಪಡಿಸಿಕೊಂಡು ಆಗಸ್ಟ್ 15, 1947 ರಂದು ತಂದ ಬದಲಾವಣೆಗಳಿಗೆ ವಿರೋಧದ ನಿಲುವನ್ನು ತಳೆಯಿತು.

ಲೀಗ್ ಇದನ್ನು ಕಂಡರಿಸಿದ ಬಗೆ ಮುಂದೇನಾಯಿತು ಎಂದು ಇಲ್ಲಿ ಪರೀಕ್ಷಿಸಲು ಹೋಗುವುದಿಲ್ಲ. ಆಗ ನಾವು ಕಳೆದ 50 ವರ್ಷಗಳಲ್ಲಿ ಪಾಕಿಸ್ತಾನದ ಬೆಳವಣಿಗೆಗಳನ್ನು ಪರಿಶೀಲಿಸಬೇಕಾಗುತ್ತದೆ. ನಮಗೆ ಇಲ್ಲಿ ಹೆಚ್ಚು ಸಂಬದ್ಧವಾದ ಪ್ರಶ್ನೆಯೆಂದರೆ ಭಾರತದಲ್ಲಿ ಏನಾಯಿತು ಎಂಬುದು.

ಫಲಾನುಭವಿಗಳು ಭಾರತದ ಜನತೆಯಲ್ಲ

ಆಗಸ್ಟ್ 15, 1947 ರಂದು ಗೆದ್ದ ಸ್ವಾತಂತ್ರ್ಯದ ಫಲಾನುಭವಿಗಳು ಇಡೀ ಭಾರತದ ಜನತೆಯಲ್ಲ, ಹೊಸ ಆಳರಸರಾಗಿಬಿಟ್ಟ ಭೂಮಾಲಕರು ಮತ್ತು ಬಂಡವಾಳಶಾಹಿಗಳ ಒಂದು ಸಣ್ಣ ಕೂಟ. ಯಾವ ಆಶಯ ಆಕಾಂಕ್ಷೆಗಳಿಂದ ಜನಸಾಮಾನ್ಯರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದರೋ ಅದು ಈಡೇರಲಿಲ್ಲ. ಬದಲಾಗಿ ಜನಸಾಮಾನ್ಯರು ಹೆಚ್ಚೆಚ್ಚು ನಿರುದ್ಯೋಗ, ಜೀವನಾವಶ್ಯಕ ಸಾಮಗ್ರಿಗಳ ಬೆಲೆಗಳಲ್ಲಿ ಸದಾ ಏರಿಕೆ, ರೈತರು ಮತ್ತು ಇತರ ಉತ್ಪಾದಕರು ಮಾಡುವ ಉತ್ಪನ್ನಗಳಿಗೆ ಸಿಗುವ ಬೆಲೆಗಳಲ್ಲಿ ಇಳಿತ ಇತ್ಯಾದಿಗಳಿಂದ ನರಬೇಕಾಗಿ ಬಂದಿದೆ. ಇಷ್ಟೆ ಅಲ್ಲ, ಹೊಸ ಆಳರಸರಿಂದ ಅಧಿಕಾರ ದುರುಪಯೋಗದಿಂದಾಗಿ ಭ್ರಷ್ಟಾಚಾರ ಮತ್ತು ಸ್ವಜನ ಪಕ್ಷಪಾತ ಅಗಾಧ ಪ್ರಮಾಣದಲ್ಲಿ ಬೆಳೆಯಿತು. ನಿಜವಾಗಿ ಎಂತಹ ಪರಿಸ್ಥಿತಿ ನಿರ್ಮಾಣವಾಗಿದೆಯೆಂದರೆ ಶ್ರೀಮಂತರು ಇನ್ನಷ್ಟು ಶ್ರೀಮಂತರಾಗುತ್ತಿದ್ದಾರೆ, ಬಡವರು ಹೆಚ್ಚೆಚ್ಚು ದರಿದ್ರರಾಗುತ್ತಿದ್ದಾರೆ. ಆದ್ದರಿಂದ ದುಡಿಯುವ ಜನಗಳಲ್ಲಿ ಬಹುಪಾಲು ಆಗಸ್ಟ್ 15, 1947 ರಂದು ಇದ್ದ ಸ್ಥಿತಿಗತಿಗಿಂತಲೂ ಬಹಳ ಹೀನಸ್ಥಿತಿಯಲ್ಲಿ ಈಗಿದ್ದಾರೆ.

ಇನ್ನೊಂದೆಡೆ ಆಗಸ್ಟ್ 15, 1947 ರಂದು ಗೆದ್ದ ರಾಜಕೀಯ ಸ್ವಾತಂತ್ರ್ಯವನ್ನು ಆಳುವ ಪಕ್ಷ ಆರ್ಥಿಕ, ಶಿಕ್ಷಣ, ಸಂಸ್ಕೃತಿ, ಸಾಮಾಜಿಕ ಜೀವನ ಮುಂತಾದವುಗಳನ್ನು ಬೆಳೆಸಲು

ಆಗಸ್ಟ್ ೧೫, ೧೯೪೭ ರಂದು ಗೆದ್ದ ಸ್ವಾತಂತ್ರ್ಯದ ಫಲಾನುಭವಿಗಳು ಇಡೀ ಭಾರತದ ಜನತೆಯಲ್ಲ, ಹೊಸ ಆಳರಸರಾಗಿಬಿಟ್ಟ ಭೂಮಾಲಕರು ಮತ್ತು ಬಂಡವಾಳಶಾಹಿಗಳ ಒಂದು ಸಣ್ಣ ಕೂಟ. ಯಾವ ಆಶಯ ಆಕಾಂಕ್ಷೆಗಳಿಂದ ಜನಸಾಮಾನ್ಯರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದರೋ ಅದು ಈಡೇರಲಿಲ್ಲ.

ಬಳಸಿಕೊಂಡಿತು. ಮೊದಲ ಪ್ರಧಾನ ಮಂತ್ರಿ ಜವಾಹರಲಾಲ ನೆಹರೂ ಈ ದಿಕ್ಕಿನಲ್ಲಿ ಮುತುವರ್ಜಿ ವಹಿಸಿದರು; ಸಮಾಜವಾದಿ ದೇಶಗಳ ನೆರವಿನೊಂದಿಗೆ ಹಾಗೂ ಸಾರ್ವಜನಿಕ ವಲಯದ ವಿಸ್ತರಣೆಯ ಆಧಾರದ ಮೇಲೆ ಅವರು ತ್ವರಿತ ಕೈಗಾರೀಕರಣದ ಒಂದು ಕಾರ್ಯಕ್ರಮವನ್ನು ಆರಂಭಿಸಿದರು.

ಈ ಸ್ವಾತಂತ್ರ್ಯದ 50 ವರ್ಷಗಳಲ್ಲಿ ಭಾರತ ಸರಿಯಾಗಿ ಅಭಿವೃದ್ಧಿ ಹೊಂದದ ಏಶ್ಯಾ-ಆಫ್ರಿಕಾದ ದೇಶಗಳಲ್ಲಿ ಅತ್ಯಂತ ಹೆಚ್ಚು ಅಭಿವೃದ್ಧಿ ಹೊಂದುತ್ತಿರುವ ದೇಶವಾದ ಪ್ರಕ್ರಿಯೆಯನ್ನು ನಾವು ಕಂಡಿದ್ದೇವೆ. ಇದರಿಂದಾಗಿ ನೆಹರೂ ಸರಕಾರಕ್ಕೆ ವಿದೇಶಾಂಗ ಸಂಬಂಧಗಳ ಕ್ಷೇತ್ರದಲ್ಲೂ ಒಂದು ಸಕಾರಾತ್ಮಕ ಪಾತ್ರ ವಹಿಸಲು ಸಾಧ್ಯವಾಯಿತು. ಸಾಮ್ರಾಜ್ಯಶಾಹಿ ಹಾಗೂ ವಸಾಹತುಶಾಹಿ ವಿರುದ್ಧ ವಸಾಹತುಗಳ ಕೋಟ್ಯಾಂತರ ಜನಗಳ ವಿಮೋಚನೆಗಾಗಿ ಹಾಗೂ ವಿಶ್ವಶಾಂತಿಗಾಗಿ ಹೋರಾಡುವ ದೇಶ ಎಂಬ ಸ್ಥಾನಮಾನವನ್ನು ಭಾರತ ನಿಸ್ಸಂದೇಹವಾಗಿಯೂ ಗಳಿಸಿತು. 1950 ರ, 60 ರ, 70 ರ ದಶಕಗಳಲ್ಲಿ ಯಾವುದೇ ಹೊಸದಾಗಿ ಸ್ವತಂತ್ರಗೊಂಡ ದೇಶ ಇದಕ್ಕಿಂತ ಉತ್ತಮ ದಾಖಲೆ ಹೊಂದಲು ಸಾಧ್ಯವಾಗಲಿಲ್ಲ.

70 ರ ನಂತರದ ಅವನತಿ

ಆದರೆ 1970 ರ ಹಾಗೂ 80 ರ ದಶಕಗಳಲ್ಲಿ ಒಂದು ನಿಧಾನವಾದ ಆದರೆ ಖಂಡಿತವಾದ ಅವನತಿ ಕಾಣಬಂತು. ನೆಹರೂ ಸರಕಾರ ಆರಂಭಿಸಿದ ಸಾಮ್ರಾಜ್ಯಶಾಹಿ ವಿರೋಧಿ, ಪ್ರಗತಿಪರ ನೀತಿಗಳ ಸ್ಥಾನಗಳಲ್ಲಿ ಸಾಮ್ರಾಜ್ಯಶಾಹಿಯೊಂದಿಗೆ ಹೆಚ್ಚೆಚ್ಚು ರಾಜಿ ಮಾಡಿಕೊಳ್ಳುವ ನೀತಿಗಳು ಕಾಣಬಂದವು. ಇದು ಕೊನೆಗೆ 1990ರ ದಶಕದ ಆರಂಭದಲ್ಲಿ ನರಸಿಂಹರಾವ್ ಸರಕಾರ ಆರಂಭಿಸಿದ ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣ ಧೋರಣೆಗಳ ಮಟ್ಟವನ್ನು ತಲುಪಿತು.

ಇದರ ಫಲಿತಾಂಶವಾಗಿ ನೆಹರೂ ಯುಗದಲ್ಲಿ ಬಹಳ ಶ್ರಮಪಟ್ಟು ಗಳಿಸಿದ ಸಾಧನೆಗಳನ್ನು ಅಂದರೆ ದೇಶವನ್ನು ಕೈಗಾರೀಕರಣದತ್ತ ಒಯ್ಯುವಲ್ಲಿ ಮೊದಲ ಹೆಜ್ಜೆ ಇಡಲು ನೆರವಾದ ಸಾರ್ವಜನಿಕ ವಲಯದ ಘಟಕಗಳನ್ನು ಕ್ರಮೇಣ ದೇಶೀ-ವಿದೇಶೀ ಗುತ್ತೇದಾರಿಗಳಿಗೆ ಒಪ್ಪಿಸುವ ಕೆಲಸ ಆರಂಭವಾಯಿತು. ನೆಹರೂ ಯುಗದ ಸಾಧನೆಗಳನ್ನೆಲ್ಲಾ ಕಳಕೊಂಡು ಸ್ವತಂತ್ರ ಭಾರತ ವಿಶ್ವಸಂಸ್ಥೆ, ವಿಶ್ವಬ್ಯಾಂಕ್, ಐ.ಎಂ.ಎಫ್., ಅಕ್ವಾಡ್‌ನಂತ್ರ ವಿಶ್ವವ್ಯಾಪಾರ ಸಂಸ್ಥೆ ಇತ್ಯಾದಿ ಅಂತರರಾಷ್ಟ್ರೀಯ ಸಂಸ್ಥೆಗಳ ಮೂಲಕ ವಿಶ್ವ ಸಾಮ್ರಾಜ್ಯಶಾಹಿಯ ಒಂದು ಸಾಮೂಹಿಕ ವಸಾಹತುವಾಗಿ ಮಾರ್ಪಡುವ ಪ್ರಕ್ರಿಯೆಯನ್ನು ಆರಂಭಿಸಲಾಗಿದೆ.

ಆಂತರಿಕ ರಾಜಕೀಯದಲ್ಲಿ ವಿಚ್ಛಿದ್ರಕಾರಿ, ವಿಭಜನಕಾರಿ ಶಕ್ತಿಗಳು ಅಂದರೆ ಜಾತಿವಾದ, ಕೋಮುವಾದ, ಪ್ರಾಂತೀಯುವಾದ, ಸ್ಥಳೀಯುವಾದ ಇತ್ಯಾದಿಗಳು ಅಪಾರ ಪ್ರಮಾಣದಲ್ಲಿ ಬೆಳೆದವು. ಸ್ವಾತಂತ್ರ್ಯ ಹೋರಾಟದ ಮೂಲಕ ಬೆಸೆದ ಭಾರತೀಯ ರಾಷ್ಟ್ರದ ಐಕ್ಯತೆಯನ್ನು ಇವು ಛಿದ್ರಗೊಳಿಸುತ್ತಿವೆ. ಕಾಂಗ್ರೆಸ್ ನಿಧಾನವಾಗಿ ಆದರೆ ಖಂಡಿತವಾಗಿ ಅವನತಿ ಹೊಂದುತ್ತಿದ್ದಂತೆ, ಅದರ ಫಲಿತಾಂಶವಾಗಿ ಎಡ ಒಲವಿನ ಪ್ರಜಾಪ್ರಭುತ್ವವಾದಿ ಶಕ್ತಿಗಳು ಬೆಳೆಯುವ ಬದಲು ಕೋಮುವಾದಿ, ಜಾತಿವಾದಿ ಇತ್ಯಾದಿ ಶಕ್ತಿಗಳು ಬೆಳೆಯಲಾರಂಭಿಸಿದವು. ಬಿಜೆಪಿ ಮತ್ತು ಆರ್.ಎಸ್.ಎಸ್. ಎಷ್ಟು ಸಾಧ್ಯವೋ ಅಷ್ಟು ಇತರ ಶಕ್ತಿಗಳೊಂದಿಗೆ ಸಹಕರಿಸಿಕೊಂಡು ಒಂದು ಪ್ರಧಾನ ರಾಜಕೀಯ ಶಕ್ತಿಯಾಗಿ ದೇಶದ ಆಳುವ ಪಕ್ಷವಾಗುವ ಬೆದರಿಕೆಯೊಡ್ಡಿವೆ.

ಇದಕ್ಕೆದುರಾಗಿ ಕಾಂಗ್ರೆಸ್ಸಿನ ಸರ್ವಾಧಿಕಾರಶಾಹಿತ್ವ ಹಾಗೂ ಬಿಜೆಪಿಯ ಕೋಮುವಾದ ಎರಡನ್ನೂ ವಿರೋಧಿಸು: ಜಾತ್ಯಾತೀತ ಹಾಗೂ ಒಕ್ಕೂಟವಾದೀ ಶಕ್ತಿಗಳೂ ಬೆಳೆಯುತ್ತಿವೆ. ಆದ್ದರಿಂದಲೇ ಎಡ, ಪ್ರಜಾಪ್ರಭುತ್ವವಾದೀ, ಜಾತ್ಯಾತೀತ ಹಾಗೂ ಒಕ್ಕೂಟವಾದಿ ಶಕ್ತಿಗಳಿಗೆ ಬಿಜೆಪಿ ಸರಕಾರವನ್ನು ಕಿತ್ತೆಸೆದು ಸಂಯುಕ್ತ ರಂಗ ಸರಕಾರಕ್ಕೆ ಜನ್ಮ ನೀಡಲು ಸಾಧ್ಯವಾಯಿತು.

ನಿಜ, ಸಂಯುಕ್ತ ರಂಗ ಮತ್ತು ಕೇಂದ್ರದಲ್ಲಿನ ಅದರ ಸರಕಾರ ಒಂದಿಲ್ಲೊಂದು ರೀತಿಯ ಕಷ್ಟಕರ ಪರಿಸ್ಥಿತಿಗಳನ್ನು ಎದುರಿಸಬೇಕಾಗಿ ಬರುತ್ತಿದೆ. ಇದು ಸಹಜ ಕೂಡ. ಏಕೆಂದರೆ ಹಲವು ಪ್ರಶ್ನೆಗಳ ಮೇಲೆ ಪರಸ್ಪರ ಒಂದೇ ಅಭಿಪ್ರಾಯ ಇರದ ವಿಭಿನ್ನ ಪಕ್ಷಗಳಿಂದ ಕೂಡಿದ ರಂಗವಿದು. ಅಲ್ಲದೆ ಈ ಪ್ರತಿಯೊಂದು ಪಕ್ಷದಲ್ಲೂ ವ್ಯೆಯುಕ್ತಿಕ ಹಾಗೂ ಗುಂಪು ಸಮೀಕರಣಗಳ ಸಮಸ್ಯೆಗಳೂ ಇವೆ.

ಆದರೆ ಇವನ್ನೆಲ್ಲಾ ಮೀರಿ ನಿಲ್ಲಲು ಸಾಧ್ಯವಿದೆ; ಎಡ, ಜಾತ್ಯಾತೀತ ಪ್ರಜಾಪ್ರಭುತ್ವವಾದಿ ಹಾಗೂ ಒಕ್ಕೂಟವಾದಿ ಶಕ್ತಿಗಳ ಐಕ್ಯತೆಯನ್ನು ಉಳಿಸಿಕೊಳ್ಳಲು ಇವನ್ನೆಲ್ಲಾ ಮೀರಿ ನಿಲ್ಲಲೇಬೇಕು. ಹೀಗೆ ಸರ್ವಾಧಿಕಾರಿಶಾಹಿ ಕಾಂಗ್ರೆಸ್ ಮತ್ತು ಕೋಮುವಾದಿ ಆರ್.ಎಸ್.ಎಸ್. - ಬಿಜೆಪಿ ಕೂಟದ ವಿರುದ್ಧ ದೃಢ ಹೋರಾಟಗಳಲ್ಲಿ ಈ ಸಂಯುಕ್ತರಂಗದಲ್ಲಿರುವ ಶಕ್ತಿಗಳ ಐಕ್ಯತೆ ನಮ್ಮ ದೇಶ ಸ್ವತಂತ್ರವಾದ 50ನೇ ವಾರ್ಷಿಕೋತ್ಸವದ ವರ್ಷದಲ್ಲಿ ನಾವು ಎದುರಿಸುತ್ತಿರುವ ಪ್ರಧಾನ ರಾಜಕೀಯ ಪ್ರಶ್ನೆ.

○

ಜೂನ್ 7, 1947 ಕೊನೆಯ ಬ್ರಿಟಿಶ್ ವೈಸರಾಯ್ ಮೌಂಟ್ ಬ್ಯಾಟನ್ ರೊಂದಿಗೆ ನೆಹರೂ ಮತ್ತು ಜಿನ್ನಾ- ದೇಶ ವಿಭಜನೆಯ ಯೋಚನೆಯಲ್ಲಿ?



ಸ್ವಾತಂತ್ರ್ಯದ ಸ್ವರ್ಣ ಜಯಂತಿ ಮತ್ತು ಕಾಂಗ್ರೆಸ್

ಸುರ್ಜಿತ್

ಸ್ವಾತಂತ್ರ್ಯ ಸ್ವರ್ಣಜಯಂತಿ ಆಚರಣೆ ಆರಂಭವಾಗುವ ಸ್ವಲ್ಪ ಮೊದಲು ನಡೆದ ದೇಶದ ಪ್ರಧಾನ ಪಕ್ಷ, ಕೇಂದ್ರದಲ್ಲೂ, ರಾಜ್ಯಗಳಲ್ಲೂ ಬಹಳ ಕಾಲ ಅಧಿಕಾರದ ಗುತ್ತೇದಾರಿಕೆ ಅನುಭವಿಸಿದ್ದ ಕಾಂಗ್ರೆಸ್ ಪಕ್ಷದ ಕಲ್ಕತ್ತಾ ಅಧಿವೇಶನ ಆತ್ಮ ವಿಮರ್ಶೆ, ಆತ್ಮ ವಿಶ್ಲೇಷಣೆ ಮಾಡಿಕೊಳ್ಳುತ್ತದೆ, ಒಂದು ಹೊಸ ದಿಕ್ಕು ಹಿಡಿಯುತ್ತದೆ ಎಂಬ ನಿರೀಕ್ಷೆಗಳೆಲ್ಲಾ ಹುಸಿಯಾಗಿವೆ. ಸಾಧನೆಗಳು ಕೇವಲ ತನ್ನದು, ವಿಫಲತೆಗಳೆಲ್ಲಾ ಬೇರೆಯವರದ್ದು ಎಂಬ ಅದರ ನಿಲುವು, ಸ್ವಾತಂತ್ರ್ಯ ಹೋರಾಟದ ಕೀರ್ತಿಯನ್ನೆಲ್ಲಾ ತಾನೇ ಬಾಚಿಕೊಳ್ಳುವ ಅದರ ಹಿಂದಿನ ನಿಲುವಿನ ಮುಂದುವರಿಕೆ ಇವೆ ಅಲ್ಲಿ ಕಂಡುಬಂದದ್ದು.



ಭಾರತ ಸ್ವಾತಂತ್ರ್ಯದ ಸ್ವರ್ಣಜಯಂತಿಯ ಕೆಲವೇ ದಿನಗಳ ಮೊದಲು ಕಲ್ಕತ್ತಾದಲ್ಲಿ ನಡೆದ ಎಐಸಿಸಿ ಅಧಿವೇಶನ ಕಾಂಗ್ರೆಸ್ ಪಕ್ಷಕ್ಕೆ ಸ್ವಾತಂತ್ರ್ಯಕ್ಕಾಗಿ ತ್ಯಾಗ-ಬಲಿದಾನ ಮಾಡಿದವರನ್ನು ನೆನಪಿಸಿಕೊಳ್ಳುವ ಹಾಗೂ ಕಳೆದ 50 ವರ್ಷಗಳ ಪ್ರಗತಿಯನ್ನು ವಿಶ್ಲೇಷಿಸುವ ಒಂದು ಅವಕಾಶವನ್ನು ಒದಗಿಸಿತ್ತು. ಆಗಸ್ಟ್ 8 ರಿಂದ 10 ರ ವರೆಗೆ ನಡೆದ ಆ ಅಧಿವೇಶನ ಒಂದು ರಾಜಕೀಯ ಠರಾವು, ಒಂದು ಆರ್ಥಿಕ ಧೋರಣೆಯ ಠರಾವು, ಒಂದು ಅಂತರ್ರಾಷ್ಟ್ರೀಯ ಠರಾವು ಹಾಗೂ ಒಂದು ಸ್ವರ್ಣ ಜಯಂತಿ ಠರಾವನ್ನು ಅಂಗೀಕರಿಸಿತು.

ಆದರೆ ಇಂತಹ ಒಂದು ಸಂದರ್ಭದಲ್ಲಾದರೂ ಕಾಂಗ್ರೆಸ್ ಪಕ್ಷ ಕ್ಷುಲ್ಲಕ ರಾಜಕೀಯ ಮಾಡುವುದಿಲ್ಲ, ತನ್ನ ಪಕ್ಷಪಾತಪೂರ್ಣ ನಿಲುವು ತೋರಿಸುವುದಿಲ್ಲ ಎಂದು ನಿರೀಕ್ಷಿಸುವುದು ಬಹುಶಃ ಬಹಳ ಮೊದ್ದುತನವಾಗುತ್ತದೆ. ಎಂದಿನಂತೆ ಕಾಂಗ್ರೆಸ್ ಈ ಅಧಿವೇಶನದ ವೇಳೆಯಲ್ಲೂ ಸ್ವಾತಂತ್ರ್ಯ ಹೋರಾಟದ ಇತರ ಪ್ರವಾಹಗಳನ್ನು ನಿರ್ಲಕ್ಷಿಸುವ ತನ್ನ ನಿಲುವನ್ನು ಬಿಡಲಿಲ್ಲ. ಎಐಸಿಸಿ ಅಧಿವೇಶನ ಅಂಗೀಕರಿಸಿದ ನಿರ್ಣಯಗಳು ತರ್ಕಬದ್ಧ ಮೌಲ್ಯಮಾಪನವಾಗಿರದೆ ಆತ್ಮ ಪ್ರಶಂಸೆಯ ಕಸರತ್ತುಗಳಾಗಿಯಷ್ಟೆ ಉಳಿದಿವೆ.

"ಸ್ವರ್ಣಜಯಂತಿ ಠರಾವು" ಎಂಬ ಶಿರೋನಾಮೆ ನೋಡಿ. ಅದರೊಳಗಿರುವ ವಿಷಯಗಳನ್ನು ಓದಿದಾಗ ವಿಚಿತ್ರವೆನಿಸದೆ ಇರದು. ವಾಸ್ತವವಾಗಿ ಈ ನಿರ್ಣಯದಲ್ಲಿ ಆತ್ಮಪ್ರಶಂಸೆಯನ್ನು ಬಿಟ್ಟರೆ ಬೇರೇನೂ ಇಲ್ಲ. ಇದನ್ನು ಓದುವಾಗ ಸ್ವಾತಂತ್ರ್ಯ ಆಂದೋಲನದ ಇತಿಹಾಸ, ಸ್ವತಂತ್ರ ಭಾರತದ ಇತಿಹಾಸ ಎರಡೂ ಕೇವಲ ಕಾಂಗ್ರೆಸ್ಸಿನ ಮತ್ತು ಅದರ ಮುಖಂಡರ ಇತಿಹಾಸದಂತೆ ಕಾಣುತ್ತದೆ. ರಾಷ್ಟ್ರಪಿತ ಹಾಗೂ ಮೊದಲ ಪ್ರಧಾನ ಮಂತ್ರಿಗಳು ತೊಟ್ಟ "ಪ್ರತಿಯೊಂದು ಕಣ್ಣಿನಿಂದ ಪ್ರತಿಯೊಂದು ಕಣ್ಣೀರನ್ನು ಒರೆಸುವ" ಪ್ರತಿಜ್ಞೆಯನ್ನು ಈ ನಿರ್ಣಯ ನೆನಪಿಸಿಕೊಂಡಿದೆ. ಕಾಂಗ್ರೆಸ್ಸಿನ ನಾಲ್ಕೂವರೆ ದಶಕಗಳ ಆಡಳಿತದಲ್ಲಿ ಏನೂ ಆಗಿಲ್ಲವೆಂದೇನೂ ಅಲ್ಲ - ಸಾಕಷ್ಟು ಪ್ರಗತಿ ಆಗಿದೆ - ಆದರೆ ಹೀಗೆ ಪ್ರತಿಯೊಂದು ಕಣ್ಣಿನ ಕಣ್ಣೀರನ್ನು ಒರೆಸಲು ಸಾಧ್ಯವಾಗಿದೆಯೇ? ಸ್ವತಂತ್ರ ಭಾರತದಲ್ಲಿ ಏನನ್ನು ನಿರೀಕ್ಷಿಸಲಾಗಿತ್ತೋ ಅದು ಸಾಧ್ಯವಾಗಿದೆಯೇ? ಈ ಬಗ್ಗೆ ಈ ಠರಾವು ವಿಶ್ಲೇಷಿಸುವುದಿಲ್ಲ. ಸಾಧನೆಗಳ ಕೀರ್ತಿಯೆಲ್ಲಾ ತನಗೆ ಸಲ್ಲುತ್ತದೆ ಎನ್ನುವ ಈ ಪಕ್ಷ ಸೋಲು, ವಿಫಲತೆಗಳಿಗೆ ಇತರರನ್ನು ದೂರುತ್ತದೆ!

ರಾಜಕೀಯ ನಿರ್ಣಯದ ಧಾಟಿಯೂ ಭಿನ್ನವಾಗಿಲ್ಲ. ಬಾಬ್ರಿಮಸೀದಿ ಧ್ವಂಸದ ಬಗ್ಗೆ ಈ ಪಕ್ಷ ಈ ಅಧಿವೇಶನದಲ್ಲಿ ಕ್ಷಮೆ ಕೇಳಬಹುದು ಎಂದು ನಿರೀಕ್ಷಿಸಲಾಗಿತ್ತು. ಆದರೆ ಅದು ಕೇವಲ "ಖೇದ" ವ್ಯಕ್ತಪಡಿಸಿದಯಷ್ಟೆ. ಈ ಖೇದವೂ ಏತಕ್ಕೆ? "ಬಾಬ್ರಿ ಮಸೀದಿಯನ್ನು ರಕ್ಷಿಸುವ ಕಾನೂನಾತ್ಮಕ ಜವಾಬ್ದಾರಿಯನ್ನು ನಿರ್ವಹಿಸಲು ಅಸಮರ್ಥವಾದದ್ದಕ್ಕೆ" ಮಾತ್ರ! ಮಸೀದಿ ಧ್ವಂಸ ಮಾಡಲು ಬಿಟ್ಟೆವು ಅದಕ್ಕಾಗಿ ಕ್ಷಮಿಸಿ ಎಂಬ ಮಾತಿಲ್ಲ. ನರಸಿಂಹರಾಯರ ಗೃಹಮಂತ್ರಿಯಾಗಿದ್ದ ಎಸ್.ಬಿ. ಚವ್ಹಾಣರೇ ಸ್ವತಃ ಆ ಸರಕಾರ ಈ ಧ್ವಂಸ ಕಾರ್ಯದಲ್ಲಿ ಹೇಗೆ ಶಾಮೀಲಾಗಿತ್ತು ಎಂದು ಹೇಳಿದ್ದರಲ್ಲ!

ಈಗ ಪ್ರಧಾನ ಪ್ರಶ್ನೆಗಳಲ್ಲಿ ಒಂದಾಗಿರುವ ಭ್ರಷ್ಟಾಚಾರದ ಬಗ್ಗೆ 20 ಪುಟಗಳ ಠರಾವಿನಲ್ಲಿ ಕೇವಲ ಮೂರು ವಾಕ್ಯಗಳಿವೆ. ಕಾಂಗ್ರೆಸ್ ಸಾರ್ವಜನಿಕ ಜೀವನದಲ್ಲಿ ಋಜುತ್ವ, ಪಾರದರ್ಶಕತೆ ಇರಬೇಕು ಎಂದು ನಂಬುತ್ತದಂತೆ. ಯಾವುದಾದರೂ ಸರಿಯಲ್ಲದ ಕೆಲಸ ನಡೆದಾಗ ಸೂಕ್ತ ಕ್ರಮ ಕೈಗೊಳ್ಳಲು ಕಾಂಗ್ರೆಸ್ ಹಿಂದೆಗೆದಿಲ್ಲ ಎಂಬ ಒಂದು ಸುಳ್ಳು ಹೇಳಿಕೆಯನ್ನು ಅದು ಮಾಡಿದೆ. ಪ್ರತಿಭಟನೆಗಳು ಬಂದಾಗ, ದನಿಗಳನ್ನೆತ್ತಿದಾಗ ಮಾತ್ರವೇ ಏನಾದರೂ ಕ್ರಮ ಕೈಗೊಳ್ಳಲಾಯಿತು ಎಂದು ನಾವು ಸೇರಿಸಬೇಕಷ್ಟೆ.

ಆತ್ಮಪರಿಶೋಧನೆಯ ಬದಲು

ಪರಿಶಿಷ್ಟ ಜಾತಿ, ಪರಿಶಿಷ್ಟ ಬುಡಕಟ್ಟುಗಳ ಜನರ ಪರಿಸ್ಥಿತಿ ಬಗ್ಗೆ ಹೇಳುತ್ತಾ ಅವನ್ನು ಸುಧಾರಿಸಲು ಇನ್ನೂ ಬಹಳಷ್ಟು ಮಾಡಬೇಕಾಗಿದೆ ಎಂದು ಒಪ್ಪಿಕೊಳ್ಳುತ್ತಾ 45 ವರ್ಷಗಳ ಕಾಲ ಅಧಿಕಾರದಲ್ಲಿದ್ದೂ ಮಾಡಲಾಗದ್ದನ್ನ ಮಾಡಲು ಒಂದು ಉನ್ನತ ಅಧಿಕಾರಿಗಳ ಆಯೋಗವನ್ನು ರಚಿಸಬೇಕೆಂಬ ಸಲಹೆ ಮಾಡಿದೆ. ಅದೇ ರೀತಿ ದುರ್ಬಲ ವಿಭಾಗಗಳ ಜನಗಳ ನಿರೀಕ್ಷೆ ಏರುತ್ತಿದ್ದು "ಅವನ್ನು ಈಡೇರಿಸುವಲ್ಲಿ ನಮ್ಮ ವ್ಯವಸ್ಥೆ ವಿಫಲವಾಗಿದೆ" ಎಂದೂ ಹೇಳಿರುವ ಈ ನಿರ್ಣಯ ಇನ್ನೊಂದು ನೀತಿಗೆಟ್ಟ ಮಾತು ಹೇಳಿದೆ-ಮಂಡಲ್ ಆಯೋಗದ ಮನವಿಯನ್ನು ತಾನೇ ಶಾಂತಿಯುತವಾಗಿ ಜಾರಿಗೆ ತಂದಿದ್ದಾಗಿ ಅದು ಹೇಳಿಕೊಂಡಿದೆ! ಕಾಂಗ್ರೆಸ್ ಅಧ್ಯಕ್ಷ ಸೀತಾರಾಂ ಕೇಸರಿ ಅದರಲ್ಲಿ ಪ್ರಮುಖ ಪಾತ್ರ ವಹಿಸಿದರು ಎಂಬುದಾಗಿ ಹೇಳಿಕೊಂಡಿದೆ. ಪೂರ್ಣ ಹತ್ತು ವರ್ಷಗಳ ಕಾಲ ಈ ವರದಿ ಕಾಂಗ್ರೆಸ್ ಸರಕಾರದ ಕಪಾಟುಗಳಲ್ಲಿ ಧೂಳು ತಿನ್ನುತ್ತಾ ಬಿದ್ದಿದ್ದು, ವಿ.ಪಿ.ಸಿಂಗ್ ನೇತೃತ್ವದ ರಾಷ್ಟ್ರೀಯ ರಂಗ ಸರಕಾರ ಅದನ್ನು ಹೊರತೆಗೆದು ಜಾರಿ ಮಾಡುವ ಘೋಷಣೆ ಮಾಡಿದ್ದು, ಇದರ ವಿರುದ್ಧ ನಂತರ ನಡೆದ ಚಳುವಳಿಯಲ್ಲಿ ತನ್ನ ವಂಚಕ ಪಾತ್ರ ಇವನ್ನೆಲ್ಲಾ ಮರೆಮಾಚಲು ಕಾಂಗ್ರೆಸ್ಸಿನ ಈ ಠರಾವು ಪ್ರಯತ್ನಿಸಿದೆ.

ಇಡೀ ದೇಶದಲ್ಲೆಲ್ಲಾ "ಹಾಜರಿ"ರುವ ಏಕೈಕ ರಾಜಕೀಯ ಪಕ್ಷ ಎಂಬ ಕಾಂಗ್ರೆಸ್ಸಿನ ಈ ಠರಾವಿನ ಹೇಳಿಕೆ ನಿಜ. ಆದರೆ ಕ್ರಮೇಣ ತನ್ನನ್ನು ಜನಗಳು ದೂರಮಾಡಲು, ತನ್ನ ಪ್ರಭಾವ, ಬೆಂಬಲ ಇಳಿಮುಖವಾಗಲು ತನ್ನ ಧೋರಣೆಗಳಲ್ಲಿ ಏನು ತಪ್ಪಿತ್ತು ಎಂಬ ಆತ್ಮಪರಿಶೋಧನೆ ಮಾಡಿಕೊಳ್ಳುವಲ್ಲಿ ಈ ಠರಾವು ವಿಫಲವಾಗಿದೆ.

ಈ ರಾಜಕೀಯ ನಿರ್ಣಯ ಎಡ ಪಕ್ಷಗಳ ಮೇಲೆ ತೀವ್ರ ಟೀಕೆ ಮಾಡಿದೆ. ಅದರಲ್ಲೂ ಸಿಪಿಐ(ಎಂ) ಅದರ ಮುಖ್ಯ ಗುರಿ. ಇಲ್ಲೂ ಬುಡವಿಲ್ಲದ ಆಪಾದನೆಗಳನ್ನು ಅದು ಮಾಡಿದೆ. "ಈ ಹಿಂದೆ ನಿರ್ದಿಷ್ಟವಾಗಿ 1977 ಹಾಗೂ

1989 ರಲ್ಲಿ ಎಡಪಕ್ಷಗಳು ಬಿಜೆಪಿಯೊಂದಿಗೆ ಸೇರಿಕೊಳ್ಳಲು ಹಿಂದೆ ಮುಂದೆ ನೋಡಲಿಲ್ಲ" ಎಂದು ಅದು ಹೇಳಿದೆ.

1977 ರಲ್ಲಿ ಬಿಜೆಪಿ ಇರಲಿಲ್ಲ, ಆಗಿದ್ದ ಜನಸಂಘ ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ಕಾಂಗ್ರೆಸ್ಸಿನ ತೀವ್ರ ಧಾಳಿ ನಡೆದ ಸಂದರ್ಭವನ್ನು ಎದುರಿಸಲು ರಚನೆಗೊಂಡ ಜನತಾಪಾರ್ಟಿಯಲ್ಲಿ ವಿಲೀನವಾಗಿತ್ತು. ಸಿಪಿಐ(ಎಂ) ಮಿತ್ರತ್ವ ಹೊಂದಿದ್ದು ಈ ಜನತಾ ಪಾರ್ಟಿಯೊಂದಿಗೆಯೇ ವಿನಃ ಮೊದಲಿದ್ದ ಜನಸಂಘ ಅಥವಾ ಆಗಿನ್ನೂ ಹುಟ್ಟಿರದ ಬಿಜೆಪಿಯೊಂದಿಗಲ್ಲ.

ಇನ್ನು 1989 ರಲ್ಲಂತೂ ಸಿಪಿಐ(ಎಂ) ಮತ್ತು ಇತರ ಎಡಪಕ್ಷಗಳ ದೃಢ ವಿರೋಧದಿಂದಾಗಿಯೇ ಜನತಾದಳ ಬಿಜೆಪಿಯೊಂದಿಗೆ ಮೈತ್ರಿಕೂಟ ಮಾಡಿಕೊಳ್ಳಲಿಲ್ಲ. ಕೇವಲ ಸ್ಥಾನ ಹೊಂದಾಣಿಕೆ ಮಾಡಿಕೊಂಡಿತ್ತು. ಇದರಲ್ಲೂ ಸಿಪಿಐ(ಎಂ) ಅಥವಾ ಎಡಪಕ್ಷಗಳಿಗೂ ಏನೇನೂ ಸಂಬಂಧವಿರಲಿಲ್ಲ. ನಂತರ ರಚನೆಗೊಂಡ ಸರಕಾರದಲ್ಲಿ ಬಿಜೆಪಿ ಹೊರಗಿರಬೇಕಾಗಿ ಬಂದಿದ್ದರೆ ಅದಕ್ಕೆ ಎಡ ಪಕ್ಷಗಳ ದೃಢ ನಿಲುವೇ ಕಾರಣ. ಕಾಂಗ್ರೆಸ್ಸಿನ ರಾಜಕೀಯ ನಿರ್ಣಯ ಇವನ್ನೆಲ್ಲಾ ಮರೆಮಾಚಲು ಪ್ರಯತ್ನಿಸಿದೆ.

''ಕಾಂಗ್ರೆಸ್ ಪಕ್ಷ ತನ್ನ ದೀರ್ಘ ಇತಿಹಾಸದಲ್ಲಿ ಎಂದೂ ಯಾವ ಸಂದರ್ಭದಲ್ಲೂ ಯಾವುದೇ ಕೋಮುವಾದಿ ಪಕ್ಷ ಅಥವಾ ಶಕ್ತಿಯೊಂದಿಗೆ ಸಹಕರಿಸಲು, ಮಿತ್ರತ್ವ ಸ್ಥಾಪಿಸಲು ಪ್ರಯತ್ನಿಸಲಿಲ್ಲ" ಎಂಬುದು ಈ ನಿರ್ಣಯದಲ್ಲಿರುವ ಮತ್ತೊಂದು ಹೇಳಿಕೆ -ಸತ್ಯದಿಂದ ಗಾವುದ-ಗಾವುದ ದೂರವಿರುವ ಮಾತಿದು. ಕೇರಳದ ಮುಸ್ಲಿಂ ಲೀಗ್ ಒಂದು ಕೋಮುವಾದಿ ಪಕ್ಷ. ಅದರೊಂದಿಗೆ ಕಾಂಗ್ರೆಸ್ ಮೈತ್ರಿ ಇತ್ತು, ಈಗಲೂ ಅದು ಮುಂದುವರಿಯುತ್ತಿದೆ. ಆದರೂ ಇಂತಹ ಮಾತು! ಕಳೆದ ಇಪ್ಪತ್ತು ವರ್ಷಗಳಲ್ಲಿ ಎಡರಂಗ ಸರಕಾರ ಜನಗಳ ಮೇಲೆ ಅಸಹನೀಯ ಸಂಕಟಗಳನ್ನು ಹೇರಿದೆಯಂತೆ! ಆದರೂ ಎಡರಂಗ ಸರಕಾರ ಸತತವಾಗಿ ಚುನಾವಣೆಗಳಲ್ಲಿ ಗೆದ್ದು ಬರುತ್ತಿದೆ, ಈಗಲೂ ಅಧಿಕಾರದಲ್ಲಿದೆ, ಏಕೆ ಎಂದು ಈ ನಿರ್ಣಯವನ್ನು ಅಂಗೀಕರಿಸಿದವರು ಯೋಚಿಸಿದಂತೆಯೇ ಇಲ್ಲ.

ಭೂಸುಧಾರಣೆಯ ಮಾತು ಹೇಳುವಾಗಲಂತೂ ಕಾಂಗ್ರೆಸ್ಸಿನ ಗೋಸುಂಬೆತನ ಬಟ್ಟಬಯಲಾಗುತ್ತದೆ. ''ಉಳುವವನೇ ಭೂಮಿಯ ಒಡೆಯನೂ ಆಗಿದ್ದಾನೆ" ಎಂಬ ಸುಳ್ಳು ಹೇಳಿಕೆ ನೀಡುವ ಠರಾವಿನಲ್ಲೇ "ಭೂಸುಧಾರಣೆಯ ಪ್ರಕ್ರಿಯೆ ಇನ್ನೂ ಸಂಪೂರ್ಣವಾಗಿಲ್ಲ, ಅದರ ಯಶಸ್ವೀ ಜಾರಿಯಲ್ಲಿ ವಿವಿಧ ಎಡರು-ತೊಡರುಗಳನ್ನು ಹಾಕಲಾಗಿದೆ'' ಎನ್ನಲಾಗಿದೆ! ಈ 'ಎಡರು-ತೊಡರು'ಗಳೇನು, ಅವು ನಿಜವಾಗಿ ಆ ಪಕ್ಷದ ಒಳಗಿಂದಲೇ ಬಂದ ಒತ್ತಡಗಳಲ್ಲವೇ, ಇದರಿಂದಾಗಿಯೇ ನಾಲ್ಕೂವರೆ ದಶಕಗಳ ಕಾಲ ಅಧಿಕಾರದಲ್ಲಿದ್ದರೂ ಭೂಸುಧಾರಣೆಗಳನ್ನು ಜಾರಿಗೆ ತರಲಾಗಲಿಲ್ಲ ಎಂದು ಒಪ್ಪಿಕೊಳ್ಳುವ ನೇರನಡೆಯನ್ನು ಕಾಂಗ್ರೆಸ್ಸಿನಿಂದ ನಿರೀಕ್ಷಿಸಬಹುದೇ? ಎಡಶಕ್ತಿ ಬಲಿಷ್ಠವಾಗಿರುವ ಪಶ್ಚಿಮಬಂಗಾಳದಂತ ರಾಜ್ಯಗಳಲ್ಲಿ ಮಾತ್ರ ಭೂಸುಧಾರಣೆಯನ್ನು ಯಶಸ್ವಿಯಾಗಿ ಜಾರಿ ಮಾಡಲಾಗಿದೆಯೇಕೆ?

"ಭಾರತದ ಎಲ್ಲಾ ಭಾಗಗಳಿಂದ ಜನರನ್ನು ಒಟ್ಟು ಸೇರಿಸಿ ಅವರನ್ನು ಈಗಿನ ಹತಾಶೆ ಮತ್ತು ವಿಫಲತೆಯ ಭಾವನೆಯಿಂದ ಹೊರತರಲು ಒಂದು ಚೈತನ್ಯ ಹಾಗೂ ಸ್ಪಷ್ಟ ಕಣ್ಣೋಟ ನೀಡಬಲ್ಲ ಏಕೈಕ ಪಕ್ಷ ಕಾಂಗ್ರೆಸ್" ಎಂದು ಈ ಠರಾವು ಹೇಳಿಕೊಂಡಿದೆ. ಆದರೆ ಆ ವಿಫಲತೆಗಳ, ಹತಾಶೆಯ ಕಾರಣಗಳ ಬಗ್ಗೆ ಆತ್ಮ ಪರಿಶೋಧನೆ ಮಾಡಿಕೊಳ್ಳದೆ ಇದನ್ನು ಮಾಡಲು ಸಾಧ್ಯವೇ?



ಕಾಂಗ್ರೆಸ್ಸಿನ ಇತ್ತೀಚಿನ ಕಲ್ಕತ್ತಾ ಅಧಿ ವೇಶನದ ಒಂದು ದೃಶ್ಯ. ವೇದಿಕೆಯ ಮೇಲೆ ಮುಖಂಡರು. ಕೆಳಗೆ ಆರಾಮವಾಗಿ ಕಾಲು ಚಾಚಿ ಅನಾಸಕ್ತಿ ಪ್ರದರ್ಶಿಸುತ್ತಿರುವ ಪ್ರತಿನಿಧಿಗಳು - ಈ ಪಕ್ಷದ ವೈಭವದ ದಿನಗಳು ಮತ್ತೆ ಬರಬಲ್ಲವೇ?

''ಭಾರತದ ಎಲ್ಲಾ ಭಾಗಗಳಿಂದ ಜನರನ್ನು ಒಟ್ಟು ಸೇರಿಸಿ ಅವರನ್ನು ಈಗಿನ ಹತಾಶೆ ಮತ್ತು ವಿಫಲತೆಯ ಭಾವನೆಯಿಂದ ಹೊರತರಲು ಒಂದು ಚೈತನ್ಯ ಹಾಗೂ ಸ್ಪಷ್ಟ ಕಣ್ಣೋಟ ನೀಡಬಲ್ಲ ಏಕೈಕ ಪಕ್ಷ ಕಾಂಗ್ರೆಸ್'' ಎಂದು ಈ ಠರಾವು ಹೇಳಿಕೊಂಡಿದೆ. ಆದರೆ ಆ ವಿಫಲತೆಗಳ, ಹತಾಶೆಯ ಕಾರಣಗಳ ಬಗ್ಗೆ ಆತ್ಮ ಪರಿಶೋಧನೆ ಮಾಡಿಕೊಳ್ಳದೆ ಇದನ್ನು ಮಾಡಲು ಸಾಧ್ಯವೇ?

ಪಾಠ ಕಲಿತಿಲ್ಲ

ಆರ್ಥಿಕ ಠರಾವಿನಲ್ಲಂತೂ ಈ ಪಕ್ಷ ತಾನು ಅನುಸರಿಸಿಕೊಂಡು ಬಂದ ಧೋರಣೆಗಳನ್ನು ಸಮರ್ಥಿಸಿಕೊಂಡಿದೆ. 1991 ಚುನಾವಣೆಗಳಲ್ಲಿ ಅನುಭವಿಸಿದ ಶೋಚನೀಯ ಸೋಲಿನಿಂದ ಅದು ಏನೇನೂ ಪಾಠ ಕಲಿತಂತಿಲ್ಲ. ನರಸಿಂಹರಾಯರ ಅಡಿಯಲ್ಲಿ ವಿಶ್ವಬ್ಯಾಂಕ್-ಐಎಂಎಫ್ ನಿರ್ದೇಶನದಂತೆ ಅನುಸರಿಸಿದ ಆರ್ಥಿಕ ನೀತಿಗಳನ್ನು ಈ ಠರಾವಿನಲ್ಲಿ ಹೊಗಳಲಾಗಿದೆ. ಈ ನೀತಿಗಳು ದೇಶದ ಕೈಗಾರಿಕೆಗಳ ಬೆಳವಣಿಗೆಯ ದಾರಿಯನ್ನು ಮೇಲೆತ್ತಿವೆಯಂತೆ! ಇದರರ್ಥ ಭಾರತದ ಜನ ಸಮೂಹಗಳ ಮೇಲೆ ಆ ನೀತಿಗಳು ಹೊರಿಸಿದ ಸಂಕಷ್ಟಗಳ ಬಗ್ಗೆ ಯೋಚಿಸುವುದೂ ಈ ಕಾಂಗ್ರೆಸ್ಸಿಗೆ ಅನಗತ್ಯವಾಗಿದೆಯೇ? ಸ್ವಾವಲಂಬನೆಯ ಗುರಿಯನ್ನು ಬಿಟ್ಟುಕೊಡಲಾಗಿದೆ ಎಂಬ ಅಂಶವನ್ನು ವಿದೇಶೀ ಬಂಡವಾಳ ಹಾಗೂ ಹೂಡಿಕೆಯ ಮಾತುಗಳ ಹಿಂದೆ ಮರೆಮಾಚಲಾಗಿದೆ. ಈ ನಿರ್ಣಯ ಸಾರ್ವಜನಿಕ ವಲಯದ ಪಾತ್ರವನ್ನು ಹೀಗಳೆದಿರುವ ರೀತಿಯನ್ನು ನೋಡಿ -"ಸಾರ್ವಜನಿಕ ವಲಯ ನಮ್ಮ ಕೈಗಾರಿಕಾ ವಲಯದ ಆರಂಭಿಕ ಹಂತಗಳಲ್ಲಿ ಒಂದು ಬಹಳ ನಿರ್ಣಾಯಕ ಪಾತ್ರ ವಹಿಸಿತು. ...... ದುರದೃಷ್ಟವಶಾತ್ ಕೇಂದ್ರ ಮತ್ತು ರಾಜ್ಯ ಎರಡರಲ್ಲೂ ಸಾರ್ವಜನಿಕ ವಲಯ ನೀಡುವ ಪ್ರತಿಫಲ ಅತ್ಯಲ್ಪ" ಎಂದಿದೆ ಈ ಠರಾವು. ಆದರೆ ಸಾರ್ವಜನಿಕ ವಲಯವನ್ನು ನಿರ್ಮಿಸಿದ್ದು ಲಾಭ ತರುವ ಸಂಸ್ಥೆಗಳೆಂದು ಅಲ್ಲ, ದೇಶವನ್ನು ಕಟ್ಟುವ ಸಂಸ್ಥೆಗಳೆಂದು ಕಾಂಗ್ರೆಸ್ಸಿಗೆ ಮರೆತುಹೋಗಿದೆಯೇ? ದೇಶ ಕಟ್ಟುವ ಕೆಲಸವನ್ನು ಅವು ಚೆನ್ನಾಗಿಯೇ, ಯಶಸ್ವಿಯಾಗಿಯೇ ಮಾಡಿವೆ. ಅಪಾರ ಲಾಭ ತರುವ ದೊಡ್ಡ ಸಾರ್ವಜನಿಕ ವಲಯದ ಉದ್ದಿಮೆಗಳೂ ಇವೆ. ಈಗ ಮಾರುತ್ತಿರುವುದು ನಷ್ಟ ಮಾಡುವ ಘಟಕಗಳನ್ನಲ್ಲ, ಅಪಾರ ಲಾಭ ತರುವ ಉದ್ದಿಮೆಗಳನ್ನೇ. ಅಂದರೆ ವಾಸ್ತವವಾಗಿ ಸಾರ್ವಜನಿಕ ವಲಯವನ್ನು ಈ ರೀತಿ ತೆಗಳುವುದು ಅದನ್ನು ಖಾಸಗೀಕರಿಸುವ ನೆಪಕ್ಕಾಗಿ

ಮಾತ್ರ. ಕಾಂಗ್ರೆಸ್ 1991 ರಿಂದ ಈ ನೀತಿಯನ್ನು ಪ್ರತಿಪಾದಿಸಲಾರಂಭಿಸಿತು. ಈಗಲೂ ಅದನ್ನೇ ಮುಂದುವರೆಸಿದೆ.

ಈ ಠರಾವಿನಲ್ಲಿ ಕಾರ್ಮಿಕರ ಹಿತಾಸಕ್ತಿಗಳನ್ನು ರಕ್ಷಿಸುವ ಮಾತಿದೆ. ಆದರೆ ಹೇಗೆ? 'ರಾಷ್ಟ್ರೀಯ ನವೀಕರಣ ನಿಧಿ' ಯಿಂದ ಸಾಕಷ್ಟು ಸಂಪನ್ಮೂಲ ಪಡೆದು ಈ ನೀತಿಗಳಿಂದ ತೊಂದರೆ ಪಡುವ ಕಾರ್ಮಿಕರಿಗೆ ಪರಿಹಾರ ನೀಡುವ ಮಾತು, ಬಾಲ ಕಾರ್ಮಿಕರ ಬಗ್ಗೆ ಒಂದು ವಾಕ್ಯ ಬಿಟ್ಟರೆ ಕಾರ್ಮಿಕರ ಜೀವನವನ್ನು ಸುಧಾರಿಸುವ ಬಗ್ಗೆ ಬೇರೇನೂ ಅಲ್ಲ. ಕಾಂಗ್ರೆಸ್‌ನ ಮಟ್ಟಿಗೆ ಕಾರ್ಮಿಕರ ಹಿತಾಸಕ್ತಿ ರಕ್ಷಿಸುವ ಕೆಲಸ ಇಷ್ಟೇನೇ?

ಅಂತರ್‍ರಾಷ್ಟ್ರೀಯ ಠರಾವಿನಲ್ಲೂ ಇತರ ಮೂರು ಠರಾವುಗಳಂತೆ ಆತ್ಮ ಪ್ರಶಂಸೆಯಷ್ಟೇ ತುಂಬಿಕೊಂಡಿದೆ. ಈ ಹಿಂದೆ ಭಾರತ ಅಂತರ್‍ರಾಷ್ಟ್ರೀಯ ವ್ಯವಹಾರಗಳಲ್ಲಿ ವಹಿಸಿದ ಪಾತ್ರವನ್ನು ಇತ್ತೀಚೆಗೆ ಏಕೆ ವಹಿಸಲಾಗುತ್ತಿಲ್ಲ, ಸಾಮ್ರಾಜ್ಯಶಾಹಿ ಒತ್ತಡಗಳನ್ನು ಏಕೆ ಎದುರಿಸಲಾಗುತ್ತಿಲ್ಲ ಎಂಬ ಪ್ರಶ್ನೆಯನ್ನೇ ಅದು ಬದಿಗೆ ತಳ್ಳಿದೆ. ನಮ್ಮ ನೆರೆ ದೇಶಗಳೊಂದಿಗೆ ಪರಿಸ್ಥಿತಿ ಸುಧಾರಿಸಿದ್ದು ಸಂಯುಕ್ತ ರಂಗ ಸರಕಾರ ಬಂದ ಮೇಲೆ ಎಂಬುದನ್ನು ಅದು ಒಪ್ಪಿಕೊಳ್ಳಲು ಸಿದ್ಧವಿಲ್ಲ-ನಿಜ, ಕಾಂಗ್ರೆಸ್ ಪಕ್ಷ ಭಾರತ ಅಲಿಪ್ತ ನೀತಿಯನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿತ್ತು. ಆದರೆ ಅದು ಆಗ ಭಾರತೀಯರಲ್ಲಿದ್ದ ಸಾಮ್ರಾಜ್ಯಶಾಹಿ-ವಿರೋಧಿ ಭಾವನೆಗಳ ಪ್ರತಿಫಲನವೂ ಆಗಿತ್ತು. ಆರ್ಥಿಕದ 'ಉದಾರೀಕರಣ'ದೊಂದಿಗೆ ವಿದೇಶಾಂಗ ನೀತಿಯ ಈ ದಿಕ್ಕು ಕೂಡಾ ಆಳುವ ವರ್ಗಗಳ ಹಿತಾಸಕ್ತಿಗಳಿಗೆ ಅಗತ್ಯಗಳಿಗನುಗುಣವಾಗಿ ಬದಲಾಯಿತು.

ಕೇವಲ ಶಬ್ದಾಡಂಬರ

ಆರಂಭದಲ್ಲೇ ಹೇಳಿದಂತೆ ಕಾಂಗ್ರೆಸ್ಸಿನ ಇತ್ತೀಚಿನ ಕಲ್ಕತ್ತಾ ಅಧಿವೇಶನದ 'ಸ್ವರ್ಣಜಯಂತಿ ಠರಾವು' ಹಾಗೂ ಇತರ ಮೂರು ಠರಾವುಗಳು ಕೇವಲ ಶಬ್ದಾಡಂಬರದ ಠರಾವುಗಳು. ಆದರೆ ಅವುಗಳ ದಿಶಾಹೀನತೆ ಕಾಂಗ್ರೆಸ್ ತನ್ನ ಹಿಂದಿನ ತಪ್ಪುಗಳಿಂದ ಕಲಿಯಲು ಸಿದ್ಧವಿಲ್ಲ ಎಂಬುದನ್ನು ತೋರಿಸುತ್ತದಷ್ಟೆ. ತಪ್ಪುಗಳನ್ನೇ ಒಪ್ಪಿಕೊಳ್ಳದಿರುವಾಗ ಅವನ್ನು ತಿದ್ದಿಕೊಳ್ಳಲು ಪ್ರಶ್ನೆಯೆಲ್ಲಿ? ಸಹಜವಾಗಿಯೇ ಈ ಅಧಿವೇಶನದಲ್ಲಿ ಭಾಗವಹಿಸಿದ ಪ್ರತಿನಿಧಿಗಳು ಇವೆಲ್ಲದರಲ್ಲಿ ಆಸಕ್ತಿಯನ್ನೇನೂ ತೋರಲಿಲ್ಲ.

ಸ್ವಾತಂತ್ರ್ಯದ 50ನೇ ವಾರ್ಷಿಕೋತ್ಸವದ ಹಿನ್ನೆಲೆಯಲ್ಲಿ ನಡೆದ ಈ ಅಧಿವೇಶನದಲ್ಲಿ ದೇಶದ ಈ ಪ್ರಧಾನ ಪಕ್ಷ, ಕೇಂದ್ರದಲ್ಲೂ, ರಾಜ್ಯಗಳಲ್ಲೂ ಬಹಳ ವರ್ಷಗಳ ಕಾಲ ಅಧಿಕಾರದ ಗುತ್ತೇದಾರಿಕೆ ಅನುಭವಿಸಿದ್ದ ಈ ಪಕ್ಷ ಏಕೆ ತ್ವರಿತವಾಗಿ ನೆಲೆ ಕಳೆದುಕೊಳ್ಳುತ್ತಿದೆ, ಏಕೆ ಅಂಚಿಗೆ ದೂಡಲ್ಪಟ್ಟಿದೆ ಎಂಬುದರ ವಿಶ್ಲೇಷಣೆ, ಮೌಲ್ಯಮಾಪನ ನಡೆಯುತ್ತದೆ, ಆ ಪಕ್ಷಕ್ಕೆ ಒಂದು ಹೊಸದಿಕ್ಕು ನೀಡುತ್ತದೆ ಎಂದು ಸಹಜವಾಗಿಯೇ ನಿರೀಕ್ಷಿಸಲಾಗಿತ್ತು. ಆದರೆ ಅಲ್ಲಿ ಕಂಡುಬಂದದ್ದು ಸಾಧನೆಗಳು ಕೇವಲ ತನ್ನದು, ವಿಫಲತೆಗಳೆಲ್ಲಾ ಬೇರೆಯವರದ್ದು ಎಂಬ ನಿಲುವು. ಸಮ್ಮಿಶ್ರ ಸರಕಾರಗಳ ಯುಗ ಆರಂಭವಾಗಿದೆ ಎಂಬ ಮಾತಿನ ಬಗ್ಗೆ ಅದು ಸಿಡಿಮಿಡಿಗೊಳ್ಳುತ್ತದೆ. ಅವು ನಡೆಯಲಾರವು ಎಂದು ಹೇಳುತ್ತಿದೆ. ಆದರೆ ಪಶ್ಚಿಮ ಬಂಗಾಳದಲ್ಲಿ ಕಳೆದ 20 ವರ್ಷಗಳಲ್ಲಿ ಅದು ನಡೆದಿದೆ, ಕೇರಳದಲ್ಲೂ ಎಲ್.ಡಿ.ಎಫ್. ಆಗಲೀ, ಕಾಂಗ್ರೆಸ್ ನೇತೃತ್ವದ ಯು.ಡಿ.ಎಫ್. ಆಗಲಿ ಸಮ್ಮಿಶ್ರ ಕೂಟಗಳು ಎಂಬುದನ್ನು ಅದು ಮರೆತಂತಿದೆ. ಹೇಗೋ ಮತ್ತೆ ತನ್ನ ಹಿಂದಿನ ವೈಭವದ ದಿನಗಳು ಮರಳಿ ಬರಲಿವೆ ಎಂಬ ಆಸೆಗೆ ಅದು ಆತುಕೊಂಡಿದೆ.


ಒಟ್ಟಿನಲ್ಲಿ ಈ ಕಾಂಗ್ರೆಸ್ ಅಧಿವೇಶನ ಎಂದಿನಂತೆ ಸ್ವಾತಂತ್ರ್ಯ ಹೋರಾಟದ ಕೀರ್ತಿಯನ್ನೆಲ್ಲಾ ತಾನೇ ಬಾಚಿಕೊಂಡು ಭಗತ್ ಸಿಂಗ್, ಚಂದ್ರಶೇಖರ್ ಅಝಾದ್, ವಿಭಿನ್ನ ಕ್ರಾಂತಿಕಾರಿ ಗುಂಪುಗಳು, ದೇಶದ ವಿಭಿನ್ನ ಭಾಗಗಳಲ್ಲಿ ರೈತರು-ಕಾರ್ಮಿಕರ ಹೋರಾಟಗಳು, ಅಝಾದ್ ಹಿಂದ್ ಸೇನೆಯ ಸಾಹಸ, ನಾವಿಕರ ಬಂಡಾಯ, ಅಗಣಿತ ಅನಾಮಧೇಯ ದೇಶಪ್ರೇಮಿಗಳ ತ್ಯಾಗ-ಬಲಿದಾನಗಳನ್ನೆಲ್ಲಾ ಹಿನ್ನೆಲೆಗೆ ಸರಿಸುವ ಪ್ರಯತ್ನ ಮಾಡಿದೆ. ಸ್ವರ್ಣ ಜಯಂತಿಯಂತಹ ಸಂದರ್ಭದಲ್ಲಾದರೂ ಕಾಂಗ್ರೆಸ್ ಈ ಎಲ್ಲಾ ಪ್ರವಾಹಗಳಿಗೆ ಇತಿಹಾಸದಲ್ಲಿ ಸಲ್ಲತಕ್ಕ ಸ್ಥಾನವನ್ನು ಕೊಡುತ್ತದೆ ಎಂಬ ನಿರೀಕ್ಷೆ ಸುಳ್ಳಾಗಿದೆ.

ಕೋಮುವಾದ ಮತ್ತಿತರ ವಿಚ್ಛಿದ್ರಕಾರಿ ಪ್ರವೃತ್ತಿಗಳನ್ನು ನಿಜವಾಗಿಯೂ ಎದುರಿಸಬೇಕೆಂದಿದ್ದರೆ ಅದು ಜನಗಳಲ್ಲಿ ಸ್ವಾತಂತ್ರ್ಯ ಆಂದೋಲನದ ದೇಶಪ್ರೇಮಿ ಪರಂಪರೆಗಳನ್ನು ಪುನರುಜ್ಜೀವನಗೊಳಿಸುವುದರಿಂದ, ಮತ್ತೆ ಜಾತ್ಯಾತೀತ ಮೌಲ್ಯಗಳನ್ನು ಪೋಷಿಸುವುದರಿಂದ ಮಾತ್ರ ಸಾಧ್ಯ. ಸ್ವಾತಂತ್ರ್ಯ ಆಂದೋಲನದಲ್ಲಿ ಕಾಂಗ್ರೆಸ್ ಪ್ರಧಾನ ಪಾತ್ರ ವಹಿಸಿತ್ತಾದರೂ ಇತರ ರಾಜಕೀಯ ಪಕ್ಷಗಳು, ಶಕ್ತಿಗಳು ವಹಿಸಿದ ಪಾತ್ರವನ್ನು ಕಡೆಗಣಿಸಲಾಗದು. ಅದನ್ನು ಮಾನ್ಯ ಮಾಡಲೇಬೇಕು, ಇತಿಹಾಸವನ್ನು ವಿಕೃತಗೊಳಿಸುವುದರಿಂದ, ಆತ್ಮ ಪ್ರಶಂಸೆಯಿಂದ ಕಾಂಗ್ರೆಸ್ ತನ್ನ ಈಗಿನ ದುಸ್ಥಿತಿಯಿಂದ ಹೊರ ಬರಲು ಸಾಧ್ಯವಿಲ್ಲ. ತನ್ನ ದೌರ್ಬಲ್ಯಗಳ, ಕೊರತೆಗಳ ಆತ್ಮ ವಿಮರ್ಶೆ ಹಾಗೂ ಅದನ್ನು ಮೀರಿನಿಲ್ಲುವ ಕ್ರಮಗಳು ಈಗ ಅಗತ್ಯ. ಆದರೆ ಕಾಂಗ್ರೆಸ್ ಪಕ್ಷಕ್ಕೆ ಅದನ್ನು ಮಾಡುವ ಆಶಯವೂ ಇದ್ದಂತಿಲ್ಲ.

○

ಸ್ವಾತಂತ್ರ್ಯ ಹೋರಾಟದಲ್ಲಿ ಕಮ್ಯುನಿಸ್ಟರು

ಜ್ಯೋತಿಬಸು



ಸ್ವಾತಂತ್ರ್ಯ ಹೋರಾಟದಲ್ಲಿ ಕಮ್ಯುನಿಸ್ಟರು ಎಲ್ಲಿದ್ದರು ? ಇದು ಈಗ ಕೆಲವರು ಕೇಳುವ ಪ್ರಶ್ನೆ-ಸ್ವಾತಂತ್ರ್ಯ ಸಮರ ಕಾಂಗ್ರೆಸ್ಸಿನ ಗುತ್ತಿಗೆ ಎಂಬ ಪ್ರಚಾರವನ್ನು ಕಣ್ಣು ಮುಚ್ಚಿ ನಂಬುವವರ ಅಥವಾ ಇತಿಹಾಸದ ಬಗ್ಗೆ ಅಜ್ಞಾನ ತುಂಬಿಕೊಂಡವರ ಪ್ರಶ್ನೆ ಇದು ಎಂದು ಖಂಡಿತವಾಗಿ ಹೇಳಬಹುದು. ಕಮ್ಯುನಿಸ್ಟರು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ರಾಷ್ಟ್ರೀಯವಾದಿ ಮುಖ್ಯಧಾರೆಯನ್ನು ಹಾಗೂ ಎಡ-ಪ್ರೇರಿತ ಪ್ರತಿಭಟನಾ ರಾಜಕೀಯದ ಧಾರೆಯನ್ನು ಒಂದುಗೂಡಿಸಲು ಪ್ರಯತ್ನಿಸುವ ಮೂಲಕ ಒಂದು ಮಹತ್ವದ ಪಾತ್ರ ವಹಿಸಿದರು ಎಂಬುದು ಕಮ್ಯುನಿಸ್ಟ್ ವಿರೋಧಿ ಪೂರ್ವಾಗ್ರಹ ಪೀಡಿತರಲ್ಲದವರೆಲ್ಲರೂ ಕಾಣಬಹುದಾದ ಐತಿಹಾಸಿಕ ಸತ್ಯ.

ನಾವೀಗ ಬ್ರಿಟಿಶ್ ವಸಾಹತುಶಾಹಿಯ ಸಂಕೋಲೆಯಿಂದ ಸ್ವಾತಂತ್ರ್ಯದ 50 ವರ್ಷಗಳನ್ನು ಆಚರಿಸುತ್ತಿದ್ದೇವೆ. ಆಗಸ್ಟ್ 15, 1947 ಭಾರತೀಯ ರಾಷ್ಟ್ರೀಯ ವಿಮೋಚನೆಯ ಒಂದು ದೀರ್ಘ ಹಾಗೂ ದುರ್ಗಮ ಅನ್ವೇಷಣೆಯ ಚರಮ ಬಿಂದುವಾಗಿತ್ತು. ರಾಷ್ಟ್ರೀಯ ಆಂದೋಲನಗಳ ಬಗ್ಗೆ ಇತಿಹಾಸಕಾರರೂ, ರಾಜಕೀಯ ಕಾರ್ಯಕರ್ತರೂ ಸಾಕಷ್ಟು ಬರೆದಿದ್ದಾರೆ. ಆದರೆ ಸ್ವಾತಂತ್ರ್ಯ ಹೋರಾಟದ ವಿವಿಧ ಮುಖಗಳ ಒಂದು ಸಂಪೂರ್ಣ ಚಿತ್ರ ನಮಗಿನ್ನೂ ಸಿಕ್ಕಿಲ್ಲ. ಅಧಿಕಾರದ ಹಸ್ತಾಂತರದ 50ನೇ ವಾರ್ಷಿಕೋತ್ಸವ ಈ ಆಚರಣೆ ನಮ್ಮ ವಸಾಹತುಶಾಹೀ - ವಿರೋಧಿ ಹೋರಾಟವನ್ನು ಮತ್ತೆ ನೆನಪಿಸಿಕೊಳ್ಳಲು ಒಂದು ಹೊಸ ಅವಕಾಶವನ್ನು ಒದಗಿಸಿಕೊಡಬೇಕು. ಅದೇ ವೇಳೆಗೆ ಕಳೆದ 50 ವರ್ಷಗಳ ನಮ್ಮ ಸ್ವತಂತ್ರ ಅಸ್ತಿತ್ವದಲ್ಲಿ ನಾವೇನು ಸಾಧಿಸಿದ್ದೇವೆ ಎಂದು ವಿಶ್ಲೇಷಿಸಲೂ ಹಿಂಜರಿಯಬಾರದು. ಸ್ವಾತಂತ್ರ್ಯದ ಹೋರಾಟವನ್ನು ಕಂಡ, ಯೂನಿಯನ್ ಜಾಕ್ ಕೆಳಗಿಳಿದು ಅದರ ಆಳ್ವಿಕೆ ಕೊನೆಗೊಂಡಾಗ ಒಂದು ನ್ಯಾಯಪೂರ್ಣ ಮತ್ತು ಸಮಾನತೆಯ ಸಮಾಜ ಬರುತ್ತದೆಂಬ ಆಸೆಯಿಂದ ಅದರಲ್ಲಿ ಭಾಗವಹಿಸಿದ ನಮ್ಮಂತವರಿಗೆ ಇದು ಬಹಳ ಮಹತ್ವಪೂರ್ಣ.

ಆರಂಭದ ಘಟ್ಟ-ಆರ್ಥಿಕ ರಾಷ್ಟ್ರೀಯವಾದ

ಸಾಮಾನ್ಯವಾಗಿ 1885 ರಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಯೊಂದಿಗೆ ಭಾರತದ ರಾಷ್ಟ್ರೀಯ ಆಂದೋಲನ ಆರಂಭವಾಯಿತು ಎನ್ನಲಾಗುತ್ತದೆಯಾದರೂ ವಾಸ್ತವವಾಗಿ ಬ್ರಿಟಿಶ್ ವಸಾಹತುಶಾಹಿ ಒಳನುಗ್ಗಿದ ಆರಂಭದ ಹಂತದಲ್ಲೇ ಜನಗಳ ಪ್ರತಿಭಟನೆ ಆರಂಭವಾಗಿತ್ತು. ಬುಡಕಟ್ಟು ಜನಗಳ ಬಂಡಾಯ, ಅಲ್ಲಲ್ಲಿ ಭುಗಿಲೆದ್ದ ರೈತರ ಪ್ರತಿಭಟನೆಗಳು ಇದಕ್ಕೆ ಉದಾಹರಣೆಗಳು. ಕಾರ್ಲ್‌ಮಾರ್ಕ್ಸ್ ಮೊದಲ ಭಾರತೀಯ ಸ್ವಾತಂತ್ರ್ಯ ಸಂಗ್ರಾಮ ಎಂದು ಕರೆದ 1857 ರ ಬಂಡಾಯ ಭಾರತದಲ್ಲಿ ಬ್ರಿಟಿಶ್ ಅಧಿಕಾರಕ್ಕೆ ಮೊದಲ ದೊಡ್ಡ ಆಘಾತ ನೀಡಿತು. ಕಾಂಗ್ರೆಸ್ಸಿಗಿಂತ ಮೊದಲಿನ ಅವಧಿಯಲ್ಲಿಯೂ "ಸಂಘಗಳ ರಾಜಕೀಯ"ವೂ ಇತ್ತು. ಅವು ರಾಷ್ಟ್ರೀಯವಾದಿ ಪ್ರಜ್ಞೆಯನ್ನು ಬೆಳೆಸುವಲ್ಲಿ ವಹಿಸಿದ ಪಾತ್ರವನ್ನು ನಿರ್ಲಕ್ಷಿಸುವಂತಿಲ್ಲ. ಕನಿಷ್ಟ ಇಂಗ್ಲೀಷ್ ಶಿಕ್ಷಣ ಪಡೆದ ಭಾರತೀಯರ ನಡುವೆಯಂತೂ ಈ ಪ್ರಜ್ಞೆಯನ್ನು ಬೆಳೆಸಿತು. ಈ ಭಾರತೀಯ ರಾಷ್ಟ್ರೀಯವಾದ ಕ್ರಮೇಣ ಒಂದು ಸಂಘಟಿತ ಸ್ವರೂಪ ಪಡೆದದ್ದು ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಮೂಲಕ.

ರಾಷ್ಟ್ರೀಯವಾದದ ಮುಖ್ಯ ಪ್ರವಾಹವೆನಿಸಿದ ಕಾಂಗ್ರೆಸ್‌ನ ಆಶ್ರಯದಲ್ಲಿ ರಾಷ್ಟ್ರೀಯವಾದಿ ಹೋರಾಟ ಹಲವು ಘಟ್ಟಗಳಲ್ಲಿ ಬೆಳೆದು ಬಂತು. ಮೊದಲ ಪೀಳಿಗೆಯ ಕಾಂಗ್ರೆಸ್ಸಿಗರಿಗೆ ಅದನ್ನೊಂದು ಸಾಮೂಹಿಕ ಸಂಘಟನೆಯಾಗಿ ಬೆಳೆಸುವ ಆಸಕ್ತಿಯಿರಲಿಲ್ಲ. ಪ್ರಾರ್ಥನೆಗಳು ಮತ್ತು ಮನವಿಗಳ ಮೂಲಕ ಬ್ರಿಟಿಶ್ ಸಾರ್ವಜನಿಕರೆದುರು ಭಾರತದಲ್ಲಿ ಬ್ರಿಟಿಶ್ ಆಳ್ವಿಕೆಯ 'ಬ್ರಿಟಿಶರಿಗೆ ಭೂಷಣವೆನಿಸದ' ಸ್ವರೂಪವನ್ನು ಬಯಲಿಗೆಳೆಯುವ ತಂತ್ರವನ್ನು ಪ್ರಧಾನವಾಗಿ ಅವರು ಬಳಸಿದರು. ಈ ಪ್ರಕ್ರಿಯೆಯಲ್ಲಿ ಕಾಂಗ್ರೆಸ್ಸಿಗರ ಆರಂಭದ ಪೀಳಿಗೆಗೆ ಮೊಟ್ಟಮೊದಲ ಬಾರಿಗೆ ಬ್ರಿಟಿಶ್ ವಸಾಹತುಶಾಹಿಯನ್ನು ಕುರಿತಾದ ವ್ಯವಸ್ಥಿತ ಆರ್ಥಿಕ ವಿಮರ್ಶೆಯನ್ನು ಮುಂದಿಟ್ಟರು. ಉದಾಹರಣೆಗೆ ದಾದಾಭಾಯಿ ನವರೋಜಿಯವರು ಬ್ರಿಟನ್ ವಿಶ್ವದ ಮೊದಲ ಕಾರ್ಯಾಗಾರ (ವರ್ಕ್‌ಶಾಪ್) ಎನಿಸಿಕೊಂಡಿದ್ದಕ್ಕೂ ಭಾರತದಿಂದ ಅದು ಸಂಪತ್ತನ್ನು ಸೂರೆಗೊಂಡದ್ದಕ್ಕೂ ಸಂಬಂಧವಿದೆ ಎಂಬ ಸಂಗತಿಯತ್ತ ನಮ್ಮ ಗಮನ ಸೆಳೆದರು. ವಾಸ್ತವವಾಗಿ ಮೊದಲ ಪೀಳಿಗೆಯ ಕಾಂಗ್ರೆಸ್ಸಿಗರ ಮಹಾಪ್ರಬಂಧಗಳಿಂದ ಮೂಡಿ ಬಂದ ಆರ್ಥಿಕ ರಾಷ್ಟ್ರೀಯವಾದ ಕಾಂಗ್ರೆಸ್ ರಾಷ್ಟ್ರೀಯವಾದದ ಭವಿಷ್ಯದ ತೀವ್ರಗಾಮಿ ಘಟ್ಟಕ್ಕೆ ನಾಂದಿ ಹಾಕಿತು.

1905 ರಲ್ಲಿ ಕುಖ್ಯಾತ ಬಂಗಾಳ ವಿಭಜನೆಯ ವಿರುದ್ಧ ಬೆಳೆದು ಬಂದ ಸ್ವದೇಶಿ ಆಂದೋಲನ ಭಾರತೀಯ ರಾಷ್ಟ್ರೀಯವಾದದ ಪ್ರಧಾನ ಧಾರೆಯ ಮುಂದಿನ ಮಹತ್ವಪೂರ್ಣ ಘಟ್ಟ. ಬಹಳಮಟ್ಟಿಗೆ ಅದು 1907 ರಲ್ಲಿ ಕಾಂಗ್ರೆಸ್ಸಿನಲ್ಲಿ ಮಂದಗಾಮಿಗಳು ಮತ್ತು ತೀವ್ರಗಾಮಿಗಳ ನಡುವಿನ ಒಡಕಿನ ನಾಂದಿಯೂ ಆಯಿತು. ಆದರೆ ವಿಭಜನೆಯ ವಿರುದ್ಧದ ಹೋರಾಟದ ಬಲ ಎಷ್ಟಿತ್ತೆಂದರೆ ಇತ್ಯರ್ಥವಾಗಿಯೇ ಬಿಟ್ಟ ಸಂಗತಿಯೆಂದು ಸಾರಿದ್ದ ಬಂಗಾಳದ ವಿಭಜನೆಯನ್ನು 1911 ರಲ್ಲಿ ರದ್ದು ಮಾಡಬೇಕಾಯಿತು. ಆದರೆ ಸ್ವಾತಂತ್ರ್ಯಕ್ಕಾಗಿ ಭಾರತದ ಹೋರಾಟದಲ್ಲಿ ಒಂದು ಹೊಸ ನಿರ್ಣಾಯಕ ಹಂತ ಆರಂಭವಾದದ್ದು ಈ ಶತಮಾನದ ಎರಡನೇ ದಶಕದಲ್ಲಿ ಭಾರತೀಯ ರಾಜಕಾರಣದಲ್ಲಿ ಗಾಂಧೀಜಿಯ ಪ್ರವೇಶದೊಂದಿಗೆ.

ಗಾಂಧಿವಾದಿ ರಾಷ್ಟ್ರೀಯವಾದ

ನಿಷ್ಕ್ರಿಯ ಪ್ರತಿರೋಧ ಹಾಗೂ ಸತ್ಯಾಗ್ರಹಗಳ ಕಾರ್ಯತಂತ್ರ ಅಂಗೀಕರಿಸಿ ಗಾಂಧೀಜಿ ಭಾರತೀಯ ಸ್ವಾತಂತ್ರ್ಯ ಆಂದೋಲನವನ್ನು ಒಂದು ಜನತಾ ಆಂದೋಲನವಾಗಿ ಮಾಡಿದರು. ಮಧ್ಯಮ ವರ್ಗಗಳು, ರೈತಾಪಿ ಜನ, ಕಾರ್ಮಿಕ ವರ್ಗ, ಯುವಜನ, ಮಹಿಳೆಯರು - ಹೀಗೆ ಎಲ್ಲಾ ಜನ ವಿಭಾಗಗಳನ್ನೂ ಅಣಿನೆರೆಸಿದ ಅವರು ಕಾಂಗ್ರೆಸ್ಸನ್ನು ಇಡೀ ಬ್ರಿಟಿಶ್ ಸಾಮ್ರಾಜ್ಯದ ಅತೀ ದೊಡ್ಡ ವಸಾಹತು-ವಿರೋಧಿ ಸಂಘಟನೆಯಾಗಿ ಮಾರ್ಪಡಿಸಿದರು. ಚಂಪಾರಣ್,, ಕೈರಾ ಮತ್ತು ಅಹಮದಾಬಾದಿನ ಸತ್ಯಾಗ್ರಹಗಳ ಮೂಲಕ ಗಾಂಧಿ ಭಾರತದ ರಾಷ್ಟ್ರೀಯವಾದಿ ರಾಜಕಾರಣದಲ್ಲಿ ಮೊದಲ ಪರಿಣಾಮಕಾರಿ ಗುರುತು ಸ್ಥಾಪಿಸಿದರು. ರೌಲತ್ ಸತ್ಯಾಗ್ರಹ ಅವರು ಬ್ರಿಟಿಶರ 'ಸೈತಾನ' ರಾಜ್ಯಭಾರದ ಎದುರು ನಡೆಸಿದ ಮೊದಲ ರಾಷ್ಟ್ರೀಯ ಮಟ್ಟದ ಚಳುವಳಿಯಾಗಿತ್ತು. ಸೈಮನ್ ಆಯೋಗ-ವಿರೋಧಿ ಚಳುವಳಿ, ಖಿಲಾಫತ್-ಅಸಹಕಾರ ಆಂದೋಲನ, ನಾಗರಿಕ ಸವಿನಯ ಕಾನೂನು ಭಂಗ ಆಂದೋಲನ ಹಾಗೂ ಕೊನೆಯದಾಗಿ ಕ್ವಿಟ್ ಇಂಡಿಯಾ ಆಂದೋಲನ ಇವೆಲ್ಲಾ ಒಂದಾದ ಮೇಲೊಂದರಂತೆ ಬ್ರಿಟಿಶ್ ರಾಜ್ಯಭಾರದ ನೈತಿಕನೆಲೆ ಹ್ರಾಸಗೊಳ್ಳುವಂತೆ ಮಾಡಿ ಅಧಿಕಾರದ ವರ್ಗಾವಣೆಯನ್ನು ಅನಿವಾರ್ಯಗೊಳಿಸಿದವು.

ಗಾಂಧೀವಾದಿ ರಾಷ್ಟ್ರೀಯವಾದದ ಈ ಸ್ವರೂಪ

ಕಮ್ಯುನಿಸ್ಟರು ಆರಂಭದ ವರ್ಷಗಳಲ್ಲಿ ಕಾಂಗ್ರೆಸ್ಸಿನ ಮೂಲಕ ಕೆಲಸ ಮಾಡುತ್ತಾ ಕಾರ್ಷಕ ಮತ್ತು ಕಾರ್ಮಿಕ ವರ್ಗ ಹೋರಾಟಗಳೊಂದಿಗೆ ಆ ರಾಷ್ಟ್ರೀಯವಾದಿ ಸಂಘಟನೆಯ ಸಂಬಂಧ ಬೆಸೆಯಲು ಪ್ರಯತ್ನಿಸಿದರು.

ಎಲ್ಲರಿಗೂ ಗೊತ್ತು. ಇದು ನಮ್ಮ ಉಪಖಂಡದಲ್ಲಿ ವಸಾಹತೀಕರಣವನ್ನು ಕೊನೆಗೊಳಿಸುವಲ್ಲಿ ನೀಡಿದ ಕೊಡುಗೆಯನ್ನು ಒಪ್ಪದಿರಲು ಖಂಡಿತ ಸಾಧ್ಯವಿಲ್ಲ. ಆದರೆ ಈ ಗಾಂಧಿವಾದಿ ರಾಷ್ಟ್ರೀಯವಾದದಲ್ಲಿ ಒಂದು ನಕಾರಾತ್ಮಕ ಅಂಶವೂ ಇತ್ತು ಎಂಬುದು ಕೂಡಾ ನಿಜ. ಗಾಂಧೀಜಿಗೆ ವರ್ಗ ಹೋರಾಟದಲ್ಲಿ ನಂಬಿಕೆಯಿರಲಿಲ್ಲ. ಅದರ ಬದಲು ಅವರು ಭೂಮಾಲಕ ಮತ್ತು ಗೇಣಿದಾರರ ನಡುವೆ, ಬಂಡವಾಳ ಮತ್ತು ಶ್ರಮ ಶಕ್ತಿಯ ನಡುವೆ ಟ್ರಸ್ಟೀ ಶಿಪ್ ಅಥವಾ ಧರ್ಮದರ್ಶಿತ್ವದಲ್ಲಿಯೇ ನಂಬಿಕೆಯಿಟ್ಟಿದ್ದರು. ಅದೇ ವೇಳೆಗೆ ಅವರು ಕಾಂಗ್ರೆಸ್ ಬ್ರಿಟಿಶ್ ರಾಜ್ಯಭಾರದ ವಿರುದ್ಧ ನಿಂತಿರುವ ಒಂದು ವಿಶಾಲ ಸಂಯುಕ್ತ ರಂಗವಾಗಿರಬೇಕು - ಭೂಮಾಲಕರು ಮತ್ತು ರೈತರು, ಕಾರ್ಮಿಕರು ಮತ್ತು ಬಂಡವಾಳಶಾಹಿಗಳು, ಮೇಲ್ಜಾತಿಯವರು ಮತ್ತು ಕೆಳಜಾತಿಯವರು, ವಿದ್ಯಾವಂತರು ಮತ್ತು ನಿರಕ್ಷರಿಗಳು ಹೀಗೆ ಎಲ್ಲರೂ ಸೇರಿರುವ ಸಂಯುಕ್ತರಂಗವಾಗಿರಬೇಕು ಎಂದು ಬಯಸಿದ್ದರು. ಆದ್ದರಿಂದ ತನ್ನ ಸಾಮೂಹಿಕ ಆಂದೋಲನ ಯಾವುದೇ ರೀತಿಯಲ್ಲಿ ಯಾವುದೇ ವರ್ಗ ಸ್ವರೂಪವನ್ನು ಪ್ರದರ್ಶಿಸದಂತೆ ಅವರು ವಿಶೇಷ ಎಚ್ಚರವಹಿಸಿದರು. ಯಾವುದೇ ಒಂದು ಚಳುವಳಿ ತಾನು ಬಯಸಿದ್ದಕ್ಕಿಂತ ಹೆಚ್ಚು ತೀವ್ರಗಾಮಿ ಸ್ವರೂಪ ಪಡೆಯುವಂತೆ ಕಂಡಾಗ ಅದು ಅಹಿಂಸೆಯ ತನ್ನ ಮೂಲಭೂತ ಪರಿಕಲ್ಪನೆಗೆ ವಿರುದ್ಧ ಹೋಗುತ್ತದೆಯೆಂಬ ಕಾರಣ ಮುಂದೆ ಮಾಡಿ ಅದನ್ನು ಹಿಂತೆಗೆದುಕೊಳ್ಳುತ್ತಿದ್ದರು. ಆದರೆ ವಾಸ್ತವವಾಗಿ ಅವರು ಹಾಗೆ ತಡೆಗಳನ್ನು ಹೇರುತ್ತಿದ್ದುದು ರಾಷ್ಟ್ರೀಯ ಮಟ್ಟದಲ್ಲಿ ರೈತರ, ಕಾರ್ಮಿಕರ ಸಮರಶೀಲತೆಯನ್ನು ತಡೆಯಲಿಕ್ಕಾಗಿಯೇ. ಈ ಮೂಲಕ ಬ್ರಿಟಿಶ್ ರಾಜ್ಯಬಾರದ ವಿರುದ್ಧ ಏರ್ಪಟ್ಟಿರುವ ಸಂಯುಕ್ತ ರಂಗ ಛಿದ್ರಗೊಳ್ಳಬಾರದು ಎಂಬುದು ಅವರ ವಿಚಾರವಾಗಿತ್ತು. ಅಸಹಕಾರ ಆಂದೋಲನ ಹಾಗೂ ಕಾನೂನು ಭಂಗ ಚಳುವಳಿಯನ್ನು ಇದ್ದಕ್ಕಿದ್ದಂತೆ ಹಿಂತೆಗೆದುಕೊಂಡದ್ದು ಇದನ್ನೇ ತೋರಿಸುತ್ತದೆ. ಈ ಆಂದೋಲನಗಳನ್ನು ಹಿಂತೆಗೆದುಕೊಂಡದ್ದಕ್ಕೆ ಕಾಂಗ್ರೆಸ್ಸಿನೊಳಗಿದ್ದ ಎಡಪಂಥೀಯರಿಂದ ಕೂಡಾ ಪ್ರತಿಕೂಲ ಪ್ರತಿಕ್ರಿಯೆ ಬಂತು. ಹೀಗೆ ಗಾಂಧಿಯವರು ಉದ್ದೇಶಪೂರ್ವಕವಾಗಿಯೇ ರಾಜಕೀಯ ಹಾಗೂ ಸಾಮಾಜಿಕ ಕ್ರಾಂತಿಗಳು ಅಡಕವಾಗುವುದನ್ನು ತಪ್ಪಿಸಿದರು. ಇದು ಭಾರತದಲ್ಲಿ ದೇಶ ಕಟ್ಟುವ ಪ್ರಕ್ರಿಯೆಯ ಮೇಲೆ ಪ್ರತಿಕೂಲ ಪರಿಣಾಮ ಬೀರಿತು. ಈ ಬಗ್ಗೆ ಆಮೇಲೆ ನೋಡೋಣ.

ಎಡ ರಾಷ್ಟ್ರೀಯವಾದದ ಬೆಳವಣಿಗೆ

ಇಷ್ಟೇ ಅಲ್ಲ, ಭಾರತದ ಸ್ವಾತಂತ್ರ್ಯ ಹೋರಾಟದ ಸ್ವರೂಪ ಕೇವಲ ಗಾಂಧಿವಾದಿ ರಾಷ್ಟ್ರೀಯವಾದ ಎನ್ನುವುದು ತಪ್ಪಾಗುತ್ತದೆ. ಕಾಂಗ್ರೆಸ್ ಸಂಸ್ಥೆಯ ವ್ಯಾಪ್ತಿಯ ಹೊರಗೆ ಪ್ರತಿಭಟನಾ ರಾಜಕೀಯ ಉದ್ದಕ್ಕೂ ಹರಡಿತ್ತು. ಕ್ರಾಂತಿಕಾರೀ ರಾಷ್ಟ್ರೀಯವಾದ, ಕಾರ್ಮಿಕ ವರ್ಗ ಮತ್ತು ರೈತಾಪಿ ಜನಗಳ ಪ್ರತಿಭಟನೆಗಳ ಭುಗಿಲು, ಬುಡಕಟ್ಟು ಬಂಡಾಯಗಳು, ವಿದ್ಯಾರ್ಥಿ-ಯುವಜನ ಆಂದೋಲನಗಳು ಇವೆಲ್ಲಾ ಸತತವಾಗಿ ಸ್ವಾತಂತ್ರ್ಯ ಹೋರಾಟದ ಪ್ರಮುಖ ಧಾರೆಯಾದ ಕಾಂಗ್ರೆಸ್ ರಾಷ್ಟ್ರೀಯವಾದವನ್ನು ಇನ್ನಷ್ಟು ಬಲಪಡಿಸಿದವು. ಅದು ಉಳಿದು ಬೆಳೆಯಲು ನೆರವಾದವು. ಭಾರತ ಕಮ್ಯುನಿಸ್ಟ್ ಪಕ್ಷ ಈ ಪ್ರತಿಭಟನಾ ರಾಜಕೀಯವನ್ನು ಜೀವಂತವಾಗಿರುವಲ್ಲಿ, ರಾಷ್ಟ್ರೀಯವಾದದ ಪ್ರಮುಖ ಧಾರೆಯೊಂದಿಗೆ ಅದನ್ನು ಬೆಸೆಯುವಲ್ಲಿ ಒಂದು ಮಹತ್ವದ ಪಾತ್ರವಹಿಸಿತು.

ಉಗ್ರಗಾಮಿ ರಾಜಕೀಯದ ಹತಾಶೆ, ಖಿಲಾಫತ್ ಆಂದೋಲನದ ವಿಫಲತೆ ಮತ್ತು ಕಾರ್ಮಿಕ ವರ್ಗ ಮತ್ತು ರೈತಾಪಿ ಜನಗಳಲ್ಲಿ ಹೆಚ್ಚುತ್ತಿದ್ದ ಅಸಂತೃಪ್ತಿಯ ಹಿನ್ನೆಲೆಯಲ್ಲಿ ಒಂದು ಹೊಸ ಸಿದ್ಧಾಂತ ಹಾಗೂ ಹೊಸ ಮುಖಂಡತ್ವದ ಹುಡುಕಾಟ ನಡೆಯುತ್ತಿದ್ದಂತೆ ಒಂದು ಮಹತಪೂರ್ಣ ಕಾಲಘಟ್ಟದಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷ ರಚನೆಗೊಂಡಿತು. ಅಕ್ಟೋಬರ್ 1920 ರಲ್ಲಿ ತಾಷ್ಕೆಂಟ್‌ನಲ್ಲಿ ಮನವೇಂದ್ರನಾಥ್ ರಾಯ್, ಅಬನಿ ಮುಖರ್ಜಿ ಹಾಗೂ ಇಬ್ಬರು ಖಿಲಾಫತ್ ಕಾರ್ಯಕರ್ತರ ಮುತುವರ್ಜಿಯಿಂದ ಪಕ್ಷದ ಸ್ಥಾಪನೆಯಾಯಿತು. ಆ ನಂತರ ಕಲ್ಕತ್ತಾ, ಮುಂಬೈ, ಮದ್ರಾಸ್ ಹಾಗೂ ಲಾಹೋರ್‌ಗಳಲ್ಲಿ ನಾಲ್ಕು ಕಮ್ಯುನಿಸ್ಟ್ ಗುಂಪುಗಳು ರಚನೆಗೊಂಡವು. ಆರಂಭದಲ್ಲಿ ಸ್ವತಂತ್ರವಾಗಿ ಕೆಲಸ ಮಾಡುತ್ತಿದ್ದ ಈ ಗುಂಪು ಎಡರಾಷ್ಟ್ರೀಯವಾದದ ಪ್ರಚಾರದ ಕೆಲಸ ಮಾಡಿದವು. ಡಿಸೆಂಬರ್ 1925 ರಲ್ಲಿ ಈ ನಾಲ್ಕು ಗುಂಪುಗಳ ಪ್ರತಿನಿಧಿಗಳು ಕಾನ್ಪುರದಲ್ಲಿ ಸಭೆ ಸೇರಿ ದೇಶದಲ್ಲಿ ಎಡ ರಾಜಕೀಯಕ್ಕೆ ಒಂದು ಸಂಯೋಜಿತ ಐಕ್ಯ ಸ್ವರೂಪ ನೀಡಲು ಒಂದು ಕೇಂದ್ರಸಮಿತಿಯನ್ನು ರಚಿಸಿದರು.

ಭಾರತದಲ್ಲಿ ಕಮ್ಯುನಿಸಂ ಹರಡುವುದನ್ನು ಕಂಡ ಬ್ರಿಟಿಶರಿಗೆ ಬಹಳ ದಿಗಿಲಾಯಿತು. ಅದನ್ನೆದುರಿಸಲು ಎಲ್ಲಾ ರೀತಿಯ ದಮನ ಕ್ರಮಗಳಿಗೆ ಕೈಹಾಕಿದರು. ಅಂದರೆ ಇದರರ್ಥ ಆರಂಭದಿಂದಲೇ ಕಮ್ಯುನಿಸ್ಟರು ಬಹಳಷ್ಟು ಪ್ರತಿಕೂಲ ವಾತಾವರಣವನ್ನು ಎದುರಿಸಿ ಕೆಲಸ ಮಾಡಬೇಕಾಯಿತು. ವಿದೇಶಗಳಲ್ಲಿ ತರಬೇತಾಗಿ ಭಾರತಕ್ಕೆ ಕಳಿಸಲ್ಪಟ್ಟ ಎಂ.ಎನ್.ರಾಯ್ ಮುಂತಾದವರನ್ನು ಅವರು ದೇಶದೊಳಗೆ ಬಂದ ಕೂಡಲೇ ಬಂಧಿಸಲಾಯಿತು. 1923 ರಲ್ಲಿ ಅವರಲ್ಲಿ ಹೆಚ್ಚಿನವರ ಮೇಲೆ ಪೇಶಾವರ್ ಪಿತೂರಿ ಮೊಕದ್ದಮೆಯನ್ನು ಹಾಕಿ ಜೈಲಿಗೆ ಅಟ್ಟಲಾಯಿತು. 1924 ರಲ್ಲಿ ವಸಾಹತುಶಾಹಿಗಳು ಕಾನ್ಪುರ ಪಿತೂರಿ ಮೊಕದ್ದಮೆಯ ನಾಟಕವಾಡಿದರು. ಅದರಲ್ಲಿ ದೇಶದ ಆಗಿನ ನಾಲ್ಕು ಪ್ರಮುಖ ಕಮ್ಯುನಿಸ್ಟರಾದ ಮುಝಫರ್ ಅಹ್ಮದ್, ಶೌಕತ್ ಉಸ್ಮಾನಿ, ಎಸ್.ಎ.ಡಾಂಗೆ ಹಾಗೂ ನಳಿನಿ ಭೂಷಣ್ ದಾಸ್‌ಗುಪ್ತಾರವರನ್ನು ಸಾಮ್ರಾಟನ ವಿರುದ್ಧ ಪಿತೂರಿ ಹೂಡಿದ ಆಪಾದನೆಯ ಮೇಲೆ ಶಿಕ್ಷೆಗೆ ಗುರಿಪಡಿಸಲಾಯಿತು. ಆದರೆ ಈ ಕುರಿತ ವಿಚಾರಣೆ ಕಾರ್ಮಿಕ ವರ್ಗ ಮತ್ತು ಬುದ್ಧಿಜೀವಿಗಳನ್ನು ಸಾಕಷ್ಟು ದಿಗ್ಭ್ರಾಂತಗೊಳಿಸಿತು. ಸಮಾಜವಾದ, ಕಮ್ಯುನಿಸಂನ ಪ್ರಶ್ನೆಗಳು ಮುಂದೆ ಬಂದವು. ಮುಂಬೈಯಲ್ಲಿ ಒಂದು ಭಾರತೀಯ ಕಮ್ಯುನಿಸ್ಟರ ರಕ್ಷಣಾ ಸಮಿತಿ ರಚನೆಯಾಯಿತು. ಅದು ಕಮ್ಯುನಿಸ್ಟ್ ಪಾರ್ಟಿ ಕಟ್ಟುವ ಭಾರತೀಯರ ಹಕ್ಕನ್ನು ಪಡೆಯಲು ಒಂದು ಪ್ರಚಾರಾಂದೋಲನವನ್ನು ಸಂಘಟಿಸಿತು. ಬ್ರಿಟಿಶ್ ಆಳ್ವಿಕೆಯ ಬಹಳಷ್ಟು ಕಾಲದಲ್ಲಿ ಭಾರತದ ಕಮ್ಯುನಿಸ್ಟ್ ಪಕ್ಷ ಒಂದು ನಿಷೇಧಿತ ರಾಜಕೀಯ ಸಂಘಟನೆಯಾಗಿ ತಲೆಮರೆಸಿಕೊಂಡೇ ಕೆಲಸ ಮಾಡಬೇಕಾಯಿತು ಎಂಬುದು ಗಮನಾರ್ಹ.

ಕಮ್ಯುನಿಸ್ಟರು ಆರಂಭದ ವರ್ಷಗಳಲ್ಲಿ ಕಾಂಗ್ರೆಸ್ಸಿನ ಮೂಲಕ ಕೆಲಸ ಮಾಡುತ್ತಾ ಕಾರ್ಷಕ ಮತ್ತು ಕಾರ್ಮಿಕ ವರ್ಗ ಹೋರಾಟಗಳೊಂದಿಗೆ ಈ ರಾಷ್ಟ್ರೀಯವಾದಿ ಸಂಘಟನೆಯ ಸಂಬಂಧ ಬೆಸೆಯಲು ಪ್ರಯತ್ನಿಸಿದರು. ಈ ಆರಂಭದ ಘಟ್ಟದಲ್ಲಿ ದೇಶದ ವಿಭಿನ್ನ ಸ್ಥಾನಗಳಲ್ಲಿ ಸ್ಥಾಪನೆಗೊಂಡ ಕಾರ್ಮಿಕ ಮತ್ತು ರೈತರ ಪಕ_(Workers and Peasants Party) ದ ವೇದಿಕೆಯನ್ನು ಬಳಸಿಕೊಂಡರು. 1928 ರಲ್ಲಿ ಈ ಪಕ್ಷದ ಅಖಿಲ ಭಾರತ ಸಮ್ಮೇಳನ ನಡೆದು ವಿವಿಧ ಸ್ಥಳೀಯ ಘಟಕಗಳನ್ನು ಒಟ್ಟು ತರಲು ಪ್ರಯತ್ನಿಸಲಾಯಿತು. ಅದೇ ವರ್ಷ ಭಾರತ

೧೯೨೮ರಲ್ಲಿ ವರ್ಷ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಕಲ್ಕತ್ತಾ ಅಧಿವೇಶನದಲ್ಲಿ ಸಂಪೂರ್ಣ ಸ್ವಾತಂತ್ರ್ಯ ತನ್ನ ಗುರಿ ಎಂದು ಕಾಂಗ್ರೆಸ್ ಘೋಷಿಸಬೇಕೆಂದು ಒತ್ತಾಯಿಸಿ ೫೦೦೦೦ ಮಿಲ್ ಕಾರ್ಮಿಕರು ಮತ್ತು ಭಾರತೀಯ ಸಮಾಜದ ಕೆಳವರ್ಗಗಳ ಜನ ಎಡ ನೇತೃತ್ವದಲ್ಲಿ ಅಧಿವೇಶನದ ಆವರಣದವರೆಗೆ ಮೆರವಣಿಗೆ ತೆಗೆದರು. ಆಗಿನ್ನೂ ರಾಷ್ಟ್ರೀಯವಾದಿ ಮುಖಂಡರಲ್ಲಿ ಪ್ರಬಲರಾಗಿದ್ದವರು ಡೊಮಿನಿಯನ್ ಅಂದರೆ ಆಶ್ರಿತ ಸ್ಥಾನಮಾನದ ಬಗ್ಗೆಯಷ್ಟೆ ಯೋಚಿಸುತ್ತಿದ್ದರು.

ಕಮ್ಯುನಿಸ್ಟರು ಕಾರ್ಮಿಕ ವರ್ಗದ ರಾಜಕೀಯವನ್ನು ಸಂಘಟಿಸುವಾಗಲೂ ಎಂದೂ ರಾಷ್ಟ್ರೀಯವಾದೀ ಕಣ್ಣೋಟವನ್ನು ಮರೆಯಲಿಲ್ಲ.

ರಾಷ್ಟ್ರೀಯ ಕಾಂಗ್ರೆಸ್ಸಿನ ಕಲ್ಕತ್ತಾ ಅಧಿವೇಶನದಲ್ಲಿ ಸಂಪೂರ್ಣ ಸ್ವಾತಂತ್ರ್ಯ ತನ್ನ ಗುರಿ ಎಂದು ಕಾಂಗ್ರೆಸ್ ಘೋಷಿಸಬೇಕೆಂದು ಒತ್ತಾಯಿಸಿ 50000 ಮಿಲ್ ಕಾರ್ಮಿಕರು ಮತ್ತು ಭಾರತೀಯ ಸಮಾಜದ ಕೆಳವರ್ಗಗಳ ಜನ ಎಡ ನೇತೃತ್ವದಲ್ಲಿ ಅಧಿವೇಶನದ ಆವರಣದವರೆಗೆ ಮೆರವಣಿಗೆ ತೆಗೆದರು. ಆಗಿನ್ನೂ ರಾಷ್ಟ್ರೀಯವಾದಿ ಮುಖಂಡರಲ್ಲಿ ಪ್ರಬಲರಾಗಿದ್ದವರು ಡೊಮಿನಿಯನ್ ಅಂದರೆ ಆಶ್ರಿತ ಸ್ಥಾನಮಾನದ ಬಗ್ಗೆಯಷ್ಟೆ ಯೋಚಿಸುತ್ತಿದ್ದರು.

ಈ ಸಂದರ್ಭದಲ್ಲಿ ಸುಭಾಶ್ ಚಂದ್ರ ಬೋಸ್‌ರವರೂ ಸಂಪೂರ್ಣ ಸ್ವಾತಂತ್ರ್ಯದ ಬೇಡಿಕೆಯನ್ನು ಬೆಂಬಲಿಸಿದರು. ಈ ಹಿಂದೆ 1921 ರಲ್ಲೇ ಅಹಮದಾಬಾದ್ ಕಾಂಗ್ರೆಸ್ ಅಧಿವೇಶನದಲ್ಲಿ ಸಂಪೂರ್ಣ ಸ್ವಾತಂತ್ರ್ಯ ಕಾಂಗ್ರೆಸ್ಸಿನ ಗುರಿಯಾಗಬೇಕೆಂಬ ಒಂದು ನಿರ್ಣಯವನ್ನು ಮಂಡಿಸಲಾಗಿತ್ತು. ಅದನ್ನು ಮಂಡಿಸಿದವರು ಮತ್ತು ಅನುಮೋದಿಸಿದವರು ಇಬ್ಬರೂ ಕಮ್ಯುನಿಸ್ಟರು ಎಂಬುದು ಗಮನಾರ್ಹ. ನಂತರ 1927 ರಲ್ಲಿ ಮದ್ರಾಸ್ ಅಧಿವೇಶನದಲ್ಲಿ ಜವಾಹರಲಾಲ್ ನೆಹರೂ 'ಪೂರ್ಣಸ್ವರಾಜ್ಯ'ದ ಠರಾವನ್ನು ಮಂಡಿಸಿದಾಗ ಅದನ್ನು ಅನುಮೋದಿಸಿ ಮಾತನಾಡಿದವರೂ ಕಮ್ಯುನಿಸ್ಟ್ ಪ್ರತಿನಿಧಿಯಾದ ಜೋಗ್ಲೇಕರ್.

1920 ರ ದಶಕದ ಅಂತ್ಯದ ವೇಳೆಗೆ ಭಾರತದ ಕಾರ್ಮಿಕ ವರ್ಗದ ನಡುವೆ ಕಮ್ಯುನಿಸ್ಟ್ ಪ್ರಭಾವ ಹೆಚ್ಚಿತು. ಕಮ್ಯುನಿಸ್ಟ್ ನೇತೃತ್ವದಲ್ಲಿ ಕಾರ್ಮಿಕ ವರ್ಗ ರಾಷ್ಟ್ರವ್ಯಾಪಿ ಸೈಮನ್ ಆಯೋಗ-ವಿರೋಧಿ ಆಂದೋಲನದಲ್ಲಿ ಭಾಗವಹಿಸಿತು. 1928 ರ ಒಂದೇ ವರ್ಷದಲ್ಲಿ ದೇಶಾದ್ಯಂತ 200 ಕ್ಕೂ ಹೆಚ್ಚು ಕೈಗಾರಿಕಾ ಮುಷ್ಕರಗಳು ನಡೆದು ಇದರಲ್ಲಿ ಸುಮಾರು 5 ಲಕ್ಷ ಕಾರ್ಮಿಕರು ಭಾಗವಹಿಸಿದರು. ಇದರಲ್ಲಿ ಅತ್ಯಂತ ಮಹತ್ವದ್ದೆಂದರೆ ಮಹಾರಾಷ್ಟ್ರದಲ್ಲಿ ಕಮ್ಯುನಿಸ್ಟ್ ಪ್ರಭಾವದ ಗಿರಣಿ ಕಾಮಗಾರ್ ಯೂನಿಯನ್‌ನ ನೇತೃತ್ವದಲ್ಲಿ ನಡೆದ ಜವಳಿ ಕಾರ್ಮಿಕರ ಮುಷ್ಕರ, 1928 ರಲ್ಲಿ ಈ ಸಂಘ ಆರಂಭವಾದಾಗ ಸದಸ್ಯ ಸಂಖ್ಯೆ ಕೇವಲ 324 ಇದ್ದದ್ದು ಆ ವರ್ಷದ ಡಿಸೆಂಬರ್ ವೇಳೆಗೆ 54000 ಕ್ಕೇರಿತು. 1929 ರ ಆರಂಭದಲ್ಲಿ ಅದು 65000 ಆಯಿತು.

ಕುತೂಹಲಕಾರಿ ಸಂಗತಿಯೆಂದರೆ ಕಾಂಗ್ರೆಸ್ಸಿನ ಪ್ರಬಲ ಮುಖಂಡತ್ವ ಈ ಕಾರ್ಮಿಕ ಅಸಂತೃಪ್ತಿಯನ್ನು ಒಪ್ಪಲಿಲ್ಲ ಅಥವಾ ಬ್ರಿಟಿಶ್ ಸರಕಾರ ಅಮಾನುಷ ದಮನ ಕ್ರಮಗಳನ್ನು ಬಳಸಿದಾಗ ಮೌನವಾಗಿತ್ತು. ಆಗ ಕಾರ್ಮಿಕ ಬಂಡಾಯದ ಬಲ ಎಷ್ಟಿತ್ತೆಂಬುದಕ್ಕೆ 1928-29 ರ ಒಂದು ಸರಕಾರೀ ವರದಿಯ ಈ ಕೆಳಗಿನ ಮಾತುಗಳೇ ಸಾಕ್ಷಿ. -

> *"ಕಮ್ಯುನಿಸ್ಟ್ ವಿಚಾರಗಳು.... ಕೈಗಾರಿಕಾ ಶ್ರಮಜೀವಿ ವರ್ಗದ ವಿವಿಧ ವಿಭಾಗಗಳ ನಡುವೆ, ಅಷ್ಟೇ ಅಲ್ಲ ಸ್ವಲ್ಪಮಟ್ಟಿಗೆ ಗ್ರಾಮೀಣ ಭಾರತದಲ್ಲೂ ಹರಡಿವೆ.... ಹಲವು ಯುವ ಸಂಘಟನೆಗಳು ಕಮ್ಯುನಿಸ್ಟ್ ಪ್ರತೀಕಗಳನ್ನು, ಸಿದ್ಧಾಂತಗಳನ್ನು ಅಂಗೀಕರಿಸಿರುವುದು ಒಂದು ಮಹತ್ವದ ಸಂಗತಿ. ಕಮ್ಯುನಿಸ್ಟ್ ಆಂದೋಲನ ಒಂದು ಆತಂಕದ ವಿಷಯವಾಗಿಯೇ ಇದೆ. ಆಡಳಿತ ಈ ಬಗ್ಗೆ ನಿರಂತರ ಎಚ್ಚರದಿಂದಿರಬೇಕು"*

ಇಲ್ಲಿ ಮಹತ್ವದ ಸಂಗತಿಯೆಂದರೆ ಕಮ್ಯುನಿಸ್ಟರು ಕಾರ್ಮಿಕ ವರ್ಗದ ರಾಜಕೀಯವನ್ನು ಸಂಘಟಿಸುವಾಗಲೂ ಎಂದೂ ರಾಷ್ಟ್ರೀಯವಾದೀ ಕಣ್ಣೋಟವನ್ನು ಮರೆಯಲಿಲ್ಲ. 1930 ರಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷ "ಕಾರ್ಯಾಚರಣೆಯ ವೇದಿಕೆ" ಎಂಬ ಕಾರ್ಯಕ್ರಮವನ್ನು ಪ್ರಕಟಿಸಿತು. 1934 ರಲ್ಲಿ ಇದನ್ನು ಪಕ್ಷದ ಪ್ಲೀನಂ ಸಭೆ ಭಾರತ ಕಮ್ಯುನಿಸ್ಟ್ ಪಕ್ಷದ ಕಾರ್ಯಕ್ರಮ ಎಂದು ಅಂಗೀಕರಿಸಿತು. ಇದರಲ್ಲಿ ಸ್ವಾತಂತ್ರ್ಯ ಪಡೆಯುವ ಒಂದು ಸಂಪೂರ್ಣ ಕಾರ್ಯಕ್ರಮವನ್ನು ವಿಷದಪಡಿಸಲಾಯಿತು. ಮಾರ್ಕ್ಸ್‌ವಾದ-ಲೆನಿನ್‌ವಾದವನ್ನು ಆಧರಿಸಿದ ಈ ದಸ್ತಾವೇಜು ಕಾಂಗ್ರೆಸ್ಸಿನ ಬಂಡವಾಳಶಾಹಿ-ಭೂಮಾಲಕ ಕಣ್ಣೋಟದಿಂದ ದೂರ ಸಿಡಿದು ನಿಂತು ರಾಷ್ಟ್ರೀಯ ಸಾಮ್ರಾಜ್ಯಶಾಹಿ-ವಿರೋಧಿ ಹೋರಾಟದ ಯಶಸ್ಸು ಹಾಗೂ ಒಂದು ಕಾರ್ಷಕ ಕ್ರಾಂತಿಯ ನಡುವೆ ಸಂಬಂಧ ಬೆಸೆಯಿತು. ಈ ದಸ್ತಾವೇಜು ಹೀಗೆಂದಿತ್ತು -

> *"ಭಾರತೀಯ ಜನತೆಯು ಗುಲಾಮಿಕೆಯನ್ನು ನಾಶಮಾಡಿ ಕಾರ್ಮಿಕ ವರ್ಗ ಹಾಗೂ ರೈತಾಪಿ ಜನಗಳನ್ನು ಕಿತ್ತು ತಿನ್ನುತ್ತಿರುವ ಬಡತನದಿಂದ ಅವರನ್ನು ವಿಮೋಚನೆಗೊಳಿಸಬೇಕಾದರೆ ದೇಶದ ಸ್ವಾತಂತ್ರ್ಯವನ್ನು ಗೆದ್ದುಕೊಳ್ಳುವುದು ಹಾಗೂ ಮಧ್ಯಯುಗದಿಂದ ಉಳಿದು ಬಂದಿರುವ ಭೂಮಾಲಕ ವ್ಯವಸ್ಥೆಯನ್ನು ಧ್ವಂಸ ಮಾಡಿ ಮಧ್ಯಯುಗದ ಹೊಲಸುಗಳಿಂದ ಇಡೀ ದೇಶವನ್ನು ಸ್ವಚ್ಛಗೊಳಿಸುವ ಒಂದು ಕರ್ಷಕ ಕ್ರಾಂತಿಯ ಬಾವುಟವನ್ನೆತ್ತಿ ಹಿಡಿಯುವುದು ಅತ್ಯಗತ್ಯ. ಬ್ರಿಟಿಶ್ ಬಂಡವಾಳಶಾಹಿ ಮತ್ತು ಭೂಮಾಲಕತ್ವದ ವಿರುದ್ಧ ಒಂದು ಕರ್ಷಕ ಕ್ರಾಂತಿ ಭಾರತದ ಕ್ರಾಂತಿಕಾರಿ ವಿಮೋಚನೆಯ ಆಧಾರವಾಗಬೇಕು"*

ಮೇರಠ್ ಮತ್ತು ನಂತರ

"ಕಮ್ಯುನಿಸ್ಟ್ ಬೆದರಿಕೆ" ಎಂದು ಬ್ರಿಟಿಶ್ ಆಡಳಿತ ಏನನ್ನು ಚಿತ್ರಿಸಿಕೊಂಡಿತ್ತೋ ಅದನ್ನೆದುರಿಸಲು ಬ್ರಿಟಿಶ್ ಆಡಳಿತ ಕ್ರಾಂತಿಕಾರಿ ಮುಖಂಡರು ಮತ್ತು ತೀವ್ರಗಾಮಿ ಟ್ರೇಡ್ ಯೂನಿಯನ್ ಮುಖಂಡರ ವ್ಯಾಪಕ ಬಂಧನಕ್ಕಿಳಿಯಿತು. ಮಾರ್ಚ್ 1929 ರಲ್ಲಿ ಭಾರತೀಯ ಕಮ್ಯುನಿಸ್ಟರಲ್ಲಿ ಪ್ರಮುಖರಾದ ಮುಝಫರ್ ಅಹ್ಮದ್, ಎಸ್.ಎ.ಡಾಂಗೆ, ಪಿ.ಸಿ.ಜೋಷಿ ಮುಂತಾದ ಮುಖಂಡರು ಹಾಗೂ ಮೂವರು ಬ್ರಿಟಿಶ್ ಕಮ್ಯುನಿಸ್ಟರು ಸೇರಿದಂತೆ 33 ಪ್ರಸಿದ್ಧ ಕಾರ್ಮಿಕ ಮುಖಂಡರ ಮೇಲೆ ಬ್ರಿಟಿಶ್ ಆಳ್ವಿಕೆಯ ವಿರುದ್ಧ ಪಿತೂರಿ ಹೂಡಿದ ಆಪಾದನೆ ಹೇರಲಾಯಿತು. ಇದು ಮೇರಠ್ ಪಿತೂರಿ ಮೊಕದ್ದಮೆ ಎಂದು ಖ್ಯಾತವಾಗಿದೆ. 1930 ರ ವರೆಗೂ ಇದರ ವಿಚಾರಣೆ ಎಳೆಯಿತು. ಈ ವಿಚಾರಣೆಯ ವೇಳೆಗೆ ಕಮ್ಯುನಿಸ್ಟರ ವರ್ತನೆಗೆ ವ್ಯಾಪಕ ಮೆಚ್ಚುಗೆ ವ್ಯಕ್ತವಾಯಿತು. ಆತ್ಮ ರಕ್ಷಣೆಯ ಅವಕಾಶವನ್ನು ಅವರು ಮಾರ್ಕ್ಸ್‌ವಾದ-ಲೆನಿನ್ ವಾದದ ನೀತಿಗಳನ್ನು ಪ್ರತಿಪಾದಿಸಲು ಹಾಗೂ ರಾಷ್ಟ್ರೀಯ ವಾದಕ್ಕೆ ತಮ್ಮ ಬದ್ಧತೆಯನ್ನು ಪುನರುಚ್ಚರಿಸಲು ಬಳಸಿಕೊಂಡರು. ಅದೇ ವೇಳೆಗೆ ನ್ಯಾಯಾಲಯದ ಹೊರಗೂ ಈ ವಿಚಾರಣೆಗೆ ವ್ಯಕ್ತಗೊಂಡ ಜನತೆಯ ಕ್ರೋಧ ದೇಶಾದ್ಯಂತ ಮುಷ್ಕರಗಳ ಒಂದು ಸರಣಿಯ ರೂಪದಲ್ಲಿ ವ್ಯಕ್ತಗೊಂಡಿತು. ಮೋತಿಲಾಲ್ ನೆಹರೂ ಅಧ್ಯಕ್ಷರಾಗಿದ್ದ ಹಾಗೂ ಜವಾಹರ್‌ಲಾಲ್ ನೆಹರೂ ಕಾರ್ಯದರ್ಶಿಯಾಗಿದ್ದ ಒಂದು ರಕ್ಷಣಾ ಸಮಿತಿ ರಚನೆಗೊಂಡಿತು. ಕಮ್ಯುನಿಸ್ಟರ ರಕ್ಷಣೆಗಾಗಿ ನಿಧಿ ಎತ್ತುವುದು ಸುಲಭದ ಕೆಲಸವಾಗಿರಲಿಲ್ಲ ಎಂದು ಜವಾಹರಲಾಲ್ ನಂತರ ಹಲುಬಿದರೂ ಪ್ರತಿವಾದಿಯ ವಕೀಲರಿಗಾಗಿ ಹಣ ಸಂಗ್ರಹಿಸಲು, ಬಂಧಿಗಳಿಗೆ ಆಹಾರ, ಪತ್ರಿಕೆಗಳು, ಪುಸ್ತಕಗಳನ್ನು ಒದಗಿಸಲು ಕೂಡಾ ಸಮಿತಿಗಳು ರಚನೆಗೊಂಡವು. ಮೇರಠ್ ರಕ್ಷಣಾ ಆಂದೋಲನಕ್ಕೆ ಸೋವಿಯತ್ ಒಕ್ಕೂಟದಿಂದ ಹಾಗೂ ಸ್ವತಃ ಗ್ರೇಟ್ ಬ್ರಿಟನ್‌ನ ಕಾರ್ಮಿಕ ಆಂದೋಲನದಿಂದ ಗಮನಾರ್ಹ ಬೆಂಬಲ ದೊರೆಯಿತು. ಆ ಯುಗದ ಪ್ರಖ್ಯಾತ ಬುದ್ಧಿಜೀವಿಗಳಾದ ಐನ್‌ಸ್ಟೀನ್, ರೋಮೇಂ ರೋಲಾ ಮತ್ತು ಹೆರಾಲ್ಡ್ ಲಾಸ್ಕಿ ಯಂತವರು ಮೇರಠ್ ವಿಚಾರಣೆಯನ್ನು ಖಂಡಿಸಿದರು. ನ್ಯಾಯಾಲಯ ಆಪಾದಿತರಿಗೆ ಕಠಿಣ ಶಿಕ್ಷೆಗಳನ್ನು ವಿಧಿಸಿತು. ಆದರೆ ಈ ಪಿತೂರಿ ಮೊಕದ್ದಮೆ ಭಾರತದಲ್ಲಿ ಕಮ್ಯುನಿಸಂನ ಶಕ್ತಿ ಬೆಳೆಯುತ್ತಿರುವುದನ್ನು ಸಾಬೀತುಗೊಳಿಸಿತು.

1934 ರ ವೇಳೆಗೆ ಕಮ್ಯುನಿಸ್ಟರು ಮೇರಠ್ ಆಘಾತದಿಂದ ಚೇತರಿಸಿಕೊಂಡು ಒಂದು ಹೊಸ ಹುಮ್ಮಸ್ಸಿನಿಂದ ಭಾರತೀಯ ಕಾರ್ಮಿಕ ಶಕ್ತಿಯ ಮರುಸಂಘಟನೆ ಆರಂಭಿಸಿದರು. ಆ ವರ್ಷ ಕಮ್ಯುನಿಸ್ಟರು ಮತ್ತು ಇತರ ಎಡಪಂಥೀಯ ಗುಂಪುಗಳು ಜತೆಗೂಡಿ ಒಂದು ಬೃಹತ್ ಅಖಿಲ ಭಾರತ ಜವಳಿ ಮುಷ್ಕರವನ್ನು ಸಂಘಟಿಸಿದರು. ರಾಜಕೀಯ ಬಂಧಿಗಳ ಬಿಡುಗಡೆ ಮುಷ್ಕರಕಾರರ ಬೇಡಿಕೆಗಳಲ್ಲಿ ಒಂದಾಗಿತ್ತು. ಈ ಅವಧಿಯಲ್ಲಿ ಕಮ್ಯುನಿಸ್ಟರು ಕಾಂಗ್ರೆಸ್ ಸಮಾಜವಾದಿ ಗುಂಪಿನೊಂದಿಗೆ ಸಂಪರ್ಕಗಳನ್ನು ಬೆಳೆಸಿದರು. ಇಬ್ಬರೂ ಸೇರಿ 1933ರ ಭಾರತ ಸರಕಾರ ಕಾನೂನಿಗೆ ಒಪ್ಪಿಗೆ ನೀಡಿದ್ದನ್ನು ವಿರೋಧಿಸಿದರು. ಆದರೆ 1937

ರ ಚುನಾವಣೆಗಳ ನಂತರ 11 ಪ್ರಾಂತ್ಯಗಳಲ್ಲಿ 7 ರಲ್ಲಿ ಕಾಂಗ್ರೆಸ್ ಪ್ರಾಂತಿಯ ಸರಕಾರಗಳನ್ನು ರಚಿಸಿದ ನಂತರ ಸಿಪಿಐ ಹೊಸ ರಾಜಕೀಯ ವಾತಾವರಣದಲ್ಲಿ ಒಂದು ದ್ವಂದ್ವ ನೀತಿಯನ್ನು ಅನುಸರಿಸಿತು. ಒಂದೆಡೆ ಅಧಿಕಾರಶಾಹಿ ಮತ್ತು ಕೇಂದ್ರ ಸರಕಾರದ ಹಸ್ತಕ್ಷೇಪವನ್ನು ತಡೆದು ನಿಲ್ಲಿಸಲು ಕಾಂಗ್ರೆಸ್ ಮಂತ್ರಿಮಂಡಲಗಳಿಗೆ ಬೆಂಬಲವಾಗಿ ನಿಂತಿತು. ಇನ್ನೊಂದೆಡೆ, ಕಾಂಗ್ರೆಸ್ ಸರಕಾರಗಳು ಪ್ರತಿಭಟನಾ ರಾಜಕೀಯದ ವಿರುದ್ಧ ದಮನದ ಧೋರಣೆಯನ್ನು ಆರಿಸಿಕೊಂಡಾಗ ಸಿಪಿಐ ಅವುಗಳ ವಿರುದ್ಧ ಸಂಘರ್ಷಕ್ಕೂ ಇಳಿಯಿತು.

ಈ ನಡುವೆ ಕಮ್ಯುನಿಸ್ಟರು ರೈತಾಪಿ ಜನಗಳನ್ನು, ಯುವಜನರನ್ನು ಸಂಘಟಿಸುವಲ್ಲಿ ಸಾಕಷ್ಟು ಮುನ್ನಡೆ ಸಾಧಿಸಿದರು. ಎಡ ರಾಷ್ಟ್ರೀಯವಾದಿಗಳ ಸಹಕಾರದೊಂದಿಗೆ ಕಮ್ಯುನಿಸ್ಟರು 1936 ರಲ್ಲಿ ಅಖಿಲ ಭಾರತ ವಿದ್ಯಾರ್ಥಿ ಒಕ್ಕೂಟ(ಎಐಎಸ್‌ಎಫ್) ವನ್ನು ಸ್ಥಾಪಿಸಿದರು. ಅದೇ ಸುಮಾರಿಗೆ ಕಮ್ಯುನಿಸ್ಟರ ಮುತುವರ್ಜಿಯಿಂದ ಪ್ರಗತಿಪರ ಕಲಾವಿದರ ಒಂದು ರಾಷ್ಟ್ರೀಯ ವೇದಿಕೆ ಸಂಘಟಿತವಾಯಿತು. ಅದೇ ವರ್ಷ ಅಖಿಲ ಭಾರತ ಕಿಸಾನ್ ಸಭಾ ಸ್ಥಾಪನೆಗೊಂಡಿತು. ಅದು ಕಮ್ಯುನಿಸ್ಟರ ನೇತೃತ್ವದಲ್ಲಿ ವಿಶೇಷವಾಗಿ ಬಂಗಾಳ, ಕೇರಳ, ಆಂಧ್ರಪ್ರದೇಶ, ಪಂಜಾಬ್‌ಗಳಲ್ಲಿ ಬಲಿಷ್ಠವಾಗಿ ಬೆಳೆಯಿತು. ಈ ಸಂದರ್ಭದಲ್ಲಿ ಸಹಜಾನಂದ ಸರಸ್ವತಿಯಂತಹ ರೈತ ಮುಖಂಡರು ವಹಿಸಿದ ಮಹತ್ವದ ಪಾತ್ರವನ್ನು ನೆನಪಿಸಿಕೊಳ್ಳಬಯಸುತ್ತೇನೆ. ಕಿಸಾನ್ ಸಭಾ ರೈತರ ಕುಂದುಕೊರತೆಗಳಿಗೆ ದನಿ ನೀಡಿದ್ದಷ್ಟೇ ಅಲ್ಲ, ಅದಾಗಲೇ ಗಾಂಧಿವಾದಿ ನೇತೃತ್ವದಲ್ಲಿ ಒಂದು ಪ್ರೌಢ ಸ್ವರೂಪ ಪಡೆದಿದ್ದ ರಾಷ್ಟ್ರೀಯವಾದದ ಪ್ರಮುಖ ಧಾರೆಗೆ ಬೆಂಬಲ ನೀಡಿತು.

ಎರಡನೇ ಮಹಾಯುದ್ಧ ಭಾರತದಲ್ಲಿ ಕಮ್ಯುನಿಸ್ಟ್ ರಾಜಕೀಯದ ಬೆಳವಣಿಗೆಯಲ್ಲಿ ಒಂದು ಹೊಸ ತಿರುವು ಬಿಂದುವಾಯಿತು. ಆರಂಭದಲ್ಲಿ ಸಿಪಿಐ ಈ ಯುದ್ಧವನ್ನು ಸಾಮ್ರಾಜ್ಯಶಾಹಿ ಯುದ್ಧ ಎಂದು ವಿಶ್ಲೇಷಿಸಿತು; ಭಾರತವನ್ನು ಏಕಪಕ್ಷೀಯವಾಗಿ ಈ ಯುದ್ಧದಲ್ಲಿ ಭಾಗಿಯಾಗುವಂತೆ ಮಾಡುವ ಬ್ರಿಟಿಶ್ ಪ್ರಯತ್ನವನ್ನು ಕಾಂಗ್ರೆಸ್ಸಿನ ಜತೆಗೂಡಿ ವಿರೋಧಿಸಿತು. ಯುದ್ಧದ ಆರ್ಥಿಕ ದುಷ್ಪರಿಣಾಮಗಳನ್ನು ಬಯಲಿಗೆಳೆಯುವ ಪ್ರಚಾರಾಂದೋಲನದ ಮುಖಂಡತ್ವವನ್ನು ಕಮ್ಯುನಿಸ್ಟರೇ ವಹಿಸಿದ್ದರು. ಅಕ್ಟೋಬರ್ 2, 1939 ರಂದು ಮುಂಬೈಯ 20000 ಗಿರಣಿ ಕಾರ್ಮಿಕರು ಯುದ್ಧವನ್ನು ವಿರೋಧಿಸಿ ಮುಷ್ಕರ ನಡೆಸಿದರು. ದೇಶದ ಇತರ ಭಾಗಗಳಲ್ಲೂ ಸಿಪಿಐ ಯುದ್ಧ ವಿರೋಧಿ ಮತ ಪ್ರದರ್ಶನಗಳನ್ನು ನಡೆಸಿತು. ಕಮ್ಯುನಿಸ್ಟರ ಚಟುವಟಿಕೆಗಳಿಂದ ಕುಪಿತರಾದ ಬ್ರಿಟಿಶ್ ಸರಕಾರ ಎಲ್ಲಾ ಪ್ರಮುಖ ಕಮ್ಯುನಿಸ್ಟ್ ಮುಖಂಡರನ್ನು ಬಂಧಿಸಿ ಜೈಲಿಗಟ್ಟಿತು. ಆದರೂ ಕಮ್ಯುನಿಸ್ಟ್ ಚಟುವಟಿಕೆಗಳ ಹೆಚ್ಚಿದ ಪ್ರತಿಭಟನೆ ಹಾಗೂ ಉಲ್ಲಂಘನೆಯ ಕಿಡಿಯನ್ನು ಆರಿಸಲು ಬ್ರಿಟಿಶ್ ಸರಕಾರಕ್ಕೆ ಆಗಲಿಲ್ಲ.

ಫ್ಯಾಸಿಸಂ ವಿರೋಧಿ ಘಟ್ಟ

ನಾಝಿಗಳು ಸೋವಿಯತ್ ಒಕ್ಕೂಟವನ್ನು ಅತಿಕ್ರಮಿಸಿದಾಗ ಎರಡನೇ ಮಹಾಯುದ್ಧದ ಸ್ವರೂಪವೇ ಬದಲಾಯಿತು. ಮೂಲತಃ ಸಾಮ್ರಾಜ್ಯಶಾಹಿ ಯುದ್ಧವಾಗಿದ್ದದ್ದು ಈಗ ಜನತಾಯುದ್ಧವಾಗಿ ಮಾರ್ಪಟ್ಟಿತು. ವಿಶ್ವಾದ್ಯಂತ ಕಮ್ಯುನಿಸ್ಟರು ಅಂಗೀಕರಿಸಿದ ನಿಲುವಿಗೆ ಅನುಗುಣವಾಗಿ ಸಿಪಿಐ ಕೂಡಾ ಆಗ ನಾಝಿವಾದ ಮತ್ತು ಫ್ಯಾಸಿಸಂ ವಿರುದ್ಧ ಪ್ರಜಾಪ್ರಭುತ್ವವಾದೀ ಶಕ್ತಿಗಳಿಗೆ ನೆರವಾಗುವುದು ತನ್ನ ಪ್ರಾಥಮಿಕ ಕರ್ತವ್ಯ ಎಂದು ಬಗೆಯಿತು. ಆ ಪ್ರಕಾರ ಕಾಂಗ್ರೆಸ್ ಕೊಟ್ಟ 1942 ರ ಆಗಸ್ಟ್ ಕ್ರಾಂತಿಯ ಕರೆಯಿಂದ ಸಿಪಿಐ ಅಧಿಕೃತವಾಗಿ ದೂರವುಳಿಯಿತು. ಆದರೆ ಪ್ರಜಾಸತ್ತಾತ್ಮಕ, ಆರ್ಥಿಕ ಹಕ್ಕುಗಳಿಗಾಗಿ ಹಾಗೂ ಕೋಮು ಸೌಹಾರ್ದಕ್ಕಾಗಿ ಜನತೆಯ ಆಂದೋಲನಗಳನ್ನು ಸಂಘಟಿಸುವುದನ್ನು ಮುಂದುವರಿಸಿತು. ಕ್ವಿಟ್ ಇಂಡಿಯಾ ಆಂದೋಲನದಲ್ಲಿ ಬಂಧಿಸಿದ್ದ ಕಾಂಗ್ರೆಸ್ ಮುಖಂಡರ ಬಿಡುಗಡೆಗಾಗಿಯೂ ಸಿಪಿಐ ಚಳುವಳಿ ನಡೆಸಿತು. ಸ್ಥಳೀಯ ಮಟ್ಟಗಳಲ್ಲಿ ಹಲವು ಕಮ್ಯುನಿಸ್ಟರು ವೈಯಕ್ತಿಕವಾಗಿ ಆ ರಾಷ್ಟ್ರೀಯ ಉತ್ಕರ್ಷದಲ್ಲಿ

ಕಿಸಾನ್ ಸಭಾ ರೈತರ ಕುಂದುಕೊರತೆಗಳಿಗೆ ದನಿ ನೀಡಿದ್ದಷ್ಟೇ ಅಲ್ಲ, ಅದಾಗಲೇ ಗಾಂಧಿವಾದಿ ನೇತೃತ್ವದಲ್ಲಿ ಒಂದು ಪ್ರೌಢ ಸ್ವರೂಪ ಪಡೆದಿದ್ದ ರಾಷ್ಟ್ರೀಯವಾದದ ಪ್ರಮುಖ ಧಾರೆಗೆ ಬೆಂಬಲ ನೀಡಿತು.

ಭಾಗವಹಿಸಿದರು, ಅದಕ್ಕೆ ರೈತರು, ಕಾರ್ಮಿಕವರ್ಗ ಹಾಗೂ ಬುಡಕಟ್ಟು ಜನಗಳ ಬೆಂಬಲ ಸಿಗುವಂತೆ ಮಾಡಿದರು. 1943 ರ ಬಂಗಾಳದ ಮನುಷ್ಯ ನಿರ್ಮಿತ ಬರಗಾಲದಲ್ಲಿ ಕಮ್ಯುನಿಸ್ಟರು ನಡೆಸಿದ ಪರಿಹಾರ ಹಾಗೂ ಪುನರ್ವಸತಿ ಕೆಲಸಗಳಿಂದಾಗಿ ಜನರ ಮೆಚ್ಚುಗೆ ಗಳಿಸಿದರು. ಈ ಸಮಯದಲ್ಲೇ ಕಮ್ಯುನಿಸ್ಟರ ಪ್ರಯತ್ನದಿಂದಾಗಿ ಮಧ್ಯಮ ವರ್ಗದ ಬುದ್ಧಿಜೀವಿಗಳು-ವಿಶೇಷವಾಗಿ ಬಂಗಾಳದಲ್ಲಿ-ಮಾರ್ಕ್ಸ್‌ವಾದ-ಲೆನಿನ್ ವಾದದ ಪ್ರಭಾವಕ್ಕೊಳಗಾದರು. ಇಪ್ಟಾ(ಭಾರತೀಯ ಜನತಾ ನಾಟಕ ಸಂಘ - IPTA) ದಂತಹ ಸಾಂಸ್ಕೃತಿಕ ಸಂಘಟನೆಗಳ ಕೆಲಸದ ಪ್ರಭಾವ ಈಗಲೂ ಅಚ್ಚಳಿಯದೆ ಉಳಿದಿರುವುದನ್ನು ಕಾಣಬಹುದು. 1942-43 ರ ಅವಧಿಯಲ್ಲಿ ಇವೆಲ್ಲದರಿಂದಾಗಿ ಸಿಪಿಐನ ಸದಸ್ಯ ಸಂಖ್ಯೆ ಗಮನಾರ್ಹವಾಗಿ ಹೆಚ್ಚಿತು. ಇದು ಸಿಪಿಐಗೆ ದೊಡ್ಡ ರಾಜಕೀಯ ತೊಂದರೆಯ ಸಮಯವೂ ಆಗಿತ್ತು. ಕ್ವಿಟ್ ಇಂಡಿಯಾ ಆಂದೋಲನದ ಬಗ್ಗೆ ಪಕ್ಷದ ನಿಲುವಿನಿಂದಾಗಿ ತಾವು ರಾಷ್ಟ್ರೀಯವಾದದ ಮುಖ್ಯಧಾರೆಯಿಂದ ದೂರವಾಗಿದ್ದೆವು. ನಮ್ಮನ್ನು 'ದೇಶದ್ರೋಹಿ'ಗಳು ಎಂದು ಚಿತ್ರಿಸುವ ಕಾಂಗ್ರೆಸ್ಸಿನ ಕೆಟ್ಟ ಪ್ರಚಾರ ಚಳುವಳಿಯಿಂದಾಗಿ ಪರಿಸ್ಥಿತಿ ಇನ್ನಷ್ಟು ಕಷ್ಟಕರವಾಗಿತ್ತು. ಆದರೆ ನಾವು ಜನಗಳೊಂದಿಗೇ ಇರಲು ದೃಢ ನಿರ್ಧಾರ ಮಾಡಿದ್ದೆವು. ಇದರಿಂದಾಗಿ ಸಿಪಿಐ ಗೆ ತನ್ನ ರಾಜಕೀಯ ಸ್ಥಾನಮಾನವನ್ನು ಉಳಿಸಿಕೊಳ್ಳಲು ಸಾಧ್ಯವಾಯಿತು.

ಹೊಸ ಹುಮ್ಮಸ್ಸು

ಎರಡನೇ ಮಹಾಯುದ್ಧದಲ್ಲಿ ಮಿತ್ರ ರಂಗದ ವಿಜಯ, ಯುದ್ಧಾನಂತರ ಬ್ರಿಟನ್ನಿನಲ್ಲಿ ಆರ್ಥಿಕ ಬಿಕ್ಕಟ್ಟು ಹಾಗೂ ಸಾಮ್ರಾಜ್ಯಶಾಹಿ ಮತ್ತು ರಾಷ್ಟ್ರೀಯವಾದದ ನಡುವಿನ ವೈರುಧ್ಯ ತೀಕ್ಷ್ಣಗೊಂಡುದರಿಂದ ದಕ್ಷಿಣ ಏಶ್ಯಾದಲ್ಲಿ ವಸಾಹುತವಾದದ ಕುಸಿತ ಅನಿವಾರ್ಯವಾಯಿತು. ರಾಜಕೀಯ ಶಕ್ತಿಗಳ ಹೊಸ ಬಲಾಬಲಗಳಿಂದಾಗಿ ಭಾರತದಲ್ಲಿ ಯುದ್ಧಾನಂತರ ಒಂದು ಹೊಸ ಉತ್ಕರ್ಷ ಕಂಡುಬಂತು. ಕಮ್ಯುನಿಸ್ಟರು ಇದರಲ್ಲಿ ಒಂದು ನೇತೃತ್ವದ ಪಾತ್ರವಹಿಸಿದರು. ಪ್ರತಿಭಟನಾ ರಾಜಕೀಯದ ವಿಭಿನ್ನ ಧಾರೆಗಳು ರಾಷ್ಟ್ರೀಯ ವಾದದ ಪ್ರಮುಖ ಧಾರೆಯೊಂದಿಗೆ ಸೇರಿಕೊಂಡ ಸನ್ನಿವೇಶ

ಪುಟ 21 ನೋಡಿ ▶



1939 ರಲ್ಲಿ ರಚನೆಗೊಂಡ "ಎಡ ಕ್ರೋಢೀಕರಣ ಸಮಿತಿ" ಮಧ್ಯದಲ್ಲಿ ಸುಭಾಷ್ ಚಂದ್ರಬೋಸ್, ಪಕ್ಕದಲ್ಲಿ ಸಹಜಾನಂದ ಸರಸ್ವತಿಯವರನ್ನು ಕಾಣಬಹುದು. ಕಮ್ಯುನಿಸ್ಟರು ಮತ್ತು ಇತರ ಎಡಪಂಥೀಯ ಸೇರಿ ರಚಿಸಿಕೊಂಡ ಈ ಸಮಿತಿ ಕಾಂಗ್ರೆಸ್ ಮುಖಂಡರು ಪ್ರಜಾಪ್ರಭುತ್ವ ವಿರೋಧಿ ಕ್ರಮಗಳನ್ನು ಪ್ರತಿಭಟಿಸಿ ಜುಲೈ 9, 1939 ರಂದು 'ಎಡಪಂಥೀಯ ದಿನ ಆಚರಣೆಗೆ ಕರೆ ನೀಡಿತು.

ಐವತ್ತು ವರ್ಷಗಳ ನಂತರ ಬಿಕ್ಕಟ್ಟು ಮತ್ತು ಪರಿಹಾರ

ಪಿ.ರಾಮಚಂದ್ರನ್



ವಿಶಾಲ ಶ್ರಮಜೀವಿ ಜನಸಮೂಹಗಳನ್ನು ಪ್ರತಿನಿಧಿಸುವ ಜನತಾ ಪ್ರಜಾಪ್ರಭುತ್ವವನ್ನು ಸ್ಥಾಪಿಸುವ ಮೂಲಕವಷ್ಟೆ ದೇಶ ಮುನ್ನಡೆಯಲು ಸಾಧ್ಯ. ಅದರ ಮಿತ್ರ ವರ್ಗಗಳ ನೇತೃತ್ವದಲ್ಲಿ ಮಾತ್ರವೇ ದೇಶದ ಮುನ್ನಡೆ ಸಾಧ್ಯ ಎಂಬ ಸಿಪಿಐ(ಎಂ) ಪ್ರತಿಪಾದನೆ ಎಷ್ಟುಸರಿಯಾದದ್ದು ಎಂಬುದನ್ನು ಕಳೆದ ೫೦ ವರ್ಷಗಳ ಅನುಭಗಳ ವಸ್ತುನಿಷ್ಠ ವಿಶ್ಲೇಷಣೆ ಸಾರಿ ಹೇಳುತ್ತಿದೆ.

ನಮ್ಮ ಸ್ವಾತಂತ್ರ್ಯದ 50ನೇ ವಾರ್ಷಿಕೋತ್ಸವದ ಆಚರಣೆಯ ಸಂದರ್ಭವನ್ನು ಮೂರು ರೀತಿಗಳಲ್ಲಿ ಪ್ರಯೋಜನಕಾರಿಯಾಗಿ ಬಳಸಿಕೊಳ್ಳಬಹುದು.

ಮೊದಲನೆಯದಾಗಿ, ಸುಮಾರು ಎರಡು ಶತಮಾನಗಳ ಕಾಲ ವಿದೇಶಿ ಪ್ರಾಬಲ್ಯದ ವಿರುದ್ಧ ಸ್ವಾತಂತ್ರ್ಯಕ್ಕಾಗಿ ಧೀರೋದಾತ್ತವಾಗಿ ಹೋರಾಡಿದ ದೇಶವೊಂದರ ಜನಗಳ ಚಾರಿತ್ರಿಕ ಅನುಭವವನ್ನು ನೆನಪಿಸಿಕೊಳ್ಳುವುದು. ಖಂಡಿತವಾಗಿಯೂ ನೂರಾರು ಹುತಾತ್ಮರ ಬಲಿದಾನವನ್ನು ನೆನಪಿಸಿಕೊಳ್ಳಲೇಬೇಕು. ಆ ಮೂಲಕ ಅವರ ಧೀರ ಕಾಣಿಕೆ ಒಂದು ಹೊಸ ಭಾರತವನ್ನು ಕಟ್ಟುವ ಹೋರಾಟವನ್ನು ಮುಂದುವರೆಸುವಲ್ಲಿ ಹೊಸ ಪೀಳಿಗೆಗೆ ಸ್ಫೂರ್ತಿ ತುಂಬಬೇಕು. ಹೀಗೆ ಮಾಡುವಾಗ ನಾವು ಕೆಲವು ಮುಖಂಡರಿಗೆ-ಅವರು ನಿಸ್ಸಂದೇಹವಾಗಿಯೂ ಎಷ್ಟೇ ಮಹಾನ್ ವ್ಯಕ್ತಿಗಳಾಗಿದ್ದರೂ-ಮಾತ್ರ ಶ್ರದ್ಧಾಂಜಲಿ ಅರ್ಪಿಸಿ ಸುಮ್ಮನಾಗದೇ ಭಾರತದ ಮಿಲಿಯಾಂತರ ಜನಸಾಮಾನ್ಯರ ಪಾತ್ರವನ್ನು ನೆನಪಿಸಿಕೊಳ್ಳಬೇಕು. ಈ ಜನ ಸಾಮಾನ್ಯರ ತ್ಯಾಗ-ಬಲಿದಾನಗಳಿಂದ ಕೂಡಿದ ಹೋರಾಟ ರಾಷ್ಟ್ರೀಯ ಹೋರಾಟದ ಯಶಸ್ವಿಗೆ ಕಾರಣವಾದ ಮೂಲಭೂತ ಅಂಶ.

ಎರಡೆಯನೆಯದಾಗಿ, ಈ ಸಂದರ್ಭವನ್ನು ಈ ರೀತಿಯ ಸ್ಮರಣೆಗಷ್ಟೇ ಸೀಮಿತಗೊಳಿಸದೆ ಸ್ವಾತಂತ್ರ್ಯದ ಕಳೆದ 50 ವರ್ಷಗಳ ಗೆಲುವುಗಳನ್ನು, ಸೋಲುಗಳನ್ನು ಗಂಭೀರವಾಗಿ ವಿಶ್ಲೇಷಿಸುವ ಪ್ರಯತ್ನ ನಮಗೆ ಮುಖ್ಯವಾಗಬೇಕು. ಇದನ್ನು ಪಕ್ಕಕ್ಕೆ ತಳ್ಳಿ ಕೇವಲ ಭೂತಕಾಲದ ಬಗ್ಗೆ, ಇತಿಹಾಸದ ಬಗ್ಗೆ, ವೀರರ ಬಗ್ಗೆ, ಮುಖಂಡರ ಬಗ್ಗೆ, ಅವರ ತ್ಯಾಗಬಲಿದಾನಗಳ ಬಗ್ಗೆ ಮಾತನಾಡುತ್ತಿದ್ದರೆ ಅದು ಒಂದು ರೀತಿಯ ಪೂಜೆ ಅಥವಾ ಭಜನೆಯಾಗಿ ಬಿಡಬಹುದು.

ಮೂರನೆಯದಾಗಿ, ಕಳೆದ ಐವತ್ತು ವರ್ಷಗಳ ದೇಶದ ಆಗು-ಹೋಗುಗಳ ಒಂದು ವಾಸ್ತವಿಕ ಹಾಗೂ ಗಂಭೀರ ವಿಶ್ಲೇಷಣೆ ಈ ಅನುಭವಗಳಿಂದ ಸರಿಯಾದ ಪಾಠ ಕಲಿತು ಒಂದು ಹೊಸ ಭಾರತವನ್ನು ಕಟ್ಟುವ ಹೋರಾಟವನ್ನು ಪರಿಣಾಮಕಾರಿಯಾಗಿ ಮುಂದೊಯ್ಯುವ ಉದ್ದೇಶ ಹೊಂದಿರಬೇಕು. ಈ ನವಭಾರತದಲ್ಲಿ ನಮ್ಮ ಇಡೀ ಜನತೆ ಸಂತೋಷ, ಸಮೃದ್ಧಿ ಹೊಂದುವಂತಾಗಬೇಕು. ಇಡೀ ದೇಶ ಒಂದು ಉಜ್ವಲ ಭವಿಷ್ಯ ಹೊಂದುವಂತಾಗಬೇಕು.

ಹಿಂದಿರುಗಿ ನೋಡಿದಾಗ

ನಾವೇನು ಕಾಣುತ್ತೇವೆ? ದೇಶ ಸ್ವತಂತ್ರವಾದಾಗ ಭಾರತೀಯ ಜನತೆ ಮಹಾನ್ ನಿರೀಕ್ಷೆಗಳನ್ನಿಟ್ಟುಕೊಂಡಿದ್ದರು. ಇವುಗಳಲ್ಲಿ ಬಹಳಷ್ಟು ಕೇವಲ ಕನಸುಗಳಾಗಿ ಉಳಿದಿವೆ. ಈ ಐವತ್ತು ವರ್ಷಗಳಲ್ಲಿ ಹಲವು ರಂಗಗಳಲ್ಲಿ ನಾವು ಸಾಧಿಸಿದ ಪ್ರಗತಿಯನ್ನು ಉಪೇಕ್ಷಿಸುವುದಾಗಲೀ, ಅದರ ಮಹತ್ವವನ್ನು ಅಲ್ಲಗಳೆಯುವುದಾಗಲೀ ಸರಿಯಲ್ಲ, ಈ ಸಾಧನೆಗಳ ಪಟ್ಟಿ ಸಾಕಷ್ಟು ದೊಡ್ಡದಾಗಿಯೇ ಇದೆ. ದೇಶದ ಕೈಗಾರಿಕಾ ಬುನಾದಿಯನ್ನು ಬಲಗೊಳಿಸಲಾಗಿದೆ; ಗ್ರಾಮೀಣ ಜನಗಳ ಕೆಲವು ವಿಭಾಗಗಳ ಜೀವನದಲ್ಲಿ ಸಕಾರಾತ್ಮಕ ಬದಲಾವಣೆಗಳಾಗಿವೆ; ಶೈಕ್ಷಣಿಕ ಪ್ರಗತಿಯೂ ಪ್ರಶಂಸಾರ್ಹ; ಇಡೀ ಜನ ಸಮೂಹದ ಸರ್ವಸಾಮಾನ್ಯ ಜೀವನ ಮಟ್ಟ ತುಸು ಉತ್ತಮಗೊಂಡಿದೆ. ಪ್ರಜಾಪ್ರಭುತ್ವ ಸಂಸ್ಥೆಗಳನ್ನು ಉಳಿಸಿಕೊಂಡಿರುವುದು ನಿಸ್ಸಂದೇಹವಾಗಿಯೂ ಒಂದು ಮಹತ್ವಪೂರ್ಣ ಸಾಧನೆ. ವಿಶ್ವ ವ್ಯವಹಾರಗಳಲ್ಲಿ ಭಾರತದ ಸ್ಥಾನಮಾನವೂ ಗಮನಾರ್ಹ ರೀತಿಯಲ್ಲಿ ಹೆಚ್ಚಿದೆ. ಕಳೆದ ಐದು ದಶಕಗಳಲ್ಲಿ ಆದ ದೊಡ್ಡ ಸಕಾರಾತ್ಮಕ ಬದಲಾವಣೆಗಳ ಬಗ್ಗೆ ಕುರುಡಾಗುವುದು ಮೂರ್ಖತನವಾಗುತ್ತದೆ.

ಆದರೆ ಆಗಸ್ಟ್ 15, 1947 ರಂದು ತೆರೆದುಕೊಂಡ ಅವಕಾಶ, ಜನರು ಇಟ್ಟುಕೊಂಡಿದ್ದ ಮಹಾನ್ ನಿರೀಕ್ಷೆಗಳು, ಆಕಾಂಕ್ಷೆಗಳು, ಅವುಗಳಿಗೆ ಇದ್ದ ಅಪಾರ ಅವಕಾಶಗಳು ಇವಕ್ಕೆ ಹೋಲಿಸಿದರೆ ನಮ್ಮ ನಿಜವಾದ ಸಾಧನೆಗಳು ಜನಗಳಲ್ಲಿ ಸ್ಫೂರ್ತಿ ತುಂಬುತ್ತಿಲ್ಲ ಎಂಬುದೂ ಕೂಡಾ ಅಷ್ಟೇ ನಿಜ. ಇನ್ನೊಂದೆಡೆ ಜನಗಳಲ್ಲಿ ಹತಾಶೆಯ, ಬೇಸರದ ಭಾವನೆ ಆಳವಾಗಿ ಹರಡಿದ್ದು ಅದು ಸಿನಿಕತನದ ಅಂಚಿಗೆ ಬಂದಿದೆ. ಭಾರತದ ಕಮ್ಯುನಿಸ್ಟ್ ಆಂದೋಲನ ಈ ನಕಾರಾತ್ಮಕ ಅಂಶಗಳ ಬಗ್ಗೆ ಆರಂಭದಿಂದಲೇ ಎಚ್ಚರಿಸುತ್ತಾ ಬಂದಿದೆ. ಈ ಹತಾಶೆ, ನಿರಾಸೆ ಉಂಟಾಗಿರುವುದು ನಮ್ಮ ದೇಶದ ಕಳೆದ ಕೆಲವು ದಶಕಗಳ ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ರಂಗದ ಹಲವು ನಕಾರಾತ್ಮಕ ಅಂಶಗಳು ಹಾಗೂ ಅನುಭವಗಳಿಂದಾಗಿ. ಬಿಕ್ಕಟ್ಟು ಜನಜೀವನದ ಹಲವು ಆಯಾಮಗಳಲ್ಲಿ ಪ್ರತಿಫಲನಗೊಂಡಿದೆ - ನಿರುದ್ಯೋಗಿಗಳ ಹೆಚ್ಚಳ, ಹಣದುಬ್ಬರದಿಂದ ಜನಸಾಮಾನ್ಯರ ಸಂಕಟಗಳಲ್ಲಿ ಹೆಚ್ಚಳ, ಕೋಟ್ಯಾಂತರ ರೈತರು, ಕೃಷಿ ಕೂಲಿಕಾರರ ಹದಗೆಡುತ್ತಿರುವ ಪರಿಸ್ಥಿತಿ, ಸುಮಾರು ಮೂರು ಲಕ್ಷ ಸಣ್ಣ ಪ್ರಮಾಣದ ಕಾರ್ಖಾನೆಗಳು ಮುಚ್ಚಿರುವುದು, ದೇಶವನ್ನು ಹಾಳುಗೆಡುತ್ತಿರುವ ಗಂಭೀರ ಸಾಂಕ್ರಾಮಿಕ ರೋಗಗಳನ್ನು ಎದುರಿಸುವಲ್ಲಿನ ವಿಫಲತೆ, ವಸತಿ, ಕುಡಿಯುವ ನೀರು, ಪ್ರಾಥಮಿಕ ನಾಗರೀಕ ಸೌಲಭ್ಯಗಳ ಅಭಾವ ಇವೆಲ್ಲಾ ಬಿಕ್ಕಟ್ಟಿನ ಪ್ರತೀಕಗಳು.

ನಮ್ಮ ಮುಂದಿರುವ ಪ್ರಶ್ನೆ

ಇದರೊಂದಿಗೆ ದೇಶದ ಚೈತನ್ಯವನ್ನೇ ಒಳಗಿಂದಲೇ ಕೊರೆದುಹಾಕುತ್ತಿರುವ ವ್ಯಾಪಕ ಭ್ರಷ್ಟಾಚಾರ ಜನಗಳನ್ನು ಸಂಪೂರ್ಣ ನಿರಾಶರನ್ನಾಗಿಸಿದೆ. ರಾಷ್ಟ್ರೀಯ ಐಕ್ಯತೆಗೆ ಬಂದಿರುವ ಬೆದರಿಕೆ, ವಿಚ್ಛಿದ್ರಕಾರಿ ಕೋಮುವಾದಿ ಹಾಗೂ ಸಂಕುಚಿತ ಪ್ರವೃತ್ತಿಗಳ ಕೊರೆತ, ಅದರಿಂದಾಗಿ ದೊಡ್ಡ ಪ್ರಮಾಣದಲ್ಲಿ ಪರಸ್ಪರ ದಾಯಾದಿ ಕಲಹಗಳು - ಇವೆಲ್ಲಾ ಜನಗಳಲ್ಲಿ ತೀವ್ರ ಯಾತನೆಯುಂಟುಮಾಡುತ್ತಿವೆ.

ಮಹಿಳೆಯರ ಮೇಲೆ ಹೆಚ್ಚುತ್ತಿರುವ ಅತ್ಯಾಚಾರಗಳು, ದಲಿತರ ವಿರುದ್ಧ ಕಿರುಕುಳ, ಧಾಳಿಗಳ ಮುಂದುವರಿಕೆ ನಮ್ಮ ನಾಗರೀಕ ಜೀವನ ಮಟ್ಟ ತೀವ್ರ ಸ್ವರೂಪದಲ್ಲಿ ಹದಗೆಟ್ಟಿದೆ ಎಂಬುದನ್ನು ಸೂಚಿಸುತ್ತವೆ. ನಕಾರಾತ್ಮಕ ಅಂಶಗಳು ಅದೆಷ್ಟೋ! ಈ 50ನೇ ವಾರ್ಷಿಕೋತ್ಸವದಂದು ನಾವು ಈ ಸ್ಥಿತಿ ಏರ್ಪಡಲು ಏನು ಕಾರಣ ಎಂದು ಚಿಂತಿಸಬೇಕಾಗಿದೆ.

ಸ್ವಾತಂತ್ರ್ಯದ ಆರಂಭದಲ್ಲಿ ದೇಶದ ಹೊಸ ನಾಯಕತ್ವದಲ್ಲಿ ಅಪಾರ ವಿಶ್ವಾಸವಿಟ್ಟಿದ್ದ, ಸ್ವಾತಂತ್ರ್ಯ ಹೋರಾಟ ಉಂಟುಮಾಡಿದ ಮಹಾನ್ ನಿರೀಕ್ಷೆಗಳಿಂದಾಗಿ ನಮ್ಮ ಜನಗಳು ಬಹಳ ಆಶಾವಾದಿಗಳಾಗಿದ್ದರು. ಕೆಲವು ರಾಜಕೀಯ ಪಕ್ಷಗಳು ಮತ್ತು ಮುಖಂಡರು ಕೂಡಾ ಒಂದು ಉಜ್ವಲ ಭವಿಷ್ಯದ

ಬಣ್ಣ-ಬಣ್ಣದ ಚಿತ್ತಾರವನ್ನು ಜನಗಳ ಮುಂದಿಟ್ಟರು. ಆದರೆ ಈಗ ನಮ್ಮ ಮುಂದಿರುವ ಪ್ರಶ್ನೆ - ಏಕೆ ಈ ನಿರೀಕ್ಷೆಗಳು ಕೈಗೂಡಲಿಲ್ಲ?

ಕಾರ್ಮಿಕ ವರ್ಗದ ಹಾಗೂ ಶ್ರಮಜೀವಿ ಜನಗಳ ಕ್ರಾಂತಿಕಾರಿ ಮುಂಚೂಣಿಯಾದ ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಹೀಗೆ ಮೂಡಿ ಬಂದಿರುವ ನಕಾರಾತ್ಮಕ ಅಂಶಗಳಿಗೆ ಮೂಲಭೂತ ಕಾರಣಗಳನ್ನು ಅಧ್ಯಯನ ಮಾಡಲು ಹಾಗೂ ವಿಶ್ಲೇಷಿಸಲು ಮಾರ್ಕ್ಸ್‌ವಾದದ ವಿಜ್ಞಾನವನ್ನು ಅನ್ವಯಿಸಲು ಗಂಭೀರವಾಗಿ ಪ್ರಯತ್ನ ನಡೆಸಿದೆ. 1968 ರಲ್ಲಿ ಅಂಗೀಕರಿಸಿದ ಪಕ್ಷದ ಕಾರ್ಯಕ್ರಮ ಈ ನಕಾರಾತ್ಮಕ ಅಂಶಗಳಿಗೆ ಆ ಮೂಲಕ ದೇಶದಲ್ಲಿ ಬಿಕ್ಕಟ್ಟನ್ನು ಹೆಚ್ಚಿಸಲು ಕಾರಣವಾದ ಅಂಶಗಳಿಗೆ ಮೂಲಭೂತ ಕಾರಣಗಳನ್ನು ವಿವರಿಸಿದೆ.

ಸಂಕುಚಿತ ವರ್ಗ ಹಿತಾಸಕ್ತಿ

ದೇಶದ ಈಗಿನ ಶೋಚನೀಯ ಪರಿಸ್ಥಿತಿಗೆ ಮೂಲಭೂತ ಕಾರಣವೆಂದರೆ ಮುಖಂಡತ್ವ ಬಂಡವಾಳಶಾಹಿಗಳ, ಭೂಮಾಲಕರ ಕೈಯಲ್ಲಿರುವುದು, ನಿರ್ದಿಷ್ಟವಾಗಿ ಹಿರೇ ಬಂಡವಾಳಶಾಹಿಗಳು ಅದರ ನೇತೃತ್ವ ವಹಿಸಿರುವುದು - ಇದರಿಂದಾಗಿ ಪ್ರಭುತ್ವ ಅಧಿಕಾರವನ್ನು ಬಳಸಿ ದೇಶವನ್ನು ಹೊಸದೊಂದು ದಾರಿಯಲ್ಲಿ ಮುಂದೊಯ್ಯುವ ಬದಲು ಅದನ್ನು ಮುಖ್ಯವಾಗಿ ಸಂಕುಚಿತ ವರ್ಗಾಹಿತಾಸಕ್ತಿಗಳನ್ನು ಈಡೇರಿಸಿಕೊಳ್ಳಲು ಬಳಸಲಾಯಿತು.

ನೈಜ, ಪ್ರಾಮಾಣಿಕ ಭೂಸುಧಾರಣೆಗಳನ್ನು ತಂದಿದ್ದರೆ ಅದರಿಂದ ಕೋಟ್ಯಾಂತರ ಎಕರೆ ಭೂಮಿಯನ್ನು ಭೂಹೀನ ಬಡವರಿಗೆ, ಬಡ ರೈತರಿಗೆ, ಹಂಚಬಹುದಿತ್ತು. ಇದರಲ್ಲಿ ವಿಫಲವಾಗಲು ಮುಖ್ಯ ಕಾರಣ ಬಂಡವಾಳಶಾಹಿ ವರ್ಗ ಮೈತ್ರಿ ಹೊಂದಿರುವ ಭೂಮಾಲಕ ವರ್ಗದ ಪ್ರಭಾವ ಮತ್ತು ಶಕ್ತಿ. ಭೂಮಾಲಕತ್ವವನ್ನು ಕೊನೆಗೊಳಿಸಿ ಭೂಮಿಯ ಹಂಚಿಕೆಯಾಗಿದ್ದರೆ ಅದು ಇಡೀ ಭಾರತದ ಆರ್ಥಿಕ ಮುನ್ನಡೆಯ ದಾರಿಯನ್ನು ತೆರೆಯುವಲ್ಲಿ ಮಹತ್ವದ ಕಾಣಿಕೆ ನೀಡುತ್ತಿತ್ತು. ಇಂದೂ ಕೂಡಾ ರೈತರಿಗೆ ಭೂಮಿ ಕೊಡುವಲ್ಲಿನ ಈ ವಿಫಲತೆಯಿಂದಾಗಿ ಎಂತಹ ಪರಿಸ್ಥಿತಿ ಉಂಟಾಗಿದೆಯೆಂದರೆ ದೇಶದ ಜನಸಂಖ್ಯೆಯ 70% ರಷ್ಟಿರುವ ರೈತರು ಹೆಚ್ಚೆಚ್ಚು ಸಂಕಟ-ನರಳಾಟಗಳಿಗೆ ಒಳಗಾಗುತ್ತಿದ್ದಾರೆ.

ಭಾರತದ ಆರ್ಥಿಕ ನಿರ್ದಿಷ್ಟವಾಗಿ ಭಾರತದ ಉದ್ದಿಮೆಯನ್ನು ಒಂದು ಸ್ವಾವಲಂಬೀ ಆಧಾರದಲ್ಲಿ ಬೆಳೆಸಿದರೆ ಮಾತ್ರವೇ ದೇಶ ಮುನ್ನಡೆ ಸಾಧಿಸಲು ಸಾಧ್ಯ ಎಂದು ಪಕ್ಷದ ಕಾರ್ಯಕ್ರಮ ಹೇಳಿದೆ. ಸಾಮ್ರಾಜ್ಯಶಾಹಿ ನೆರವನ್ನು ಯಾಚಿಸುವ ಮತ್ತು ಬಹುರಾಷ್ಟ್ರೀಯ ಕಂಪನಿಗಳೊಂದಿಗೆ ಸೇರಿಕೊಳ್ಳುವ ದಾರಿ ಹಿಡಿದುದರಿಂದಾಗಿ ಆಳುವ ವರ್ಗಗಳು ಒಂದು ಸ್ವಾವಲಂಬೀ ಆರ್ಥಿಕವನ್ನು ಕಟ್ಟುವಲ್ಲಿ ವಿಫಲವಾಗಿವೆ. ವಾಸ್ತವತೆಯೆಂದರೆ ಈಗಲೂ ಭಾರತದ ಆರ್ಥಿಕವನ್ನು ಹಿಂದುಳಿದ ಆರ್ಥಿಕವೆಂದೇ ಪರಿಗಣಿಸಲಾಗುತ್ತಿದೆ. ವಿಶೇಷವಾಗಿ ಚೀನಾ, ಕೊರಿಯಾದಂತಹ ದೇಶಗಳು ಸಾಧಿಸಿದ ಪ್ರಗತಿಗೆ ಹೋಲಿಸಿದರೆ ಇದು ಎದ್ದು ಕಾಣುತ್ತದೆ. ವಿದೇಶಿ ತಂತ್ರಜ್ಞಾನ ಮತ್ತು ನೆರವು ತ್ವರಿತ ಕೈಗಾರೀಕರಣಕ್ಕೆ ಅಗತ್ಯವೆಂಬುದು ನಿಜವಾದರೂ ಸಾರ್ವಜನಿಕ ವಲಯ ಮತ್ತು ಇತರ ವಲಯಗಳಲ್ಲಿ ನೈಜ ಭಾರತೀಯ ಉದ್ದಿಮೆಗಳಿಗೆ ಪ್ರೋತ್ಸಾಹದ ಆಧಾರದಲ್ಲಿ ಒಂದು ಸ್ವತಂತ್ರ ಆರ್ಥಿಕವನ್ನು ಬಲಪಡಿಸುವುದರ ಮೇಲೆಯೇ ಪ್ರಧಾನ ಒತ್ತು ಇರಬೇಕು ಎಂದು ಸಿಪಿಐ(ಎಂ) ಹೇಳುತ್ತಾ ಬಂದಿದೆ. ನಮ್ಮ ದೇಶಕ್ಕೆ ನೇತೃತ್ವ ನೀಡಿದವರ ವರ್ಗ ಸ್ವಭಾವದಿಂದಾಗಿ ಇದನ್ನು ಮಾಡಲಿಲ್ಲ.

ದೇಶದ ಐಕ್ಯತೆಗೆ ಬೆದರಿಕೆಯೊಡ್ಡಿರುವ ಸರ್ವವ್ಯಾಪಿ ಬಿಕ್ಕಟ್ಟು, ಸದಾ ಹೆಚ್ಚುತ್ತಿರುವ ಭ್ರಷ್ಟಾಚಾರ, ಪ್ರಜಾಸತ್ತಾತ್ಮಕ ಸಂಸ್ಥೆಗಳು ಮುರಿದು ಬಿದ್ದಿರುವುದು ಹಾಗೂ ಸಾಂಸ್ಕೃತಿಕ ಅವನತಿ ಇವೆಲ್ಲಾ ಆಳುವ ವರ್ಗಗಳು ಅನುಸರಿಸುತ್ತಾ ಬಂದಿರುವ ಸಂಕುಚಿತ ಧೋರಣೆಗಳ ಫಲಿತಾಂಶ.

ಜನಗಳನ್ನು ಅಧಿಕಾರ ಸಂಪನ್ನಗೊಳಿಸಬೇಕು


ಈ ಒಟ್ಟಾರೆ ಸಂದರ್ಭದಲ್ಲಿ ನಾವು ನಮ್ಮ ಪಕ್ಷದ ಕಾರ್ಯಕ್ರಮದ ಅತ್ಯಂತ ಮಹತ್ವಪೂರ್ಣ ಅಂಶವನ್ನು ನೆನಪಿಸಿಕೊಳ್ಳಬೇಕು. ಭಾರತ ತನ್ನ ಅಸಂಖ್ಯ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬೇಕಾದರೆ, ಬಿಕ್ಕಟ್ಟಿನಿಂದ ಹೊರ ಬಂದು ಮುನ್ನಡೆ ಸಾಧಿಸಬೇಕಾದರೆ ಅದು ರಾಜಕೀಯ ಶಕ್ತಿ ಜನಸಾಮಾನ್ಯರ ಕೈಗಳಲ್ಲಿ ಇದ್ದರೆ ಮಾತ್ರ ಸಾಧ್ಯ ಎಂದು ನಮ್ಮ ಪಕ್ಷದ ಕಾರ್ಯಕ್ರಮ ಒತ್ತಿ ಹೇಳಿದೆ. ಗುತ್ತೇದಾರಿ ಬಂಡವಾಳಶಾಹಿ ಮತ್ತು ಭೂಮಾಲಕತ್ವ ಭಾರತದ ರಾಜಕೀಯ ರಚನೆ, ನಮ್ಮ ಆರ್ಥಿಕ, ನಮ್ಮ ಸಂಸ್ಕೃತಿ, ನಮ್ಮ ಸಂಸ್ಥೆಗಳು ಇತ್ಯಾದಿಗಳ ಮೇಲೆ ಹೊಂದಿರುವ ಬಿಗಿಹಿಡಿತವನ್ನು ಕೊನೆಗೊಳಿಸಬೇಕು ಎಂಬುದು ಇದರರ್ಥ. ಜನಗಳನ್ನು ನಿಜವಾಗಿಯೂ ಅಧಿಕಾರ ಸಂಪನ್ನಗೊಳಿಸಬೇಕು. ಅದರಲ್ಲೂ ನಿರ್ದಿಷ್ಟವಾಗಿ ಕಾರ್ಮಿಕ ವರ್ಗ, ಕೃಷಿ ಕೂಲಿಕಾರರು, ಬಡರೈತರು ಮತ್ತು ಇತರ ಹಲವು ವಿಭಾಗಗಳ ಜನರು ದೇಶದ ಜೀವನದಲ್ಲಿ ತಮ್ಮ ದನಿಯೆತ್ತಲು ಸಾಧ್ಯವಾಗಬೇಕು.


ಜನಗಳನ್ನು ನಿಜವಾಗಿಯೂ ಅಧಿಕಾರ ಸಂಪನ್ನಗೊಳಿಸಬೇಕು. ಅದರಲ್ಲೂ ನಿರ್ದಿಷ್ಟವಾಗಿ ಕಾರ್ಮಿಕ ವರ್ಗ, ಕೃಷಿ ಕೂಲಿಕಾರರು, ಬಡರೈತರು ಮತ್ತು ಇತರ ಹಲವು ವಿಭಾಗಗಳ ಜನರು ದೇಶದ ಜೀವನದಲ್ಲಿ ತಮ್ಮ ದನಿಯೆತ್ತಲು ಸಾಧ್ಯವಾಗಬೇಕು.

ಆದ್ದರಿಂದ ಪಕ್ಷದ ಕಾರ್ಯಕ್ರಮ ಜನತಾ ಪ್ರಜಾಪ್ರಭುತ್ವವನ್ನು ಸ್ಥಾಪಿಸುವ ಅಗತ್ಯವನ್ನು ಮುಂದಿಟ್ಟಿದೆ. ಈ ಜನತಾ ಪ್ರಜಾಪ್ರಭುತ್ವವೆಂಬುದು ವಿಶಾಲ ಶ್ರಮಜೀವಿ ಜನಸಮೂಹಗಳನ್ನು ಪ್ರತಿನಿಧಿಸುವ ಒಂದು ಸಾಮಾಜಿಕ ರಾಜಕೀಯ ವ್ಯವಸ್ಥೆ. ಈ ಒಂದು ವ್ಯವಸ್ಥೆಯನ್ನು ಸ್ಥಾಪಿಸುವ ಮೂಲಕವಷ್ಟೆ ದೇಶ ಮುನ್ನಡೆಯಲು ಸಾಧ್ಯ. ಭಾರತ ಕಾರ್ಮಿಕ ವರ್ಗ ಮತ್ತು ಅದರ ಮಿತ್ರವರ್ಗಗಳ ಮುಖಂಡತ್ವದಲ್ಲಿ ಮಾತ್ರವೇ ಮುನ್ನಡೆ ಸಾಧಿಸಲು ಸಾಧ್ಯ ಎಂಬ ಸಿಪಿಐ(ಎಂ)ನ ಮೂಲಭೂತ ನಿಲುವು ಸರಿಯೆಂಬುದನ್ನು ಕಳೆದ ಐವತ್ತು ವರ್ಷಗಳ ನಮ್ಮ ದೇಶದ ಅನುಭವ ಸಾರಿ ಹೇಳುತ್ತಿದೆ. ಇದನ್ನು ಸಾಧಿಸಲು ಪ್ರಸ್ತುತ ಇರುವ ಆಳುವ ವರ್ಗಗಳನ್ನು ಪಲ್ಲಟಗೊಳಿಸಬೇಕಾಗುತ್ತದೆ.

ಸ್ವಾತಂತ್ರ್ಯದ 50ನೇ ವಾರ್ಷಿಕೋತ್ಸವದ ಸಂದರ್ಭವನ್ನು ಎಲ್ಲಾ ಚಿಂತನಶೀಲ ಜನಗಳು ನಮ್ಮ ಅನುಭವಗಳತ್ತ ಹಿಂದಿರುಗಿ ನೋಡಿ ಅದನ್ನು ಸರಿಯಾಗಿ ವಿಶ್ಲೇಷಿಸಿ, ಅವುಗಳಿಂದ ಪಾಠ ಕಲಿಯಲು ಬಳಸಿಕೊಂಡು ಜನತಾ ಪ್ರಜಾಪ್ರಭುತ್ವ ದಾರಿಯಲ್ಲಿ ನಡೆದು ಒಂದು ನವ ಭಾರತವನ್ನು ಕಟ್ಟುವ ಹೋರಾಟದಲ್ಲಿ ಮುನ್ನಡೆಯಬೇಕು.

1947-97 ವ್ಯಂಗ್ಯಚಿತ್ರಕಾರ ಲಕ್ಷ್ಮಣ್ ಕಂಡಂತೆ ಕೃಪೆ: ಟೈಂಸ್ ಆಫ್ ಇಂಡಿಯಾ






ಕಾರ್ಮಿಕ ವರ್ಗದ ದೇಶಪ್ರೇಮ ಅಂದು - ಇಂದು

ಎಸ್.ಸೂರ್ಯನಾರಾಯಣ ರಾವ್

ಕಾಂಗ್ರೆಸ್ಸು ಜನತೆಯಲ್ಲಿ ಸಾಮ್ರಾಜ್ಯಶಾಹಿ-ವಿರೋಧಿ ಭಾವನೆಯನ್ನು ಬಡಿದೆಬ್ಬಿಸಲು ಪ್ರಯತ್ನಿಸಿದ್ದರೂ, ಉಪವಾಸ, ಸತ್ಯಾಗ್ರಹ ಇತ್ಯಾದಿ ಕಾರ್ಯಕ್ರಮ ಹಮ್ಮಿಕೊಂಡಿದ್ದರೂ ಬ್ರಿಟಿಶರು ಕೊನೆಗೂ ರಾಜಕೀಯ ಅಧಿಕಾರ ಹಸ್ತಾಂತರ ಮಾಡಲು ಮುಖ್ಯವಾದ ಕಾರಣ ಜಗತ್ತಿನ ಬದಲಾದ ರಾಜಕೀಯ ಪರಿಸ್ಥಿತಿ ಮತ್ತು ನಮ್ಮ ದೇಶದ ದುಡಿಯುವ ಜನರ ಹೋರಾಟ. ಈಗ ಈ ಸ್ವಾತಂತ್ರ್ಯ ನಮ್ಮ ಆಳರಸರ ಆರ್ಥಿಕ ನೀತಿಗಳಿಂದಾಗಿ ಮತ್ತೆ ಗಂಡಾಂತರಕ್ಕೆ ಸಿಲುಕಿರುವಾಗ ಮತ್ತೆ ಕಾರ್ಮಿಕ ವರ್ಗ ತನ್ನ ಐತಿಹಾಸಿಕ ಪಾತ್ರವನ್ನು ನೆನಪಿಸಿಕೊಂಡು ಸಾಮ್ರಾಜ್ಯಶಾಹಿ-ವಿರೋಧಿ ಹೋರಾಟವನ್ನು ಮುಂದುವರಿಸಬೇಕು.



ದೇಶವು ಸ್ವಾತಂತ್ರ್ಯದ ಸುವರ್ಣಮಹೋತ್ಸವವನ್ನು ಆಗಸ್ಟ್ 15 ರಿಂದ ಒಂದು ವರ್ಷ ಕಾಲ ಆಚರಿಸಲಿದೆ. ಕಾಂಗ್ರೆಸ್ ಪಕ್ಷವು ತಮ್ಮಿಂದಲೇ ಸ್ವಾತಂತ್ರ್ಯ ಬಂದಿದೆ ಎಂದು ಪ್ರಚಾರ ನಡೆಸುತ್ತಿದೆ. ಭಾರತೀಯ ಜನತಾ ಪಕ್ಷವು ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಅಸ್ತಿತ್ವದಲ್ಲಿ ಇಲ್ಲದೇ ಇದ್ದರೂ ಅದರ ಸೂತ್ರಧಾರಿ ರಾಷ್ಟ್ರೀಯ ಸ್ವಯಂಸೇವಕ ಸಂಘ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಯಾವುದೇ ರೀತಿ ಪಾಲ್ಗೊಳ್ಳದಿರುವುದು ಮಾತ್ರವಲ್ಲ ತಮ್ಮದು ಸಾಂಸ್ಕೃತಿಕ ಸಂಘಟನೆ, ತಮಗೆ ರಾಜಕೀಯ ಬೇಡ ತಮಗೂ ಅದಕ್ಕೂ ಯಾವುದೇ ಸಂಬಂಧವಿಲ್ಲವೆಂದು ಹೇಳಿಕೊಂಡು ಬ್ರಿಟಿಶ್ ಸಾಮ್ರಾಜ್ಯಶಾಹಿಗಳಿಗೆ ಅಪ್ರತ್ಯಕ್ಷವಾಗಿ ಬೆಂಬಲ ನೀಡುತ್ತಿದ್ದರು.

ನಾವುಗಳು ಈ ಸಂದರ್ಭದಲ್ಲಿ ಸ್ವಾತಂತ್ರ್ಯ ಯಾವ ರೀತಿ ಬಂತು, ಯಾವ ಹಿನ್ನೆಲೆಯಲ್ಲಿ ಬಂತು, ಯಾರ ಪಾತ್ರ ಇತ್ತು ಎಂಬುದನ್ನು ಸರಿಯಾಗಿ ತಿಳಿದುಕೊಳ್ಳಬೇಕು.

1857 ರಲ್ಲಿ ಬ್ರಿಟಿಶ್ ಆಳ್ವಿಕೆ ವಿರುದ್ಧ ಪ್ರತಿಭಟನೆ ಆರಂಭವಾಗಿತ್ತು. ಅದರ ನೇತೃತ್ವವನ್ನು ಝಾನ್ಸಿ ರಾಣಿ ಲಕ್ಷ್ಮಿಭಾಯಿ ವಹಿಸಿದ್ದರು. ಈ ಸ್ವಾತಂತ್ರ್ಯ ಹೋರಾಟವನ್ನು ಬ್ರಿಟಿಶ್ ಸಾಮ್ರಾಜ್ಯಶಾಹಿಗಳು 'ಸಿಪಾಯಿದಂಗೆ' ಎಂದು ಬಣ್ಣಿಸಿದರು.

ಮಹಾರಾಷ್ಟ್ರದಲ್ಲಿ ಬಾಲಗಂಗಾಧರ ತಿಲಕ್‌ರವರು 'ಸ್ವಾತಂತ್ರ್ಯ ನಮ್ಮ ಜನ್ಮ ಸಿದ್ಧ ಹಕ್ಕು' ಎಂಬ ಘೋಷಣೆಯೊಂದಿಗೆ ಹೋರಾಟ ನಡೆಸಿದರು. ಈ ಸ್ವಾತಂತ್ರ್ಯ ಪ್ರೇಮಿಯನ್ನು ಬ್ರಿಟಿಶರು ಬಂಧಿಸಿದಾಗ ಇದನ್ನು ಪ್ರತಿಭಟಿಸಿ ಮುಂಬೈ ನಗರದ ಲಕ್ಷಾಂತರ ಹತ್ತಿ ಗಿರಣಿ ಕಾರ್ಮಿಕರು ಮುಷ್ಕರ ಮಾಡಿ ತಮ್ಮ ತೀವ್ರ ಪ್ರತಿಭಟನೆಯನ್ನು ಸೂಚಿಸಿದರು. ಆಗ ಮಹಾತ್ಮಗಾಂಧಿಯವರು ದಕ್ಷಿಣ ಆಫ್ರಿಕಾದಲ್ಲಿದ್ದರು.

ರಷ್ಯಾ ದೇಶದಲ್ಲಿ 1917 ರಲ್ಲಿ ಕ್ರಾಂತಿಯಾಗಿ ಝಾರ್ ದೊರೆಯ ಪತನವಾಯಿತು. ಕಾರ್ಮಿಕರ ವರ್ಗದ ಸರ್ವಾಧಿಕಾರವೂ ಸ್ಥಾಪನೆಯಾಯಿತು. ಅದರ ಸ್ಫೂರ್ತಿ ನಮ್ಮ ದೇಶದ ಪ್ರಗತಿಪರ ಯುವಕರನ್ನು ಆಕರ್ಷಿಸಿದುದು ಮಾತ್ರವಲ್ಲದೆ, ಕಾರ್ಮಿಕರು ತಮ್ಮದೇ ಸಂಘಟನೆಯನ್ನು ಸ್ಥಾಪಿಸಿದರು. 1920 ರಲ್ಲಿ ದೇಶದ ಕೇಂದ್ರ ಕಾರ್ಮಿಕ ಸಂಘಟನೆ ಎಐಟಿಯುಸಿ ಉದಯವಾಯಿತು.

1935-36 ರಲ್ಲಿ ನಮ್ಮ ದೇಶದಲ್ಲಿ ವಿದ್ಯಾರ್ಥಿ ಸಂಘಟನೆ(ಎಐಎಸ್ಎಫ್) ರೈತರ ಸಂಘಟನೆ(ಎ.ಇ.ಕೆ.ಎಸ್) ಆರಂಭವಾಯಿತು. ಸ್ವಾತಂತ್ರ್ಯ ಹೋರಾಟದಲ್ಲಿ ದುಡಿಯುವ ವರ್ಗದ ಸಂಘಟನೆಯನ್ನು ಕಮ್ಯುನಿಸ್ಟರು ಸಂಘಟಿಸಿದ್ದರು. ಅನೇಕ ಹೋರಾಟಗಳು ಅವರ ಹಕ್ಕುಗಳಿಗಾಗಿ ನಡೆದವು.

ಗಾಂಧೀಜಿಯವರೊಂದಿಗೆ ಭಿನ್ನಾಭಿಪ್ರಾಯ

ಮಹಾತ್ಮ ಗಾಂಧಿಯವರು ಕಾರ್ಮಿಕ ಸಂಘಟನೆಯ ಅಗತ್ಯವಿಲ್ಲ ಎಂಬ ಭಾವನೆಯನ್ನು ಹೊಂದಿದ್ದರು. ಅವರಿಗೆ ವರ್ಗ ಸಂಘಟನೆ ಒಪ್ಪದ ಮಾತು. ಅವರ ಅಭಿಪ್ರಾಯದಲ್ಲಿ ಮಾಲಿಕರು, ಕಾರ್ಮಿಕರು ತಂದೆ ಮಕ್ಕಳಂತೆ, ಏನಿದ್ದರೂ ಹೃದಯ ಪರಿವರ್ತನೆಯಿಂದ ವಿವಾದವನ್ನು ಬಗೆಹರಿಸಿಬೇಕೆಂದು ಪ್ರತಿಪಾದಿಸುತ್ತಿದ್ದರು.

ಇದೇ ಸಂದರ್ಭದಲ್ಲಿ ಕಮ್ಯುನಿಸ್ಟರು ಮಾರ್ಕ್ಸ್‌ರವರ ಸಿದ್ಧಾಂತದ ಆಧಾರದಲ್ಲಿ ವರ್ಗ ಸಂಘಟನೆ ಆಗಬೇಕು ಇದರಲ್ಲಿ ಯಾವುದೇ ರಾಜಿ ಇಲ್ಲ ಎಂದು ಪ್ರತಿಪಾದಿಸಿ ಎಲ್ಲೆಡೆ ಕೆಂಪುಬಾವುಟದ ಅಡಿಯಲ್ಲಿ ಹೋರಾಟ ನಡೆಯುತ್ತಿತ್ತು. ಆದರೆ ಮಹಾತ್ಮ ಗಾಂಧಿಯವರ ಧೋರಣೆಯಿಂದಾಗಿ ಕಾಂಗ್ರೆಸ್ಸು ದುಡಿಯುವ ಜನರ ಸಂಘಟನೆ ಮಾಡಲು ಪ್ರಯತ್ನಿಸಲಿಲ್ಲ.

ಮಹಾತ್ಮ ಗಾಂಧಿಯವರಿಗೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಜನತೆ ಮುನ್ನುಗ್ಗಿದರೆ ಹಿಂಸಾಚಾರದಲ್ಲಿ ತೊಡಗಬಹುದು ಎಂಬ ಭಾವನೆ ಇತ್ತು. ಆ ಕಾರಣದಿಂದ ದೇಶದಲ್ಲಿ ನಡೆಯುತ್ತಿದ್ದ ಚೌರಿ-ಚೌರಾ ರೀತಿಯ ಹೋರಾಟಗಳಲ್ಲಿ ಹಿಂಸೆಯ ನೆಪವೊಡ್ಡಿ ಚಳುವಳಿಯನ್ನು ಹಿಂದೆಗೆಯಲು ಆದೇಶ ನೀಡಿದರು. ಇದಾದ ನಂತರ ವೈಯುಕ್ತಿಕ ಸತ್ಯಾಗ್ರಹ-ಉಪವಾಸಕ್ಕೆ ಅವರು ಒತ್ತು ಕೊಡುತ್ತಿದ್ದರು.

ಮಹಾತ್ಮಗಾಂಧಿಯವರ 1930 ರ ಉಪ್ಪಿನ ಸತ್ಯಾಗ್ರಹ(ದಂಡಿಯಾತ್ರೆ), ಆಮರಣಾಂತ ಉಪವಾಸ, ಲಂಡನ್ನಿನ ದುಂಡು ಮೇಜಿನ ಸಮ್ಮೇಳನ ಇವುಗಳಿಂದ ಬ್ರಿಟಿಶ್ ಸರಕಾರವು ಕಾಂಗ್ರೆಸ್ಸಿನ ಬೇಡಿಕೆಯಂತೆ ಅಧೀನ ರಾಜ್ಯ ಸ್ಥಾನಮಾನವನ್ನು ಕೂಡ ಕೊಡಲು ತಯಾರಾಗಲಿಲ್ಲ.

ಕಾರ್ಮಿಕರು ಮತ್ತು ಅವರ ಮುಖಂಡರು ಮಾತ್ರ ಕಾಂಗ್ರೆಸ್ಸಿನ ಸ್ವಾತಂತ್ರ್ಯದ ಹೋರಾಟದ ಕಾರ್ಯಕ್ರಮದಲ್ಲಿ ನಿರಂತರವಾಗಿ ಭಾಗವಹಿಸುತ್ತಿದ್ದರು.

1939 ರಲ್ಲಿ ಹಿಟ್ಲರ್ 2ನೇ ಮಹಾ ಯುದ್ಧ ಆರಂಭಿಸಿದ ಸಂದರ್ಭದಲ್ಲಿ ಬ್ರಿಟಿಶ್ ಸರಕಾರದ ಮೇಲೆ ಒತ್ತಾಯ ತಂದಲ್ಲಿ ನಮಗೆ ಸ್ವಾತಂತ್ರ್ಯ ದೊರಕಬಹುದೆಂಬ ಉದ್ದೇಶದಿಂದ 1942 ರಲ್ಲಿ ಗಾಂಧಿಯವರು ಕ್ವಿಟ್ ಇಂಡಿಯಾ ಚಳುವಳಿಯನ್ನು ಆರಂಭಿಸಿ 'ಮಾಡು ಇಲ್ಲವೇ ಮಡಿ' ಎಂದು ಕರೆಯಿತ್ತರು.

ಆ ಸಂದರ್ಭದಲ್ಲಿ ವಿದ್ಯಾರ್ಥಿ, ರೈತ, ಕಾರ್ಮಿಕರು, ಮಹಿಳೆಯರು ಮಹಾನ್ ಹೋರಾಟದಲ್ಲಿ ಭಾಗವಹಿಸುವಂತೆ ಕರೆ ನೀಡಿದರು. ಅದರಂತೆ ಲಕ್ಷಾಂತರ ಜನರು ಈ ಹೋರಾಟದಲ್ಲಿ ಭಾಗವಹಿಸಿದರು.

ವಿದ್ಯಾರ್ಥಿಯಾಗಿ

ನಾನು ಕೂಡಾ ವಿದ್ಯಾರ್ಥಿಯಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದೆ. 1942 ರ ಆಗಸ್ಟ್ 9 ರಂದು ಕ್ವಿಟ್ ಇಂಡಿಯಾ ಚಳುವಳಿಯ ಭಾಗವಾಗಿ ಅಂದಿನ ಮೈಸೂರು ರಾಜ್ಯದ ಒಂದು ಶಿಕ್ಷಣ ಕೇಂದ್ರವಾಗಿದ್ದ ಮೈಸೂರು ಎಲ್.ಎಂ.ಪಿ. ಕಾಲೇಜಿಗೆ(ಇಂದಿನ ಮೆಡಿಕಲ್ ಕಾಲೇಜು) ರಾಜ್ಯಾದ್ಯಂತ ಬಂದ ವಿದ್ಯಾರ್ಥಿಗಳು ಅತೀ ಉತ್ಸಾಹದಿಂದ ಪಿಕೆಟಿಂಗ್ ನಡೆಸಿದರು. ಅದರಲ್ಲಿ ನಾನೂ ಭಾಗವಹಿಸಿದ್ದೆ. 1500 ಕ್ಕೂ ಮಿಕ್ಕ ವಿದಾರ್ಥಿಗಳನ್ನು ಬಂಧಿಸಿ ಸೆಂಟ್ರಲ್ ಜೈಲಿಗೆ ಕಳುಹಿಸಿದರು.

ಆದರೆ ಜೈಲಿನಲ್ಲಿ ಉಳಕೊಳ್ಳಲು ಜಾಗವಿರಲಿಲ್ಲ, ಸರಿಯಾದ ಊಟ ವ್ಯವಸ್ಥೆ ಇರಲಿಲ್ಲ, ಇದರಿಂದ ಕೋಪಗೊಂಡ ನಾವು ಅಲ್ಲಿಯೂ ಚಳುವಳಿ ನಡೆಸಿದಾಗ ಪೋಲೀಸರ ಏಟಿನಿಂದಾಗಿ ಹಲವಾರು ಜನ ಗಾಯಗೊಂಡರು. ಶಂಕರಪ್ಪ ಎನ್ನುವ ವಿದ್ಯಾರ್ಥಿ ಪ್ರಾಣ ಬಿಟ್ಟ.

ಆನಂತರ ನಮ್ಮನ್ನು ಅಲ್ಲಿಂದ ಕುಕ್ಕನಕೆರೆಯ ಖಾಲಿ ಬಿಲ್ಡಿಂಗ್‌ಗೆ ವರ್ಗಾಯಿಸಿದರು. ಹಿಂದೆ ಪ್ರಧಾನಿಯಾಗಿದ್ದ ಶ್ರೀಮತಿ ಇಂದಿರಾಗಾಂಧಿಯವರ ಖಾಸಗಿ ಕಾರ್ಯದರ್ಶಿಯಾಗಿದ್ದ

ಹೆಚ್.ವೈ.ಶಾರದಪ್ರಸಾದ್ ನಮ್ಮ ಜತೆ ಜೈಲಿನಲ್ಲಿದ್ದರು. ಕರ್ನಾಟಕದ ರಾಜಕೀಯ ಮುಖಂಡರುಗಳಾದ ಎಂ.ವಿ.ಕೃಷ್ಣಪ್ಪ, ವಸಂತಯ್ಯ ಮೊದಲಾದವರೂ ಕೂಡ ನಮ್ಮ ಜತೆ ಜೈಲಿನಲ್ಲಿದ್ದರು.

ಕಾರ್ಮಿಕರೂ ಹಿಂದೆ ಬೀಳಲಿಲ್ಲ

ಅದೇ ಸಂದರ್ಭದಲ್ಲಿ ಕರ್ನಾಟಕದ ಕಾರ್ಮಿಕರು ಕೂಡಾ ಹೋರಾಟದಲ್ಲಿ ಹಿಂದೆ ಬೀಳಲಿಲ್ಲ. ಆಗಿನ ಕಾಲದಲ್ಲಿ ಹೆಸರಾಂತ ಮಿಲ್ಲುಗಳಾದ ಮಿನರ್ವ ಮಿಲ್ಲು, ರಾಜಾ ಮಿಲ್ಲುಗಳ ಕಾರ್ಮಿಕರು ಮುಷ್ಕರ ನಡೆಸಿ ಸ್ವಾತಂತ್ರ್ಯ ಹೋರಾಟಕ್ಕೆ ಕಾಣಿಕೆ ನೀಡಿದರು. ಕೆ.ಜಿ.ಎಫ್. ನಲ್ಲಿ ಮುಷ್ಕರ ಬಂದ್‌ಗಳು ನಡೆದವು.

ಈ ಚಳುವಳಿ 1943 ರ ಕೊನೆಯಲ್ಲಿ ತಣ್ಣಗಾಯಿತು. ಬಂಧಿತರಾದ ವಿದ್ಯಾರ್ಥಿಗಳು ಬಿಡುಗಡೆಯಾದ ಮೇಲೆ ಅವರವರ ವಿದ್ಯಾಭ್ಯಾಸಕ್ಕೆ ಅಥವಾ ನೌಕರಿಯನ್ನು ಹುಡುಕಿ ಹೋದರು. ಕೆಲವರನ್ನು ಜೈಲಿನಲ್ಲಿಯೇ ಇರಿಸಿಕೊಳ್ಳಲಾಯಿತು.

ಹೃದಯ ಪರಿವರ್ತನೆಯಲ್ಲ

ಹೀಗಿರುವಾಗ 1947 ರ ಆಗಸ್ಟ್ 15 ರಂದು ನಮ್ಮ ದೇಶಕ್ಕೆ ಸ್ವಾತಂತ್ರ್ಯವನ್ನು ಕಾಂಗ್ರೆಸ್ ಮಾತ್ರ ತಂದಿತು ಎಂದು ಹೇಳಲು ಹೇಗೆ ಸಾಧ್ಯ? ಬ್ರಿಟಿಶ್ ಸಾಮ್ರಾಜ್ಯಶಾಹಿಗಳಿಗೆ ನಮ್ಮ ದೇಶದ ಮೇಲೆ ಕನಿಕರವೇನಾದರೂ ಬಂದಿತೆ? ಅಥವಾ ಅವರ ಹೃದಯ ಪರಿವರ್ತನೆಯಾಯಿತೆ? 1942-43 ರ ಹೋರಾಟವನ್ನು ಅಮಾನುಷವಾಗಿ ದಮನ ಮಾಡಿದ ಬ್ರಿಟಿಶರು ಇದ್ದಕ್ಕಿದ್ದಂತೆ ಜ್ಞಾನೋದಯವಾದಂತ ನಮಗೆ ಸ್ವಾತಂತ್ರ್ಯ ನೀಡಿದರೇ?

ಇಲ್ಲಿ ನಾನು ಇಲ್ಲಿ ನಮ್ಮ ದೇಶದ ಸ್ವಾತಂತ್ರ್ಯದ ಹೋರಾಟವನ್ನು ವಿವರಿಸುತ್ತಿಲ್ಲ. ಆದ್ದರಿಂದಲೇ ಭಗತ್ ಸಿಂಗ್ ಬಗ್ಗೆಯಾಗಲೀ, ರಾಜಗುರು, ಸುಖದೇವ್ ಬಗ್ಗೆಯಾಗಲೀ ಪ್ರಸ್ತಾವನೆ ಮಾಡುತ್ತಿಲ್ಲ.

ಸ್ವಾತಂತ್ರ್ಯ ಯಾವ ಹಿನ್ನೆಲೆಯಲ್ಲಿ ನಮಗೆ ಸಿಕ್ಕಿದೆ ಎಂದು ಜನತೆಗೆ ಮನದಟ್ಟುಮಾಡಬೇಕು. ನಾನು ಈ ಮೊದಲೇ ತಿಳಿಸಿದಂತೆ ಸ್ವಾತಂತ್ರ್ಯ ಹೋರಾಟದಲ್ಲಿ ಕಾರ್ಮಿಕರು, ರೈತರು ಭಾಗವಹಿಸಿದ್ದಲ್ಲದೆ, ದೇಶದಲ್ಲಿ ಸಾಮ್ರಾಜ್ಯಶಾಹಿ ವಿರೋಧಿ ಭಾವನೆ ಉಕ್ಕಿ ಹರಿಯುತ್ತಿತ್ತು.

1945 ರಲ್ಲಿ ರಶ್ಯಾ ದೇಶದ ಕೆಂಪು ಸೇನೆಯು ಬರ್ಲಿನ್‌ನ ಮೇಲೆ ಕುಡುಗೋಲು ಸುತ್ತಿಗೆಯ ಕೆಂಪುಬಾವುಟವನ್ನು ಹಾರಿಸಿತು. ಇದರಿಂದ ನಿರಾಶೆಗೊಂಡ ಹಿಟ್ಲರ್ ವಿಷ ಸೇವಿಸಿ ಸತ್ತ. ಜಪಾನಿನ ಕೋಹಿಯಾ ಪಲಾಯನ ಮಾಡಿದ. ಇಟಲಿಯ ಮುಸಲೋನಿಯನ್ನು ಜನತೆ ಕೊಚ್ಚಿ ಸಾಯಿಸಿದರು. ಆಗ್ನೇಯ ಏಷ್ಯಾದಲ್ಲಿ ಜಪಾನರು, ಬ್ರಿಟಿಶರು ತಮ್ಮ ಶಸ್ತ್ರಾಸ್ತ್ರಗಳನ್ನು ಬಿಟ್ಟು ಓಡಿದರು.

ರಶ್ಯಾ ದೇಶದ ಅಪಾರ ತ್ಯಾಗ ಬಲಿದಾನದಿಂದ ಬಂದ ಈ ವಿಜಯ, ಜಗತ್ತಿನ ರಾಜಕೀಯವನ್ನೇ ಬದಲು ಮಾಡಿತು. ಯುರೋಪಿನ 12 ರಾಷ್ಟ್ರಗಳು ವಿಮೋಚನೆಗೊಂಡವು. ಚೀನ ದೇಶದಲ್ಲಿ ಚಿಯಾಂಗ್ ಕೈಶೇಕ್ ವಿರುದ್ಧ ಮಾವೋ ನಾಯಕತ್ವದಲ್ಲಿ ಪ್ರಚಂಡ ಹೋರಾಟ ಪ್ರಾರಂಭವಾಯಿತು.

ಆಗ್ನೇಯ ದೇಶಗಳಾದ ಬರ್ಮಾ, ಇಂಡೋನೇಶಿಯಾ, ಮಲೇಶಿಯಾಗಳಲ್ಲಿ ಸಶಸ್ತ್ರ ಹೋರಾಟ ಆರಂಭವಾಯಿತು. ನಮ್ಮ ದೇಶದಲ್ಲಿ ರಶ್ಯಾದ ಯಶಸ್ಸು ಪ್ರಭಾವ ಬೀರಿತು. ನಾವಿಕರು 1946 ರಲ್ಲಿ ಬ್ರಿಟಿಶರ ಆಜ್ಞೆಯನ್ನು ಧಿಕ್ಕರಿಸಿ ಬಂಡಾಯ ಎದ್ದರು.

ಇದರ ಬೆಂಬಲಕ್ಕೆ ಲಕ್ಷಾಂತರ ಹತ್ತಿ ಗಿರಣಿ ಕಾರ್ಮಿಕರು ಬೀದಿಗಿಳಿದರು. ಜೊತೆಯಲ್ಲಿ ಅಂಚೆ ತಂತಿ ನೌಕರರ ಮುಷ್ಕರ, ಡಂಡಂನ ವೈಮಾನಿಕ ನೌಕರರ ಮುಷ್ಕರ ಬ್ರಿಟಿಶ್ ಸರಕಾರಕ್ಕೆ ಭಯವುಂಟುಮಾಡಿದವು.

ಬ್ರಿಟಿಶ್ ಸರಕಾರವು ಪರಿಸ್ಥಿತಿಯನ್ನು ಅಂದಾಜು ಮಾಡಲು ಕ್ರಿಪ್ಸ್ ಅವರನ್ನು ಭಾರತಕ್ಕೆ ಕಳುಹಿಸಿತು. ಅವರು ಅಧ್ಯಯನ ಮಾಡಿ ಬ್ರಿಟನ್ನಿನ ಹೌಸ್ ಆಫ್ ಕಾಮನ್ಸ್‌ಗೆ ವರದಿ ನೀಡಿದರು. ಆ ವರದಿ ಪ್ರಕಾರ ಬ್ರಿಟಿಶ್ ಸರಕಾರವು ಹಿಂದಿನಂತೆ ಆಡಳಿತ ನಡೆಸುವುದು ಸಾಧ್ಯವಿಲ್ಲ ಎಂಬ ಮಾತು ಸ್ಪಷ್ಟವಾಗಿತ್ತು.

ಬ್ರಿಟಿಶ್ ಸರಕಾರ ಮತ್ತು ಬ್ರಿಟಿಶ್ ಪ್ರಜೆಗಳ ಆಸ್ತಿಪಾಸ್ತಿಯನ್ನು ರಕ್ಷಿಸಿಕೊಳ್ಳಬೇಕಾದಲ್ಲಿ ಕಾಂಗ್ರೆಸ್ ಮತ್ತು ಮುಸ್ಲಿಂಲೀಗ್ ಜೊತೆ ರಾಜಿ ಮಾಡಿಕೊಂಡು ತನ್ನ ವ್ಯಾಪಾರವನ್ನು ರಕ್ಷಿಸಿಕೊಳ್ಳುವಂತೆ ಸೂಚಿಸಿದರು.

ಹೇಗಾದರೂ ಸ್ವಾತಂತ್ರ್ಯ

ಬ್ರಿಟಿಶರು ನಮ್ಮ ದೇಶದ ಸ್ವಾತಂತ್ರ್ಯವನ್ನು ಹತ್ತಿಕ್ಕಲು ಜಿನ್ನಾರವರ ನೇತೃತ್ವದಲ್ಲಿ ಮುಸ್ಲಿಂ ಲೀಗ್ ಅನ್ನು ಎತ್ತಿ ಕಟ್ಟಿ ಒಡೆದು ಆಳುವ ನೀತಿಯನ್ನು ಅನುಸರಿಸಿದರು. ಕಾಂಗ್ರೆಸ್ ಪಕ್ಷವು ಗಾಂಧಿಯವರ ನಾಯಕತ್ವದಲ್ಲಿ ಮುಸ್ಲಿಂ ಲೀಗ್‌ನ "ಎರಡು ರಾಷ್ಟ್ರ ತತ್ವ" ವನ್ನು ಒಪ್ಪಿರಲಿಲ್ಲ. ಆದರೆ ನಮ್ಮ ದೇಶದ ಬಂಡವಾಳಗಾರರಿಗೆ ಜಮೀನುದಾರರಿಗೆ ಹೇಗಾದರೂ ಮಾಡಿ ರಾಜಕೀಯ ಸ್ವಾತಂತ್ರ್ಯ ಗಳಿಸಬೇಕಾಗಿತ್ತು. ಆ ಮೂಲಕ ನಮ್ಮ ಅಭಿವೃದ್ಧಿಗೆ ಅನುಕೂಲವಾಗುತ್ತದೆಂದು ಭಾವಿಸಿದ ಅವರು ದೇಶದ ಐಕ್ಯತೆಯನ್ನು ಬದಿಗೊತ್ತಿ ಧರ್ಮದ ಆಧಾರದ ಮೇಲೆ ದೇಶವನ್ನು ವಿಭಜನೆ ಮಾಡಲು ಒಪ್ಪಿದರು.

ಇದಕ್ಕೆ ಕಾಂಗ್ರೆಸ್ಸಿನ ಸಮ್ಮೇಳನವನ್ನೂ ಕರೆಯಲಿಲ್ಲ. ಗಾಂಧೀಜಿಯವರ ಸಲಹೆಯನ್ನೂ ಕೇಳಲಿಲ್ಲ. ಈ ವಿಭಜನೆಯ ಪರಿಣಾಮವೇ ಹಿಂದು ಮುಸಲ್ಮಾನರ ನರಹತ್ಯೆ. ಲಕ್ಷಾಂತರ ಜನರು ನಿರಾಶ್ರಿತರಾದರು. ಈ ಭೀಕರ ಕಗ್ಗೊಲೆಯನ್ನು ನೋಡಲಾರದೆ ಹಿಂದೂ ಮುಸ್ಲಿಂ ಐಕ್ಯತೆಗಾಗಿ ಗಾಂಧೀಜಿಯವರು ಪಾದಯಾತ್ರೆ ಮಾಡಿದರು.

ಹಿಂದೂ-ಮುಸ್ಲಿಂ ಐಕ್ಯತೆಯನ್ನು ಸಹಿಸದೆ ಆರ್.ಎಸ್.ಎಸ್. ಕಾರ್ಯಕರ್ತನಾದ ಗೋಡ್ಸೆ ಎಂಬುವವನು 1948 ರ ಜನವರಿ 30 ರಂದು ಗಾಂಧಿಯವರನ್ನು ಗುಂಡಿಟ್ಟು ಕೊಂದ.

ಇದರಿಂದ ನಾವು ತಿಳಿಯಬೇಕಾದದ್ದೆಂದರೆ ಕಾಂಗ್ರೆಸ್ಸು ಜನತೆಯಲ್ಲಿ - ಸಾಮ್ರಾಜ್ಯಶಾಹಿ ವಿರೋಧಿ ಭಾವನೆಯನ್ನು ಬಡಿದೆಬ್ಬಿಸಲು ಶ್ರಮಿಸಿದ್ದರೂ, ಉಪವಾಸ, ಧರಣಿ, ಇತ್ಯಾದಿ ಕಾರ್ಯಕ್ರಮ ಹಮ್ಮಿಕೊಂಡಿದ್ದರೂ ನಮ್ಮ ದೇಶಕ್ಕೆ ಬ್ರಿಟಿಶರು ರಾಜಕೀಯ ಅಧಿಕಾರ ಹಸ್ತಾಂತರ ಮಾಡಲು ಮುಖ್ಯವಾದ ಕಾರಣ - ಜಗತ್ತಿನ ಬದಲಾದ ರಾಜಕೀಯ ಪರಿಸ್ಥಿತಿ ಮತ್ತು ನಮ್ಮ ದೇಶದ ದುಡಿಯುವ ಜನರ ಹೋರಾಟ.

ಬ್ರಿಟಿಶ್ ಸಾಮ್ರಾಜ್ಯಶಾಹಿಗಳು ನಮ್ಮ ದೇಶವನ್ನು ಆಳುತ್ತಿದ್ದ ಸಂದರ್ಭದಲ್ಲಿ ಕೈಗಾರಿಕಾ ಬೆಳವಣಿಗೆಗಳು ತೀವ್ರವಾಗಿ ಹೆಚ್ಚಲಿಲ್ಲ. ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಜವಾಹರ್ ಲಾಲ್ ನೆಹರುರವರು ಸೋವಿಯತ್ ಯೂನಿಯನ್ನಿನ ಬೆಳವಣಿಗೆಯಿಂದ ಸ್ಫೂರ್ತಿ ಪಡೆದು 2ನೇ ಪಂಚವಾರ್ಷಿಕ ಯೋಜನೆಯಲ್ಲಿ ಕೈಗಾರಿಕೆಗಳಿಗೆ ಆದ್ಯತೆ ಕೊಟ್ಟರು.

1957 ರಲ್ಲಿ ನಮ್ಮ ದೇಶದ ಸಾರ್ವಜನಿಕ ವಲಯ ಪ್ರಧಾನಪಾತ್ರ ವಹಿಸಬೇಕೆಂದು ಲೋಕಸಭೆಯಲ್ಲಿ ತೀರ್ಮಾನಿಸಲಾಯಿತು. ಅಂದು ಟಾಟಾ-ಬಿರ್ಲಾಗಳ ಆಸ್ತಿ ಕೇವಲ 20-30 ಕೋಟಿ ಇದ್ದುದರಿಂದ ಭಾರೀ ಮೂಲಭೂತ ಕೈಗಾರಿಕೆಗಳ ನಿರ್ಮಾಣಕ್ಕೆ ಅವರು ತಯಾರಿರಲಿಲ್ಲ.

ಸ್ವಾವಲಂಬನೆ-ಸ್ವಾತಂತ್ರ್ಯ

ಸೋವಿಯತ್ ಯೂನಿಯನ್ ಪತನವಾದ

ನಮ್ಮ ಸ್ವಾತಂತ್ರ್ಯ ಆಳರಸರ ಆರ್ಥಿಕ ನೀತಿಗಳಿಂದಾಗಿ ಮತ್ತೆ ಗಂಡಾಂತರಕ್ಕೆ ಸಿಲುಕಿರುವಾಗ ಕಾರ್ಮಿಕ ವರ್ಗ ಮತ್ತೆ ತನ್ನ ಐತಿಹಾಸಿಕ ಪಾತ್ರವನ್ನು ನೆನಪಿಸಿಕೊಂಡು ಸಾಮ್ರಾಜ್ಯಶಾಹಿ ವಿರೋಧಿ ಹೋರಾಟವನ್ನು ಮುಂದುವರಿಸಿತು.



ನಂತರ ಕೇಂದ್ರ ಸರಕಾರವು ಅಮೆರಿಕನ್ನರ ಪ್ರಭಾವ ಹೊಂದಿರುವ ಐ.ಎಂ.ಎಫ್-ವಿಶ್ವಬ್ಯಾಂಕಿನ ಶರತ್ತುಗಳಿಗೆ ಮಣಿದು ಖಾಸಗೀಕರಣಕ್ಕೆ ಒತ್ತು ಕೊಡುವುದಕ್ಕೆ ಮುಖ್ಯ ಕಾರಣ, ಇನ್ನೊಂದೆಡೆಯಲ್ಲಿ 8-9 ಸಾವಿರ ಕೋಟಿ ರೂಪಾಯಿ ಖಾಸಗಿ ಆಸ್ತಿಯನ್ನು ಹೊಂದಿರುವ ಟಾಟಾ, ಬಿರ್ಲಾ, ಸಿಂಘಾನಿಯ ಮೊದಲಾದವರಿಗೆ ಬೃಹತ್ ಕೈಗಾರಿಕೆಗಳ ಖಾಸಗೀಕರಣ ಆದರೆ ತಾವು ಮತ್ತು ವಿದೇಶಿ ಬಂಡವಾಳಿಗರು ಲೂಟಿ ಹೊಡೆಯಬಹುದೆಂಬ ಮಹಾತ್ವಾಕಾಂಕ್ಷೆ ಬಂದಿದೆ. ಆದರೆ ನಮ್ಮ ದೇಶದ ಕಾರ್ಮಿಕ ವರ್ಗ ಇದರ ವಿರುದ್ಧ ಸತತವಾಗಿ ಹೋರಾಡುತ್ತಿದೆ.

ದೇಶಕ್ಕೆ ಸ್ವಾತಂತ್ರ್ಯ ಬಂದುದರಿಂದ ಸಾರ್ವಜನಿಕ ಉದ್ದಿಮೆಗಳ ಬೆಳವಣಿಗೆಯಾಯ್ತು. ಮಾತ್ರವಲ್ಲ ಆರ್ಥಿಕ ಸ್ವಾವಲಂಬನೆಯತ್ತ ದಾಪುಗಾಲು ಹಾಕಲು ಸಾಧ್ಯವಾಯಿತು. ಆದರೆ ಈಗ ಸಾರ್ವಜನಿಕ ಉದ್ದಿಮೆಗಳು ಗಂಡಾಂತರದಲ್ಲಿವೆ. ಅಂದರೆ ದೇಶದ ಆರ್ಥಿಕ ಸ್ವಾವಲಂಬನೆ ಮತ್ತು ದೇಶದ ಸ್ವಾತಂತ್ರ್ಯವೂ ಗಂಡಾಂತರದಲ್ಲಿದೆ ಎಂದೇ ನಾವು ತಿಳಿದುಕೊಳ್ಳಬೇಕು.

ಈಗಾಗಲೇ ಖಾಸಗೀಕರಣ ಮತ್ತು ಉದಾರೀಕರಣದ ವಿರುದ್ಧ ಅನೇಕ ಮುಷ್ಕರ ನಡೆಸಿ ಕಾರ್ಮಿಕರನ್ನು ಐಕ್ಯ ಹೋರಾಟಕ್ಕೆ ಅಣಿನೆರೆಸಲಾಗುತ್ತಿದೆ.

(ಈ ಹೋರಾಟ ನಮ್ಮ ದೇಶದಲ್ಲಿ ಮಾತ್ರವಲ್ಲ, ಇಡೀ ಜಗತ್ತಿನ ಕಾರ್ಮಿಕ ವರ್ಗ ಹೋರಾಟಕ್ಕಿಳಿದಿದೆ. ಈ ನಿಟ್ಟಿನಲ್ಲಿ ಆಗಸ್ಟ್ 6-8 ರವರೆಗೆ ಕ್ಯೂಬಾ ದೇಶದ ಹವಾನದಲ್ಲಿ "ಜಾಗತೀಕರಣ ಮತ್ತು ನವ ಉದಾರೀಕರಣ ವಿರುದ್ಧ ಜಾಗತಿಕ ಸಮ್ಮೇಳನ" ನಡೆದಿದ್ದು ಕಾ॥ ಸೂರ್ಯ ನಾರಾಯಣ ರಾವ್ ಸಿಐಟಿಯು ವಿನ ನಿಯೋಗದ ಒಬ್ಬ ಸದಸ್ಯರಾಗಿ ಈ ಸಮ್ಮೇಳನದಲ್ಲಿ ಭಾಗವಹಿಸಿದ್ದಾರೆ -ಸಂ)

ಸ್ವಾತಂತ್ರ್ಯ ಪೂರ್ವದಲ್ಲಿ ಕಾರ್ಮಿಕ ವರ್ಗವು ಸಾಮ್ರಾಜ್ಯ ಶಾಹಿಗಳ ವಿರುದ್ಧ ಸಮರಧೀರ ಹೋರಾಟ ಮಾಡಿದ ದೇಶಪ್ರೇಮಿ ಇತಿಹಾಸವನ್ನು ಜ್ಞಾಪಿಸಿಕೊಂಡು ಖಾಸಗೀಕರಣ ಮತ್ತು ಜಾಗತೀಕರಣದ ಹೊಸ ಆರ್ಥಿಕ ನೀತಿಯ ವಿರುದ್ಧ ನಿರಂತರ ಹೋರಾಟ ಮಾಡುತ್ತಾ ಸಾಮ್ರಾಜ್ಯಶಾಹಿ ವಿರುದ್ಧ ಹೋರಾಟವನ್ನು ಮುಂದುವರೆಸಲು ಸಜ್ಜಾಗಬೇಕು. ಕಾಂಗ್ರೆಸ್ಸು ಜನತೆಯಲ್ಲಿ ಸಾಮ್ರಾಜ್ಯಶಾಹಿ-ವಿರೋಧಿ ಭಾವನೆಯನ್ನು ಬಡಿದೆಬ್ಬಿಸಲು ಪ್ರಯತ್ನಿಸಿದ್ದರೂ, ಉಪವಾಸ, ಸತ್ಯಾಗ್ರಹ ಇತ್ಯಾದಿ ಕಾರ್ಯಕ್ರಮ ಹಮ್ಮಿಕೊಂಡಿದ್ದರೂ ಬ್ರಿಟಿಶರು ಕೊನೆಗೂ ರಾಜಕೀಯ ಅಧಿಕಾರ ಹಸ್ತಾಂತರ ಮಾಡಲು ಮುಖ್ಯವಾದ ಕಾರಣ ಜಗತ್ತಿನ ಬದಲಾದ ರಾಜಕೀಯ ಪರಿಸ್ಥಿತಿ ಮತ್ತು ನಮ್ಮ ದೇಶದ ದುಡಿಯುವ ಜನರ ಹೋರಾಟ. ಈಗ ಈ ಸ್ವಾತಂತ್ರ್ಯ ನಮ್ಮ ಆಳರಸರ ಆರ್ಥಿಕ ನೀತಿಗಳಿಂದಾಗಿ ಮತ್ತೆ ಗಂಡಾಂತರಕ್ಕೆ ಸಿಲುಕಿರುವಾಗ ಮತ್ತೆ ಕಾರ್ಮಿಕ ವರ್ಗ ತನ್ನ ಐತಿಹಾಸಿಕ ಪಾತ್ರವನ್ನು ನೆನಪಿಸಿಕೊಂಡು ಸಾಮ್ರಾಜ್ಯಶಾಹಿ-ವಿರೋಧಿ ಹೋರಾಟವನ್ನು ಮುಂದುವರಿಸಬೇಕು.

○

ಸ್ವಾತಂತ್ರ್ಯ ಹೋರಾಟದಲ್ಲಿ ಕಮ್ಯುನಿಸ್ಟರು

▶ ಪುಟ 13 ರಿಂದ

ಅದು. ಕಾರ್ಮಿಕವರ್ಗ, ರೈತಾಪಿ ಜನಗಳು ಹಾಗೂ ಯುವಜನಗಳ ಆರ್ಥಿಕ ಮತ್ತು ರಾಜಕೀಯದ ಬೇಡಿಕೆಗಳನ್ನು ಒಂದುಗೂಡಿಸಿ ಒಂದು ಬ್ರಿಟಿಶ್-ವಿರೋಧಿ ಸಾಮೂಹಿಕ ಉತ್ಕರ್ಷ ಬೆಳೆಯುವಂತೆ ಮಾಡಿದರು. ಕೆಂಪು ಕೋಟೆಯಲ್ಲಿ ಅರ್ಝಾದ್ ಹಿಂದ್ ಸೇನೆಯ ಬಂಧಿಗಳ ವಿಚಾರಣೆಯ ವಿರುದ್ಧ ದೇಶಾದ್ಯಂತ ಭುಗಿಲೆದ್ದ ಪ್ರತಿಭಟನೆಯಲ್ಲಿ ಕಮ್ಯುನಿಸ್ಟರು ಹುಮ್ಮಸ್ಸಿನಿಂದ ಭಾಗವಹಿಸಿದರು. ಅರ್ಝಾದ್ ಹಿಂದ್ ಸೈನಿಕ ಅಬ್ದುಲ್ ರಶೀದ್‌ಗೆ ಶಿಕ್ಷೆ ವಿಧಿಸಿದಾಗ ಇಡೀ ಕಲ್ಕತ್ತಾದಲ್ಲಿ ಕ್ರೋಧ ಸ್ಫೋಟಗೊಂಡಿತು. ಸಿಪಿಐ ಕರೆಯ ಮೇರೆಗೆ ಫೆಬ್ರವರಿ 12, 1946 ರಂದು ನಡೆದ ಸಾರ್ವತ್ರಿಕ ಮುಷ್ಕರ ಇಡೀ ನಗರವನ್ನು ಅಸ್ತವ್ಯಸ್ತಗೊಳಿಸಿತು. ಆಗ ಕಂಡುಬಂದ ಒಂದು ವಿಶಿಷ್ಟತೆಯೆಂದರೆ ಹಿಂದೂ-ಮುಸ್ಲಿಂ ಐಕ್ಯತೆ. ಕಾಂಗ್ರೆಸ್ ಮುಖಂಡರಾಗಿದ್ದ ಅರುಣಾ ಆಸಫ್ ಆಲಿ ಕಮ್ಯುನಿಸ್ಟ್ ನೇತೃತ್ವದ ವಿದ್ಯಾರ್ಥಿ-ಯುವಜನ ಆಂದೋಲನವನ್ನು ಕಂಡು ಎಷ್ಟು ಪ್ರಭಾವಿತರಾದರೆಂದರೆ ಇಡೀ ದೇಶ ಈ ಕಾರ್ಯಾಚರಣೆಯ ಮಾದರಿಯನ್ನು ಅನುಸರಿಸಬೇಕು ಎಂದು ಆಗ್ರಹಪಡಿಸಿದರು. ಆಗಿನ ಕಲ್ಕತ್ತಾ ಪೋಲೀಸ್ ಕಮಿಶನರ್ ತನ್ನ ಗುಪ್ತ ವರದಿಯಲ್ಲಿ ಕಮ್ಯುನಿಸ್ಟರು ಅತ್ಯಂತ ಅಪಾಯಕಾರಿ ಶಕ್ತಿ ಎಂದು ನೇರವಾಗಿಯೇ ಒಪ್ಪಿಕೊಂಡಿದ್ದರು.

ನಾವಿಕದಂಗೆ

ಈ ಅವಧಿಯ ಇನ್ನೊಂದು ವಿಶೇಷ ಲಕ್ಷಣವೆಂದರೆ ಈ ಬ್ರಿಟಿಶ್ ವಿರೋಧಿ ಅಲ್ಲೋಲಕಲ್ಲೋಲದಲ್ಲಿ ಬ್ರಿಟಿಶ್ ಭಾರತೀಯ ಸೇನಾಪಡೆಗಳೂ ಸೇರಿಕೊಂಡದ್ದು. ಜನವರಿ 1946ರಲ್ಲಿ ಮುಂಬೈಯಲ್ಲಿ ವೈಮಾನಿಕ ಪಡೆಯ ಭಾರತೀಯ ಸದಸ್ಯರು ಜನಾಂಗ ಪಕ್ಷಪಾತದ ವಿರುದ್ಧ ಮುಷ್ಕರ ನಡೆಸಿದರು. ವಿಮಾನ ಪಡೆಯಿಂದ ಮುಕ್ತಗೊಳಿಸಿದಾಗ ಬೇರೆ ಉದ್ಯೋಗವಕಾಶ ಒದಗಿಸಬೇಕು ಎಂದು ಒತ್ತಾಯಿಸಿದರು. ಈ ಅವಧಿಯ ಅತ್ಯಂತ ಗಮನ ಸೆಳೆದ ಘಟನೆಯೆಂದರೆ ನಾವಿಕ ಪಡೆಯ ಸೈನಿಕರು ಮುಂಬೈಯಲ್ಲಿ ಫೆಬ್ರವರಿ 1946 ರಲ್ಲಿ ದಂಗೆಯೆದ್ದದ್ದು. ಅವರು ಯೂನಿಯನ್ ಜಾಕ್ ಬಾವುಟವನ್ನಿಳಿಸಿ ಅದರ ಸ್ಥಾನದಲ್ಲಿ ಕಾಂಗ್ರೆಸ್, ಲೀಗ್ ಮತ್ತು ಕೆಂಬಾವುಟವನ್ನು ಹಾರಿಸಿದರು. ಈ ನಾವಿಕ ಬಂಡಾಯಗಾರರಿಗೆ ನಾಗರೀಕರ ಸೌಹಾರ್ದತೆಯಂತೂ ಬ್ರಿಟಿಶ್ ಆಡಳಿತದಲ್ಲಿ ಆತಂಕವನ್ನೇ ಮೂಡಿಸಿತು. ಈ ನಾವಿಕ ಮತ್ತು ನಾಗರಿಕ ಬಂಡಾಯ ಒಟ್ಟಾಗಿ ನಡೆಯಲು ಸಾಧ್ಯವಾದದ್ದು ಬಹಳ ಮಟ್ಟಿಗೆ ಸಿಪಿಐ ನ ಪ್ರಯತ್ನದಿಂದಾಗಿಯೇ.

ಫೆಬ್ರವರಿ 21 ರಂದು ಕಮ್ಯುನಿಸ್ಟ್ ಕರೆಗೆ ಓಗೊಟ್ಟು ಮುಂಬೈಯಲ್ಲಿ ಹರತಾಳ ನಡೆದು ದಂಗೆಯೆದ್ದ ನಾವಿಕರಿಗೆ ಸೌಹಾರ್ದ ವ್ಯಕ್ತಪಡಿಸಲಾಯಿತು. ಮರುದಿನ ಮುಂಬೈ ಕಾರ್ಖಾನೆಗಳ ಕಾರ್ಮಿಕರು ಕೆಲಸ ಮಾಡದೆ ರಿನ್ ನಾವಿಕರ ದಂಗೆಗೆ ಬೆಂಬಲವಾಗಿ ನಡೆದ ಸಭೆ, ಮೆರವಣಿಗೆಗಳಲ್ಲಿ ಭಾಗವಹಿಸಿದರು. ಕಾಮಗಾರ್ ಮೈದಾನದಲ್ಲಿ ಒಂದು ಬೃಹತ್ ಸಭೆ ನಡೆಯಿತು. ಡಾಂಗೆ ಮತ್ತಿತರರು ಅಲ್ಲಿ ಮಾತನಾಡಿದರು. ಮುಂಬೈಯಲ್ಲಿ ಆರಂಭವಾದ ಈ ನಾವಿಕ ಬಂಡಾಯ ಬೇಗನೇ ಕರಾಚಿ, ಕಲ್ಕತ್ತಾ, ವಿಶಾಖಪಟ್ಟಣ ಮತ್ತಿತರ ಬಂದರುಗಳಿಗೂ ಹರಡಿತು. ಅಲ್ಲೂ ಬಂಡಾಯಗಾರರಿಗೆ ತಕ್ಷಣವೇ ಜನರಿಂದ ಬೆಂಬಲ ದೊರೆಯಿತು. ನನಗಿನ್ನೂ ನೆನಪಿದೆ - ಬೆಂಗಾಲ್ - ಅಸ್ಸಾಂ ರೈಲ್ವೆಯ ನೌಕರರು ರಿನ್ ಬಂಡಾಯಗಾರರು 24 ಗಂಟೆಗಳೊಳಗೆ ಶರಣಾಗತರಾಗದಿದ್ದರೆ ಬಾಂಬ್ ಹಾಕುವುದಾಗಿ ಬ್ರಿಟಿಶ್ ಸರಕಾರ ಬೆದರಿಸಿದಾಗ ಅದನ್ನು ಪ್ರತಿಭಟಿಸಿ ಮುಷ್ಕರ ನಡೆಸಬೇಕೆಂಬ ಕರೆಗೆ ಹುಮ್ಮಸ್ಸಿನಿಂದ ಓಗೊಟ್ಟರು. ಆಗ ಮಹಮದ್ ಇಸ್ಮಾಯಿಲ್ ಮತ್ತು ನಾನು ಆಳವಾಗಿ ತೊಡಗಿಸಿಕೊಂಡಿದ್ದ ಬೆಂಗಾಲ್ ಅಸ್ಸಾಂ ರೈಲ್ವೇಮೆನ್ಸ್ ಯೂನಿಯನ್ ಸಂಘಟಿಸಿದ ಮೊದಲ ರಾಜಕೀಯ ಮುಷ್ಕರ ಇದಾಗಿತ್ತು. ಸೈನಿಕರು ಮತ್ತು ನಾಗರೀಕರ ಅತೃಪ್ತಿಯ ಈ ಸಂಮೇಳ ನಮ್ಮ ಭವ್ಯ ಸ್ವಾತಂತ್ರ್ಯ ಹೋರಾಟದ ಒಂದು ಚಾರಿತ್ರಿಕ ಅಧ್ಯಾಯ. ದುರದೃಷ್ಟವಶಾತ್, ಕಾಂಗ್ರೆಸ್ಸಿನ ಪ್ರಬಲ ಮುಖಂಡತ್ವ ಈ ಕ್ರಾಂತಿಕಾರಿ ಸನ್ನಿವೇಶವನ್ನು ಇಷ್ಟಪಡಲಿಲ್ಲ. ಗಾಂಧಿ ಹಿಂಸಾಚಾರವನ್ನು ಖಂಡಿಸಿದರು. ಮೌಲಾನಾ ಅರ್ಝಾದ್ ಮತ್ತು ಸರ್ದಾರ್ ಪಟೇಲ್ ವೈಯುಕ್ತಿಕವಾಗಿ ಮಧ್ಯಪ್ರವೇಶಿಸಿ ನಾವಿಕರನ್ನು ಮುಷ್ಕರ ಹಿಂತೆಗೆದುಕೊಳ್ಳುವಂತೆ ಒತ್ತಾಯಿಸಿದರು. ಜಿನ್ನಾರಿಗೆ ಕೂಡಾ ರಿನ್ ಬಂಡಾಯದಿಂದ ಉಂಟಾದ ರಾಜಕೀಯ ವಾತಾವರಣ ಇಷ್ಟವಾಗಿರಲಿಲ್ಲ.

ಕಾಂಗ್ರೆಸ್ ಮುಖಂಡರಾಗಿದ್ದ ಅರುಣಾ ಆಸಫ್ ಆಲಿ ಕಮ್ಯುನಿಸ್ಟ್ ನೇತೃತ್ವದ ವಿದ್ಯಾರ್ಥಿ-ಯುವಜನ ಆಂದೋಲನವನ್ನು ಕಂಡು ಎಷ್ಟು ಪ್ರಭಾವಿತರಾದರೆಂದರೆ ಇಡೀ ದೇಶ ಈ ಕಾರ್ಯಾಚರಣೆಯ ಮಾದರಿಯನ್ನು ಅನುಸರಿಸಬೇಕು ಎಂದು ಆಗ್ರಹಪಡಿಸಿದರು.

> ೧೪-೧೫ ಆಗಸ್ಟ್ ಮಧ್ಯರಾತ್ರಿ ಆದ ಅಧಿಕಾರದ ವರ್ಗಾವಣೆ ಒಂದು ಅಪೂರ್ಣ ವರ್ಗಾವಣೆಯಾಗಿತ್ತು. ಏಕೆಂದರೆ ರಾಜಕೀಯ ಪರಿವರ್ತನೆಯ ಜೊತೆಗೆ ಒಂದು ತೀವ್ರಗಾಮಿ ಸಾಮಾಜಿಕ-ಆರ್ಥಿಕ ಪರಿವರ್ತನೆ ನಡೆಯಲಿಲ್ಲ.

ರೈತರ ಸಮರಶೀಲತೆ

ಸ್ವಾತಂತ್ರ್ಯದ ಮೊದಲಿನ ಈ ಅಂತಿಮ ಘಟ್ಟದಲ್ಲಿ ರೈತರಲ್ಲಿನ ಅತೃಪ್ತಿಯೂ ತಾರಕಕ್ಕೇರಿತು. ಇದರ ಹಿಂದಿದ್ದ ಪ್ರಧಾನ ಚಾಲಕ ಶಕ್ತಿಯೆಂದರೆ ಸಿಪಿಐ. 1946-47 ರಲ್ಲಿ ಬಂಗಾಳ ಪ್ರದೇಶ ಕಿಸಾನ್ ಸಭಾ ತೆಭಾಗ ಆಂದೋಲನವನ್ನು ಸಂಘಟಿಸಿತು. ಪಾಲುಬೆಳೆಗಾರರಿಗೆ ಬೆಳೆಯ ಮೂರನೇ ಎರಡು ಪಾಲು ಸಿಗಬೇಕೆಂಬ ಬೇಡಿಕೆಯ ಮೇಲೆ ಈ ಹೋರಾಟ ನಡೆಯಿತು. "ನಿಜ್ ಕಾಮಾರೇ, ಧಾನ್ ತೋಲೋ"(ನಿಜ ಕೆಲಸಕ್ಕೆ ಧಾನ್ಯ ಅಳೆ), ಲಂಗರ್ ಜಾಮ್ ಜಾಯೇ ತಾಕ್' ಮತ್ತು 'ಜಮೀನ್ದಾರಿ ಪ್ರಥಾ ಧ್ವಂಸ ಹೌಕ್"(ಜಮೀನ್ದಾರಿ ಪದ್ಧತಿ ಧ್ವಂಸವಾಗಬೇಕು) ಎಂಬುದು ಆಗ ಬಂಡಾಯಗಾರರ ಸಮರ ಕರೆಯಾಗಿತ್ತು. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಆಗಸ್ಟ್ 1946 ರಲ್ಲಿ ಕೋಮುವಾದಿ ಅತಿರೇಕ ಕಲ್ಕತ್ತಾ ಮತ್ತು ನೌಖಾಲಿಯನ್ನು ತಟ್ಟಿ ಜಾತ್ಯಾತೀತ ರಾಜಕೀಯವನ್ನು ಕುಂಠಿತಗೊಳಿಸಿದ್ದೂ ಅದು ಅಲ್ಪಕಾಲಕ್ಕೆ ಮಾತ್ರ, ದೀರ್ಘಾವಧಿಯಲ್ಲಿ ಪ್ರತಿಭಟನಾ ರಾಜಕೀಯವನ್ನು ನಿರ್ವಿಣ್ಣಗೊಳಿಸಲು ಅದಕ್ಕೆ ಸಾಧ್ಯವಾಗಲಿಲ್ಲ. ಸೂಕ್ತ ಐತಿಹಾಸಿಕ ಘಟ್ಟದಲ್ಲಿ ಅದು ಮತ್ತೆ ಕಾಣಿಸಿಕೊಂಡಿತು.

ಅದೇ ಅವಧಿಯಲ್ಲಿ ಬಂಗಾಳದ ಹೊರಗೆ ಇನ್ನೆರಡು ರೈತ ಬಂಡಾಯಗಳು ನಡೆದವು. 1946 ರಲ್ಲಿ ತಿರುವಾಂಕೂರಿನಲ್ಲಿ ಕಮ್ಯುನಿಸ್ಟ್ ಸ್ಫೂರ್ತಿಯಿಂದ ಪೊನ್ನಪ್ರ-ವಾಯಿಲಾರ್ ಬಂಡಾಯ ನಡೆಯಿತು. ಅದೇ ವೇಳೆಗೆ ತೆಲಂಗಾಣದಲ್ಲಿ ರೈತರು ಊಳಿಗಮಾನ್ಯ ಶೋಷಣೆಯ ವಿರುದ್ಧ ಕೆಂಬಾವುಟದ ಅಡಿಯಲ್ಲಿ ಒಟ್ಟಾಗಿ ಬಂಡೆದ್ದರು. ಈ ಬಂಡಾಯ ಜುಲೈ 1946 ರಿಂದ ಅಕ್ಟೋಬರ್ 1951 ರ ವರೆಗೆ 5 ವರ್ಷ ನಡೆಯಿತು. ಆಧುನಿಕ ಭಾರತದ ಅತಿ ದೀರ್ಘಾವಧಿಯ ಗೆರಿಲ್ಲಾ ರೈತ ಬಂಡಾಯವಿದು. ಕನಿಷ್ಟ 4000 ರೈತ ಜೀವಗಳು ಇದರಲ್ಲಿ ಬಲಿಯಾದವು. ಒಂದು ಉತ್ತಮ ಸಾಮಾಜಿಕ ವ್ಯವಸ್ಥೆಗಾಗಿ ನಡೆದ ಇಂತಹ ರೈತ ಬಂಡಾಯಗಳು ನಮಗೆ ಮನುಷ್ಯನಿಂದ ಮನುಷ್ಯ ಶೋಷಣೆಯಿಲ್ಲದ ಸಮಾಜ ನಿರ್ಮಾಣದಲ್ಲಿ ಸದಾ ಸ್ಫೂರ್ತಿದಾಯಕ.


ವಿಭಜನೆಯ ರಾಜಕೀಯ

ಇಲ್ಲಿ ನಾನು ಹೇಳಬಯಸುವ ಸಂಗತಿಯೆಂದರೆ ಕಮ್ಯುನಿಸ್ಟರು ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ರಾಷ್ಟ್ರೀಯವಾದಿ ಹಾಗೂ ಎಡ ಪ್ರೇರಿತ ಪ್ರತಿಭಟನಾ ರಾಜಕೀಯವನ್ನು ಪರಸ್ಪರ ಒಂದುಗೂಡಿಸಲು ಪ್ರಯತ್ನಿಸುವ ಮೂಲಕ ಒಂದು ಮಹತ್ವದ ಪಾತ್ರವನ್ನು ವಹಿಸಿದರು ಎಂಬುದು. ಅಲ್ಲದೆ ಕಮ್ಯುನಿಸ್ಟರು ಸತತವಾಗಿ ಹಿಂದೂ-ಮುಸ್ಲಿಂ ಐಕ್ಯತೆಗಾಗಿ ಹಾಗೂ ಒಂದು ಜಾತ್ಯಾತೀತ ರಾಜಕೀಯ ಸಂಸ್ಕೃತಿಯನ್ನು ಪೋಷಿಸಲು ಸದಾ ಶ್ರಮಿಸಿದರು. 1926 ರ ರಷ್ಟು ಹಿಂದೆಯೇ ಹಿಂದೂ - ಮುಸ್ಲಿಂ ದಂಗೆಗಳ ವಿರುದ್ಧ ಹಾಗೂ ಕೋಮು ಐಕ್ಯತೆಗಾಗಿ ಸಿಪಿಐ ಒಂದು ಪ್ರಣಾಳಿಕೆಯನ್ನು ಬಿಡುಗಡೆ ಮಾಡಿತ್ತು. 1946 ರ ಕಲ್ಕತ್ತಾ ಹಾಗೂ ನೌಕಾಲಿಗಳ ಕೋಮು ಕಾಂಡ ತಾರಕಕ್ಕೇರಿದಾಗ ಒಂದು ದೃಢ ಜಾತ್ಯಾತೀತ ನಿಲುವು ತಳೆದ ಪಕ್ಷವೆಂದರೆ ಸಿಪಿಐ. ಕಲ್ಕತ್ತೆಯಲ್ಲಿ ಕಮ್ಯುನಿಸ್ಟ್ ನೇತೃತ್ವದ ಟ್ರಾಮ್‌ವೇ ಕಾರ್ಮಿಕರ ಸಂಘ ಕೋಮು ದಳ್ಳುರಿಯನ್ನು ಎದುರಿಸುವಲ್ಲಿ ಒಂದು ಸಕಾರಾತ್ಮಕ ಪಾತ್ರ ವಹಿಸಿದ್ದರೆ, ಹಳ್ಳಿಗಳಲ್ಲಿ ಕಿಸಾನ್ ಸಭಾಗಳು ಕೋಮು ವಿಷ ಹರಡದಂತೆ ಎಚ್ಚರದಿಂದಿದ್ದವು. ಸ್ವಾತಂತ್ರ್ಯದ ಮುನ್ನಾದಿನ ಗಾಂಧೀಜಿ ಕಲ್ಕತ್ತೆಗೆ ಕೋಮು ಭಾವೋದ್ವೇಗವನ್ನು ಶಮನಗೊಳಿಸಲೆಂದು ಬಂದಾಗ ನಾವು ಅವರನ್ನು ಭೇಟಿಯಾಗಿ ಅವರ ಸಲಹೆಯಂತೆ ಶಾಂತಿ ಮೆರವಣಿಗೆಗಳನ್ನು ಸಂಘಟಿಸಿದೆವು.

ಆದರೂ ನಾವು ದೇಶದ ವಿಭಜನೆಯನ್ನು ತಡೆಯುವಲ್ಲಿ ವಿಫಲವಾದದ್ದೇಕೆ ಎಂಬ ಪ್ರಶ್ನೆ ಉಳಿದೇ ಉಳಿಯುತ್ತದೆ. ನಿಜ, ಬ್ರಿಟಿಶ್ ಸರಕಾರದ ಕೈವಾಡ ಇದರಲ್ಲಿ ಖಂಡಿತಾ ಇತ್ತು. ಯುದ್ಧಾನಂತರದ ತೀವ್ರಗಾಮಿ ಹಾಗೂ ಸಮರಧೀರ ಅಲ್ಲೋಲಕಲ್ಲೋಲ ಸಶಸ್ತ್ರ ಪಡೆಗಳನ್ನೂ ತಟ್ಟಿದಾಗ ಅವುಗಳಲ್ಲಿ ಕಮ್ಯುನಿಸ್ಟ್ ಚುಟುವಟಿಕೆಗಳು ಹರಡುತ್ತಿರುವುದನ್ನು ಕಂಡ ಬ್ರಿಟಿಶ್ ಆಳ್ವಿಕೆಗೆ ಗಾಬರಿಯಾಗಿತ್ತು. ವೈಸರಾಯ್ ವೇವಲ್‌ನ 'ಸ್ಮರಣೆ'ಗಳು ಹಾಗೂ ಹಿರಿಯ ಅಧಿಕಾರಶಾಹಿ ವಿ.ಪಿ.ಮೆನನ್‌ರ ತಪ್ಪೊಪ್ಪಿಗೆಗಳಿಂದ ಇದು ಸ್ಪಷ್ಟವಾಗುತ್ತದೆ. ಆದರೆ ಕಮ್ಯುನಿಸ್ಟ್ ಮತ್ತು ಎಡ ಆಂದೋಲನ ಒಂದು ಪರ್ಯಾಯ ಮುಖಂಡತ್ವ ನೀಡುವಷ್ಟು ಬಲಿಶಾಲಿಯಾಗಿತ್ತು. ಅದೇ ವೇಳೆಗೆ ಕಾಂಗ್ರೆಸ್ ಪಕ್ಷಕ್ಕೆ ಹಿಂದೂಗಳು ಮತ್ತು ಮುಸ್ಲಿಮರನ್ನು ಒಂದುಗೂಡಿಸಿ ಒಂದು ದೀರ್ಘಕಾಲದ ಸಾಮೂಹಿಕ ಹೋರಾಟಕ್ಕೆ ನೇತೃತ್ವ ನೀಡುವ ವಿಶ್ವಾಸ ಉಳಿದಿರಲಿಲ್ಲ. ಅಲ್ಲದೆ ತೀವ್ರಗಾಮಿ ಮತ್ತು ಎಡ ರಾಷ್ಟ್ರೀಯವಾದಿಗಳಿಗೆ ದೊರೆತ ಖ್ಯಾತಿಯಿಂದ ಅದಕ್ಕೆ ಗಾಬರಿಯಾಗಿತ್ತು. ಆದ್ದರಿಂದ ಬ್ರಿಟಿಶ್ ಸರಕಾರದ ಸಂಚುಗಳಿಗೆ ಅದು ಬಲಿ ಬಿದ್ದಿತು. ಈ ನಡುವೆ ಮುಸ್ಲಿಂ ಲೀಗ್ ವಿಭಿನ್ನ ಕಾರಣಗಳಿಂದಾಗಿ ಮುಸ್ಲಿಮರ ದೊಡ್ಡ ವಿಭಾಗಗಳ ನಡುವೆ ಒಂದು ಬಲಿಷ್ಟ ಶಕ್ತಿಯಾಗಿಬಿಟ್ಟಿತು. ಅದು ಸನ್ನಿವೇಶದ ಪ್ರಯೋಜನ ಪಡೆದು ಬ್ರಿಟಿಶ್ ಸರಕಾರದೊಂದಿಗೆ ದೇಶದ ವಿಭಜನೆ ಕುರಿತಂತೆ ಒಂದು ವ್ಯವಹಾರ ಕುದುರಿಸಿತು. ಇವೆಲ್ಲದರ ಫಲವೇ 15 ಆಗಸ್ಟ್ 1947 ರಂದು ಆದ ಅರ್ಧಂಬರ್ಧ ಇತ್ಯರ್ಥ.

ಸ್ವಾತಂತ್ರ್ಯದ ನಂತರ

14-15 ಆಗಸ್ಟ್ ಮಧ್ಯರಾತ್ರಿ ಆದ ಅಧಿಕಾರದ ವರ್ಗಾವಣೆ ಒಂದು ಅಪೂರ್ಣ ವರ್ಗಾವಣೆಯಾಗಿತ್ತು. ಏಕೆಂದರೆ ರಾಜಕೀಯ ಪರಿವರ್ತನೆಯ ಜೊತೆಗೆ ಒಂದು ತೀವ್ರಗಾಮಿ ಸಾಮಾಜಿಕ-ಆರ್ಥಿಕ ಪರಿವರ್ತನೆ ನಡೆಯಲಿಲ್ಲ. ಹಲವು ರೀತಿಯಲ್ಲಿ ಆಡಳಿತ ವ್ಯವಸ್ಥೆ ವಸಾಹತುಶಾಹಿ ಯುಗದ ಮುಂದುವರಿಕೆಯನ್ನೇ ಉಳಿಸಿಕೊಂಡಿತು. ಹೊಸ ಆಳುವ ಶಕ್ತಿಯಾದ ಕಾಂಗ್ರೆಸ್ ದೇಶವನ್ನು ದೊಡ್ಡ ಭೂ ಮಾಲಕರು ಮತ್ತು ದೇಶೀ ಬಂಡವಾಳಶಾಹಿಗಳ ಹಿತಾಸಕ್ತಿಗಳಿಗೆ ಅನುಸಾರವಾಗಿಯೇ ಆಳಲಾರಂಭಿಸಿತು. ಇದರಿಂದಾಗಿ ವರ್ಗ ಧ್ರುವೀಕರಣ ನಗರಗಳಲ್ಲೂ, ಗ್ರಾಮಾಂತರಗಳಲ್ಲೂ ತೀವ್ರಗೊಂಡಿತು. ಭಾರತದ ರಾಜಕೀಯ ಹೆಚ್ಚೆಚ್ಚಾಗಿ ಕೇಂದ್ರೀಕರಣದ ದನಿಯನ್ನು ಹೊರಡಿಸಲಾರಂಭಿಸಿತು. ಇದರಿಂದ ಗಂಭೀರ ಪ್ರಾದೇಶಿಕ ಅಸಮಾನತೆ ಉಂಟಾಯಿತು. ಒಂದು ನಾಗರಿಕ ಸಮಾಜಕ್ಕೆ ಅಗತ್ಯವಾದ ಮೂಲಭೂತ



ನಾವಿಕ ಬಂಡಾಯಗಾರರಿಗೆ ನಾಗರೀಕರ ಸೌಹಾರ್ದತೆಯಂತೂ ಬ್ರಿಟಿಶ್ ಆಡಳಿದಲ್ಲಿ ಆತಂಕವನ್ನೇ ಮೂಡಿಸಿತು. ಈ ನಾವಿಕ ಮತ್ತು ನಾಗರಿಕ ಬಂಡಾಯ ಒಟ್ಟಾಗಿ ನಡೆಯಲು ಸಾಧ್ಯವಾದದ್ದು ಬಹಳ ಮಟ್ಟಿಗೆ ಸಿಪಿಐ ನ ಪ್ರಯತ್ನದಿಂದಾಗಿಯೇ.

ಪರಿಸ್ಥಿತಿಗಳನ್ನು ನಿರ್ಮಿಸಲು ಭಾರತೀಯ ಪ್ರಭುತ್ವಕ್ಕೆ ಸಾಧ್ಯವಾಗಲಿಲ್ಲ. ನಿಜ ಸ್ಥಿತಿಯೆಂದರೆ ಬೇರೆ ರೀತಿಯಲ್ಲಿ ಪ್ರಜಾಸತ್ತಾತ್ಮಕವಾದ ಸಂವಿಧಾನದ ಕೆಲವು ಅಂಶಗಳನ್ನು ಬಳಸಿ ಇಂದಿರಾಗಾಂಧಿ ತುರ್ತು ಪರಿಸ್ಥಿತಿ ಹೇರಿದರು. ಎಲ್ಲಾ ಹಕ್ಕುಗಳನ್ನು ಮೂಲೆಗುಂಪು ಮಾಡಲಾಯಿತು. ಆದರೆ ಜನ ಪ್ರತಿರೋಧವನ್ನು ಮುಂದುವರಿಸಿದರು. ಜಯಪ್ರಕಾಶ್ ನಾರಾಯಣ್ ತುರ್ತು ಪರಿಸ್ಥಿತಿಯ ವಿರುದ್ಧ ಜನರನ್ನು ಎಬ್ಬಿಸುವಲ್ಲಿ ಒಂದು ಮಹತ್ವದ ಪಾತ್ರ ವಹಿಸಿದರು. ನಾವು ಈ ಅವಧಿಯಾದ್ಯಂತ ಅವರೊಡನೆ ಸಂಪರ್ಕ ಇಟ್ಟಕೊಂಡೆವು, ಅವರಿಗೆ ನೆರವಾದೆವು.

ಇದೇ ವೇಳೆಗೆ ಕೇಂದ್ರದಲ್ಲಿನ ಕಾಂಗ್ರೆಸ್ ಸರಕಾರಗಳು ಧಾರ್ಮಿಕ ಮೂಲಭೂತವಾದದ, ಸಂಕುಚಿತವಾದದ ಶಕ್ತಿಗಳಿಗೆ ನಿರ್ಣಾಯಕ ಜಾತ್ಯಾತೀತ ಹೊಡೆತ ನೀಡುವಲ್ಲಿ ವಿಫಲವಾದವು. ಇದರಿಂದಾಗಿ ಅವೀಗ ಭಯಾನಕ ರೂಪ ತಳೆದು ನಿಂತಿವೆ. ಸ್ವಾವಲಂಬನೆಯ ನೆಹರೂ ನಿಲುಮೆಯನ್ನು ಕೇಂದ್ರದ ಹಿಂದಿನ ಕಾಂಗ್ರೆಸ್ ಸರಕಾರ ವಿಶ್ವ ಬಂಡವಾಳಶಾಹಿಯ ಒತ್ತಡಗಳಿಗೆ ತಲೆಬಾಗಿ ಹ್ರಾಸಗೊಳಿಸಿತು. ಹೊಸ ಆರ್ಥಿಕ ನೀತಿಗಳ ಹಿನ್ನೆಲೆಯಲ್ಲಿ ಬಹುರಾಷ್ಟ್ರೀಯ ಕಂಪನಿಗಳಿಗೆ ಮಹಾದ್ವಾರವನ್ನೇ ತೆರೆದಿಡಲಾಯಿತು.

ಇದರರ್ಥ ಕಳೆದ ಐವತ್ತು ವರ್ಷಗಳಲ್ಲಿ ಭಾರತ ವಿಶ್ವದ ದೇಶಗಳ ಸಮೂಹದಲ್ಲಿ ಏನೇನೂ ಸಾಧಿಸಲಿಲ್ಲವೆಂದೇನೂ ಅಲ್ಲ. 1940 ರ ದಶಕದಲ್ಲಿ ವಸಾಹತುವಾದದ ಕುಸಿತದಲ್ಲಿ ಸ್ವಾತಂತ್ರ್ಯ ಗಳಿಸಿದ ದೇಶಗಳಲ್ಲೆಲ್ಲಾ ಭಾರತ ಒಂದು ಸ್ಥಿರ ಪ್ರಜಾಸತ್ತಾತ್ಮಕ ರಾಜಕೀಯ ವ್ಯವಸ್ಥೆಯನ್ನು ಉಳಿಸಿಕೊಳ್ಳಲು ಸಾಧ್ಯವಾಗಿದೆ. ಒಂದು ಕೈಗಾರಿಕಾ ತಳಹದಿಯನ್ನು ಕಟ್ಟಲು ಅದಕ್ಕೆ ಸಾಧ್ಯವಾಗಿದೆ. ತಪ್ಪು ಗ್ರಹಿಕೆಯ ಧೋರಣೆಗಳಿಂದಾಗಿ ಕೆಲವು ನಕಾರಾತ್ಮಕ ಲಕ್ಷಣಗಳು ಬೆಳೆದಿವೆ ಎಂಬುದು ಬೇರೆ ಮಾತು. ಕೃಷಿಯಲ್ಲಿ ಉತ್ಪಾದನೆ ಹೆಚ್ಚಿದೆ, ಆದರೆ ಭೂ ಸುಧಾರಣೆಯಿಂದ ಇನ್ನೂ ಹೆಚ್ಚಿನ ಬೆಳವಣಿಗೆ ಸಾಧ್ಯವಿತ್ತು. ಅದರಿಂದ ವಿಶಾಲ ಜನಸಮೂಹಗಳಿಗೂ ಸಹಾಯವಾಗುತ್ತಿತ್ತು. ಹಾಗೂ ಒಂದು ದೃಢ ಕೈಗಾರಿಕಾ ತಳಹದಿ ನಿರ್ಮಾಣವಾಗುತ್ತಿತ್ತು. ಅಂತರ್ರಾಷ್ಟ್ರೀಯ ಸಂಬಂಧಗಳಲ್ಲೂ ಭಾರತ ಒಂದು ಗೌರವಪೂರ್ವಕ ಪಾತ್ರ ವಹಿಸಿದೆ. ಅದು ಅಲಿಪ್ತ ಆಂದೋಲನದ ಸ್ಥಾಪಕ ಸದಸ್ಯರಲ್ಲಿ ಒಂದು. ಅದು ಅಂತರ್ರಾಷ್ಟ್ರೀಯ ವಿವಾದಗಳನ್ನು ಇತ್ಯರ್ಥ ಪಡಿಸುವಲ್ಲಿ ಮಧ್ಯ ಪ್ರವೇಶಿಸಿದೆ - ಮುಖ್ಯವಾಗಿ ವಿಶ್ವಸಂಸ್ಥೆಯ ಮೂಲಕ.

ಪರ್ಯಾಯ ದಾರಿ

ಎಡ ಪಕ್ಷಗಳ ಪಾತ್ರ

ಆದರೂ ಸ್ವಾತಂತ್ರ್ಯ ಹೋರಾಟಗಾರರು ಯಾವ ಒಂದು ಉತ್ತಮಭವಿಷ್ಯದ, ಸಮಾನತೆಯ ವ್ಯವಸ್ಥೆಯ ಕನಸು ಹೊತ್ತು ತ್ಯಾಗ ಬಲಿದಾನಗಳನ್ನು ನೀಡಿದರೋ ಆ ಕನಸು ನನಸಾಗದೇ ಉಳಿದಿದೆ. ನಮಗೀಗ ಬೇಕಾಗಿರುವುದು ರಾಷ್ಟ್ರ ಕಟ್ಟುವ ಒಂದು ಪರ್ಯಾಯ ಕಾರ್ಯತಂತ್ರ. ಕೇಂದ್ರ-ರಾಜ್ಯ ಸಂಬಂಧಗಳ ಪುನರ್ರಚನೆ, ರಾಜಕೀಯ ವ್ಯವಸ್ಥೆಯಲ್ಲಿ ಹೆಚ್ಚಿನ ಪ್ರಜಾಪ್ರಭುತ್ವೀಕರಣ, ಸಾಮಾಜಿಕ-ಆರ್ಥಿಕ ಪಕ್ಷಪಾತದ ನಿರ್ಮೂಲನೆ ಹಾಗೂ ನಮ್ಮ ಬಹುಸ್ವರೂಪಿ ಸಾಂಸ್ಕೃತಿಕ ಪರಂಪರೆಯ ಉತ್ತಮ ಅಂಶಗಳೆಲ್ಲಾ ಅರಳುವ ಒಂದು ಅವಕಾಶ. ಇವೆಲ್ಲಾ ಇರುವ ಪರ್ಯಾಯ ಕಾರ್ಯತಂತ್ರ ಬೇಕಾಗಿದೆ. ಪಶ್ಚಿಮ ಬಂಗಾಳದಲ್ಲಿ ಎಡರಂಗ ಸರಕಾರ ತನ್ನ ಸೀಮಿತ ಅಧಿಕಾರಗಳೊಂದಿಗೆ ಕಳೆದ 20 ವರ್ಷಗಳಲ್ಲಿ ಇಂತಹ ಒಂದು ಆಡಳಿತ ವ್ಯವಸ್ಥೆಯ ಪ್ರಯೋಗ ನಡೆಸುತ್ತಿದೆ. ಈ ಮೂಲಕ ಈಗಿರುವ ಸಂವಿಧಾನಿಕ ಚೌಕಟ್ಟಿನೊಳಗೆ ಜನಗಳ ಈಡೇರದ ಬೇಡಿಕೆಗಳಲ್ಲಿ ಕೆಲವನ್ನು ಪೂರೈಸಲು ಸಾಧ್ಯವಾಗಿದೆ. ಜನಗಳನ್ನು ಅಧಿಕಾರಸಂಪನ್ನಗೊಳಿಸಿ ನ್ಯಾಯವನ್ನು ಅವರ ಮನೆಬಾಗಿಲಿಗೆ ತಂದು, ಮೂಲಭೂತ ಭೂಸುಧಾರಣೆಗಳನ್ನು ಆರಂಭಿಸಿ, ಸ್ಥಳೀಯ ಸ್ವಯಮಾಡಳಿತವನ್ನು ಬಲಗೊಳಿಸಿ ರಾಜ್ಯದ ಅಗತ್ಯಗಳಿಗನುಗುಣವಾಗಿ ಕೈಗಾರೀಕರಣವನ್ನು ಪ್ರೋತ್ಸಾಹಿಸಿ, ಅದೇ ವೇಳೆಗೆ ಕಾರ್ಮಿಕ ವರ್ಗದ ಹಿತಾಸಕ್ತಿಗಳನ್ನು ಬಲಿಗೊಡದೆ ಎಡರಂಗ ಸರಕಾರ ಭಾರತದ ಆಡಳಿತಕ್ಕೆ ಒಂದು ಹೊಸ ಮಾದರಿಯನ್ನು ಮುಂದಿಟ್ಟಿದೆ. ಕಾಂಗ್ರೆಸ್ ಪ್ರಾಬಲ್ಯ ಕೊನೆಗೊಂಡು ಜನಗಳಲ್ಲಿ ವಿಶ್ವಾಸ ಕಳಕೊಂಡು, ತನ್ನ ಧೋರಣೆಗಳನ್ನು ಬದಲಿಸಲಾರದೆ ಹಾಗೂ ಕೋಮುವಾದಿ ಶಕ್ತಿಗಳೊಂದಿಗೆ ರಾಜಿ ಮಾಡಿಕೊಳ್ಳುತ್ತಿರುವ ಸಂದರ್ಭದಲ್ಲಿ ಅಖಿಲ ಭಾರತ ಹಾಗೂ ರಾಜ್ಯಗಳಲ್ಲಿ ಜನಪ್ರಿಯವಾಗಿರುವ ಪಕ್ಷಗಳ ಒಂದು ಮೂರನೇ ರಂಗ ಮೂಡಿ ಬರುವುದು ಭಾರತೀಯ ರಾಜಕೀಯದಲ್ಲಿ ಅನಿವಾರ್ಯವಾಯಿತು. ಬಿಜೆಪಿಯಂತಹ ಕೋಮುವಾದಿ ಪಕ್ಷದ ಉದಯದಿಂದಾಗಿ ಇದು ಇನ್ನಷ್ಟು ಅವಶ್ಯಕವಾಗಿದೆ. ಈ ಅಗತ್ಯವನ್ನು ಪೂರೈಸಬೇಕಾದರೆ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳನ್ನು ಬಲಪಡಿಸುವುದೂ ಅಗತ್ಯ. ಸಿಪಿಐ(ಎಂ) ಮತ್ತು ಇತರ ಎಡ ಪಕ್ಷಗಳಿಗೆ ಈಗ ಕೇಂದ್ರದಲ್ಲಿ ಒಂದು ಜಾತ್ಯಾತೀತ ಮತ್ತು ಪ್ರಜಾಸತ್ತಾತ್ಮಕ ಪರ್ಯಾಯವನ್ನು ಸ್ಥಾಪಿಸುವಲ್ಲಿ ನೆರವಾಗಲು ಒಂದು ಅವಕಾಶ ದೊರೆತಿದೆ. ಒಂದು ಸಮಾನ ಕನಿಷ್ಠ ಕಾರ್ಯಕ್ರಮದ ಮೂಲಕ ಈ ಪರ್ಯಾಯವನ್ನು ರೂಪಿಸಿ ದೇಶಾದ್ಯಂತ ಕೋಮುವಾದ ಮತ್ತು ಮೂಲಭೂತವಾದದ ವಿರುದ್ಧ ಒಂದು ಸೈದ್ಧಾಂತಿಕ ಸಮರ ನಡೆಸುವ ಅವಕಾಶ ದೊರೆತಿದೆ. ಭಾರತದ ಸ್ವಾತಂತ್ರ್ಯ ಹೋರಾಟ, ಅದರಲ್ಲೂ ಮುಖ್ಯವಾಗಿ 1942-44 ರ ಕಷ್ಟಕರ ಅವಧಿಯ ಅನುಭವ ನಮಗೊಂದು ಪಾಠ ಕಲಿಸಿದೆ. ಅದೇನೆಂದರೆ ಕೆಲವೊಮ್ಮೆ ತಾತ್ಕಾಲಿಕ ಹಿನ್ನಡೆಯಾದರೂ ಜನಗಳೊಂದಿಗೆ ದೃಢವಾಗಿ ನಿಂತರೆ ಕೊನೆಗೂ ನಮ್ಮ ರಾಜಕೀಯ ನೆಲೆಯನ್ನು ಉಳಿಸಿಕೊಳ್ಳಲು ಸಾಧ್ಯ. ಭಾರತವೀಗ ತನ್ನ ಇತಿಹಾಸದ ಒಂದು ಹೊಸ ಅಧ್ಯಾಯವನ್ನು ಆರಂಭಿಸಿರುವ ಸಂಧಿಕಾಲದಲ್ಲಿ ಈರಾಜಕೀಯ ತತ್ವವನ್ನು ನಾವು ನೆನಪಿಸಿಕೊಳ್ಳಬೇಕು.

> **ಜನಗಳನ್ನು ಅಧಿಕಾರಸಂಪನ್ನಗೊಳಿಸಿ ನ್ಯಾಯವನ್ನು ಅವರ ಮನೆಬಾಗಿಲಿಗೆ ತಂದು, ಮೂಲಭೂತ ಭೂಸುಧಾರಣೆಗಳನ್ನು ಆರಂಭಿಸಿ, ಸ್ಥಳೀಯ ಸ್ವಯಮಾಡಳಿತವನ್ನು ಬಲಗೊಳಿಸಿ ರಾಜ್ಯದ ಅಗತ್ಯಗಳಿಗನುಗುಣವಾಗಿ ಕೈಗಾರೀಕರಣವನ್ನು ಪ್ರೋತ್ಸಾಹಿಸಿ, ಅದೇ ವೇಳೆಗೆ ಕಾರ್ಮಿಕ ವರ್ಗದ ಹಿತಾಸಕ್ತಿಗಳನ್ನು ಬಲಿಗೊಡದೆ ಎಡರಂಗ ಸರಕಾರ ಭಾರತದ ಆಡಳಿತಕ್ಕೆ ಒಂದು ಹೊಸ ಮಾದರಿಯನ್ನು ಮುಂದಿಟ್ಟಿದೆ.**




ಪಶ್ಚಿಮ ಬಂಗಾಳದ ನೌಖಾಲಿಯಲ್ಲಿ ಗಾಂಧೀಜಿ. ಸ್ವಾತಂತ್ರ್ಯದ ಮುನ್ನಾದಿನ ಗಾಂಧೀಜಿ ಕಲ್ಕತ್ತೆಗೆ ಕೋಮುಭಾವೋದ್ವೇಗವನ್ನು ಶಮನ ಗೊಳಿಸಲೆಂದು ಆಗಮಿಸಿದಾಗ ಕಮ್ಯುನಿಸ್ಟರು ಅವರನ್ನು ಭೇಟಿಯಾಗಿ ಅವರ ಸಲಹೆಯಂತೆ ಶಾಂತಿ ಮೆರವಣಿಗೆಗಳನ್ನು ನಡೆಸಿದರು.

ಕರ್ನಾಟಕದಲ್ಲಿ ಕೃಷಿ ಕೊರತೆಯಿಂದ ಇನ್ನಷ್ಟು ಕೊರತೆಯತ್ತ

ಪಿ.ರಾಮಚಂದ್ರರಾವ್

ಕರ್ನಾಟಕ ರಾಜ್ಯ ಮೊದಲಿಂದಲೂ ಆಹಾರಧಾನ್ಯಗಳಲ್ಲಿ ಕೊರತೆಯ ರಾಜ್ಯ. ನೀರಾವರಿಯ ಮೂಲಕ ಪೂರ್ಣ ಪ್ರಯೋಜನ ಪಡೆಯದ ರಾಜ್ಯದಲ್ಲಿ ನೂತನ ಆರ್ಥಿಕ ನೀತಿಗಳ ಭಾಗವಾದ ನೂತನ ಕೃಷಿ ನೀತಿಯಿಂದಾಗಿ ಪರಿಸ್ಥಿತಿ ಇನ್ನಷ್ಟು ಹದಗೆಡುತ್ತಿದೆ. ಇಡೀ ಕೃಷಿಯ ಅಭಿವೃದ್ಧಿಯಲ್ಲಿ ಲಕ್ಷಾಂತರ ಬಡ ಮತ್ತು ಮಧ್ಯಮ ರೈತರ ಸಹಾಯದಿಂದ, ಅವರ ತೀವ್ರ ಭಾಗವಹಿಸುವಿಕೆಯ ಮೂಲಕ ಸಾಧಿಸುವ ಬದಲು ಕೆಲವೇ ಶ್ರೀಮಂತ ರೈತರು ಹಾಗೂ ಬಂಡವಾಳಶಾಹಿ ಕೃಷಿಕರು ಹಾಗೂ ಕಂಪನಿಗಳ ಮೂಲಕ ಸಾಧಿಸಲು ಹೊರಟಂತಿರುವ ಹಾದಿ ಖಂಡಿತವಾಗಿಯೂ ಅವನತಿಯ ಹಾದಿಯೆನ್ನಬೇಕಾಗುತ್ತದೆ.



ಹಿಂದಿನಿಂದಲೂ ಕರ್ನಾಟಕದಲ್ಲಿ ಕೃಷಿ ವಲಯು ಕ್ಷೀಣವಾಗಿಯೇ ಇತ್ತು. ಉದಾಹರಣೆಗೆ, ಕಾವೇರಿ ನದಿಯು ಉದ್ದಕ್ಕೂ ತಮಿಳುನಾಡಿನ ಕೃಷಿಗೆ ಹೋಲಿಸಿದರೆ ಅದು ಬಹಳ ಹಿಂದೆ ಬಿತ್ತು. ವಿಶ್ವೇಶ್ವರಯ್ಯನವರ ಪ್ರಯತ್ನದಿಂದ ಕಾವೇರಿ ನದಿಯ ಅಡ್ಡಕ್ಕೆ ಕೆ.ಆರ್.ಸಾಗರದಲ್ಲಿ ಕನ್ನಂಬಾಡಿ ಕಟ್ಟೆ ಹಾಕಿ ಕಾಲುವೆ ನಿರ್ಮಾಣ ಮಾಡಿದುದರಿಂದಾಗಿ ಸ್ವಲ್ಪ ನೀರಾವರಿ ಉಂಟಾಗಿ ಕೃಷಿ ಮಂಡ್ಯದ ಜಿಲ್ಲೆಯಲ್ಲಿ ವೃದ್ಧಿಯಾಯಿತು. ಹಾಗೆಯೇ ಕೃಷ್ಣಾ ನದಿ ನೀರಿನ ಕರ್ನಾಟಕದ ಪಾಲನ್ನು ಬಳಸಲು ಕ್ರಿಸ್ತಶಕ 2000 ಕ್ಕೆ ಇನ್ನೂ ಕೇವಲ 3 ವರ್ಷಗಳು ಮಾತ್ರ ಉಳಿದಿದೆ. ಅತ್ತ ಆಂಧ್ರ ಪ್ರದೇಶದವರು ಕೇಂದ್ರಸರಕಾರದ ಮೇಲೆ ಒತ್ತಡಹೇರಿ ಸಾಕಷ್ಟು ಹಣಸಹಾಯ ಪಡೆದು ಈಗಾಗಲೇ ಬೃಹತ್ ಅಣೆಕಟ್ಟುಗಳನ್ನು ಕಟ್ಟಿಕೊಂಡು - ನಾಗಾರ್ಜುನ , ಶ್ರೀಶೈಲಂ ಇತ್ಯಾದಿ - ತಮ್ಮ ಪಾಲಿನ ಎಲ್ಲಾ ನೀರನ್ನು ಬಳಸಿ ಕೃಷಿ ಕ್ಷೇತ್ರವನ್ನು ಬಹಳಷ್ಟು ವಿಸ್ತರಿಸಿಕೊಂಡಿದ್ದಾರೆ. ತುಂಗಭದ್ರಾ, ಮಲಪ್ರಭಾ ನೀರಾವರಿ ಎಲ್ಲವೂ ಸೇರಿದರೆ ಕರ್ನಾಟಕದ ನೀರಾವರಿ ಕೇವಲ 24 ಶೇಕಡಾ. ದೇಶದಲ್ಲಿ ಅತ್ಯಂತ ಕಡಿಮೆ ನೀರಾವರಿ ಪ್ರದೇಶ. ಆದಕಾರಣ ಕೃಷಿಯ ಬಹುಭಾಗ ಮಳೆರಾಯನ ಕೃಪಾಕಟಾಕ್ಷದ ಮೇಲೆ ಹೊಂದಿಕೊಂಡಿದೆ ಎಂಬುದು ಸತ್ಯಸಂಗತಿ.

ಇದೆಲ್ಲದರ ಪರಿಣಾಮವಾಗಿ ಒಟ್ಟಿನಲ್ಲಿ ಕರ್ನಾಟಕ ರಾಜ್ಯ ಆಹಾರ ಧಾನ್ಯಗಳಲ್ಲಿ ಮೊದಲಿನಿಂದಲೂ ಕೊರತೆಯ ರಾಜ್ಯವಾಗಿದೆ. ಈಗ, ನೂತನ ಆರ್ಥಿಕ ನೀತಿಗಳು ಜಾರಿಗೆ ಬಂದ ನಂತರ ಆಹಾರಧಾನ್ಯದ ಕೊರತೆ ದಿನೇ ದಿನೇ ಹೆಚ್ಚಾಗುತ್ತಿದೆ, ಕರ್ನಾಟಕದ ಜನತೆಯ ಮುಖ್ಯ ಆಹಾರಧಾನ್ಯಗಳಾದ ರಾಗಿ ಮತ್ತು ಜೋಳ ಇವುಗಳ ಉತ್ಪಾದನಾ ಕ್ಷೇತ್ರವು ಕ್ಷೀಣಿಸುತ್ತಾ ಬರುತ್ತಿದೆ. ಮಾತ್ರವಲ್ಲ ಇಳುವರಿ ಕೂಡಾ ಕಡಿಮೆಯಾಗುತ್ತಾ ಬರುತ್ತಿದೆ.

ಆದರೂ, ಸ್ವಾತಂತ್ರ್ಯಾ ನಂತರದ ದಶಕಗಳಲ್ಲಿ ಕರ್ನಾಟಕ ರಾಜ್ಯದಲ್ಲಿ ಕಬ್ಬು, ಹತ್ತಿ, ಅಡಿಕೆ, ತೊಗರಿ, ತೆಂಗು ಮೊದಲಾದ ವಾಣಿಜ್ಯ ಬೆಳೆಗಳು ಬೆಳೆಯುವ ವಿಸ್ತೀರ್ಣ ಅಧಿಕಗೊಂಡಿದೆ ಮಾತ್ರವಲ್ಲ ಆ ಬೆಳೆಗಳ ಇಳುವರಿ ಕೂಡಾ ವೃದ್ಧಿಯಾಗುತ್ತಾ ಹೋಗಿದೆ. ಆದರೆ ಇವುಗಳ ಹೆಚ್ಚಿನ ಲಾಭ ಶ್ರೀಮಂತ ರೈತರ ಹಾಗೂ ಭೂಮಾಲಕರ ಪಾಲಿಗೆ ಹೋಗಿವೆ. ಬಹುಭಾಗದ ರೈತರು ಈ ಬೆಳೆಗಳನ್ನು ಬೆಳೆಸಿ ಮಾರುಕಟ್ಟೆಗೆ ಸಕಾಲದಲ್ಲಿ ತಂದರೂ, ಆದಾಯದಾಯಕ ಬೆಲೆಗಳಿಂದ ವಂಚಿತರಾಗಿ ಲಾಭ ಗಳಿಸುವ ಬದಲು, ನಷ್ಟವನ್ನೇ ಅನುಭವಿಸುತ್ತಾ ಬಂದಿದ್ದಾರೆ, ಬರುತ್ತಿದ್ದಾರೆ. ಆದಕಾರಣ ಬಹುಭಾಗದ ರೈತರು ಸಾಲದಿಂದ ಇತ್ತೀಚಿಗಿನ ವರ್ಷಗಳಿಂದ ಬಳಲುತ್ತಿದ್ದಾರೆ.

ದೇವರಾಜ ಅರಸರು ಬಹಳ ಆಸಕ್ತಿಯಿಂದ ತಂದ ಕರ್ನಾಟಕ ಭೂಸುಧಾರಣಾ(ತಿದ್ದುಪಡಿ) ಕಾನೂನು ಬಂದು(ಅದು 1974 ರಲ್ಲಿ ಜಾರಿಯಾಯಿತು) ಇದೀಗ 25 ವರ್ಷಗಳು ಉರುಳಿದರೂ ಅದರ ಪ್ರಯೋಜನ ರಾಜ್ಯದ ರೈತರಿಗೆ ಹೆಚ್ಚಿನೆಡೆ ದೊರೆಯಲಿಲ್ಲ. ಮಲೆನಾಡಿನ ಮತ್ತು ಕರಾವಳಿಯ 3-4 ರಾಜ್ಯಗಳಿಗೆ ಮಾತ್ರ ಪ್ರಯೋಜನವಾಗಿದೆ. ರಾಜ್ಯದ ಉತ್ತರ ಭಾಗದಲ್ಲಿ ಇದರ ಪರಿಣಾಮವೇನೇನೂ ಆಗಲಿಲ್ಲ. ರಾಜ್ಯದಲ್ಲಿ ಕೇವಲ 10 ಲಕ್ಷ ಎಕ್ರೆ ಭೂಮಿಯನ್ನು ಮತ್ತು ಭೂಮಿತಿಯ ಕಲಮಿನನ್ವಯ ಸರಕಾರವು ಸ್ವಾಧೀನ ಪಡಿಸಿ ಭೂರಹಿತರಿಗೆ ಹಂಚಲಾಗಿದೆ. ಇದೇ ವೇಳೆ ಪಶ್ಚಿಮಬಂಗಾಳದಂತಹ ಸಣ್ಣ ರಾಜ್ಯಗಳಲ್ಲಿ ಭೂ ಪರಿಮಿತಿಗಿಂತ ಹೆಚ್ಚಿನ ಭೂಮಿ ಸುಮಾರು 12 ಲಕ್ಷ ಎಕ್ರೆಯಷ್ಟು ಭೂ-ರಹಿತರಿಗೆ ಹಂಚಿಕೊಡಲಾಗಿದೆ - ಎಡರಂಗ ಸರಕಾರದ ಅಡಿಯಲ್ಲಿ.

ಭೂಸುಧಾರಣೆಗಳು ತೀವ್ರ ರೀತಿಯಲ್ಲಿ ಜಾರಿಗೊಳ್ಳದಿರುವುದರಿಂದ ರಾಜ್ಯದಲ್ಲಿ ನಜೀರ್ ಸಾಹೇಬರ ನೇತೃತ್ವದಲ್ಲಿ ಸಾಧಾರಣವಾಗಿ ಪ್ರಗತಿ ಪರವಾದ ಪಂಚಾಯತ್ ಕಾನೂನು ಜಾರಿಗೆ ಬಂದರೂ, ಅದರ ಪ್ರಯೋಜನವನ್ನು ಗ್ರಾಮಾಂತರದ ಬಡಜನರ ಬಹುಭಾಗ ಪಡೆಯಲು ಸಾಧ್ಯವಾಗಲಿಲ್ಲ. ಪಶ್ಚಿಮಬಂಗಾಳದಲ್ಲಿ ಹೆಚ್ಚಿನ ಪಂಚಾಯತ್‌ಗಳಲ್ಲಿ ಕೃಷಿಕೂಲಿಗಾರರು, ಬಡರೈತರು, ಅಧಿಕ ಸಂಖ್ಯೆಯಲ್ಲಿ ಪಂಚಾಯತ್ ಸದಸ್ಯರು, ಮಾತ್ರವಲ್ಲ ಪಂಚಾಯತ್ ಅಧ್ಯಕ್ಷರು, ಉಪಾಧ್ಯಕ್ಷರು ಆರಿಸಲ್ಪಟ್ಟರೆ, ಕರ್ನಾಟಕದಲ್ಲಿ ಈ ಸಂಖ್ಯೆ ತೀರ ಕಡಿಮೆಯಾಗಿದೆ. ಇದಕ್ಕೆ ಇಲ್ಲಿ ಜಾರಿಯಿರುವ ಭೂ ಸುಧಾರಣೆಗಳ ವೈಫಲ್ಯವೇ ಕಾರಣ ಎಂಬುದರಲ್ಲಿ ಏನೂ ಸಂಶಯವಿಲ್ಲ.

ಇನ್ನು ನೂತನ ಆರ್ಥಿಕ ನೀತಿಗಳು 1991 ರಿಂದ ದೇಶದಲ್ಲಿ ಜಾರಿಯಾದ ಹಿನ್ನೆಲೆಯಲ್ಲಿ ನಮ್ಮ ರಾಜ್ಯದ ಸರಕಾರಗಳೂ ಅವೇ ನೀತಿಗಳನ್ನು ಆತುರಾತುರವಾಗಿ ಅನ್ವಯಿಸುತ್ತಾ ಬಂದುದರಿಂದ ರಾಜ್ಯದ ಕೃಷಿಯ ಮೇಲೆ ಬಹಳ ಪರಿಣಾಮವನ್ನುಂಟುಮಾಡಿದೆ.

ಮುಖ್ಯ ಪರಿಣಾಮಗಳನ್ನು ಈ ರೀತಿ ವಿವರಿಸಬಹುದು:

1. ಮೇಲೆ ವಿವರಿಸಿದಂತೆ ಆಹಾರ ಧಾನ್ಯಗಳ ಉತ್ಪಾದನೆ ವರ್ಷ ವರ್ಷ ಕಡಿಮೆಯಾಗುತ್ತಾ ಬರುತ್ತಿದೆ. ಆಹಾರ ಧಾನ್ಯಗಳ ಉತ್ಪಾದನೆಯು ತುಲನಾತ್ಮಕವಾಗಿ ಲಾಭದಾಯಕ ಬೆಳೆಗಳಲ್ಲವಾದುದರಿಂದ "ಯಾಕೆ ಆಹಾರ ಧಾನ್ಯಗಳನ್ನು ಬೆಳೆಸಿ ನಾಶವಾಗುತ್ತೀರಿ, ವಾಣಿಜ್ಯ ಬೆಳೆಗಳನ್ನು ಬೆಳೆಸಿರಿ, ಹಣದ ಬೆಳೆ ಬೆಳೆಸಿ, ರಫ್ತು ಮಾಡಿ" ಇತ್ಯಾದಿ ಇತ್ಯಾದಿ ಪ್ರಚಾರ ಸಾರ್ವತ್ರಿಕವಾಗಿ ನಡೆಯಿತು. ರೈತರು ನಿಧಾನವಾಗಿ ಆಹಾರ ಧಾನ್ಯಗಳನ್ನು ಬೆಳೆಸುವುದನ್ನು ಕಡಿಮೆ ಮಾಡುತ್ತಾ ಬಂದರು. ಕೆಲವೆಡೆ ಕೃಷಿಯ ಖರ್ಚು ಜಾಸ್ತಿಯಾಗುತ್ತಿದೆ ಎಂದು ನೆಪವೊಡ್ಡಿ ನೀಲಗಿರಿ ಮರಗಳನ್ನು ಆಹಾರಧಾನ್ಯಗಳು ಬೆಳೆಯುತ್ತಿದ್ದ ಜಾಗಗಳಲ್ಲಿ ಕೃಷಿ ಮಾಡಲು ಆರಂಭಿಸುತ್ತಾ ಬಂದರು. ಕೋಲಾರ ಇದಕ್ಕೆ ಉತ್ತಮ ಉದಾಹರಣೆಯಾಗಿದೆ.

2. ವಾಣಿಜ್ಯ ಬೆಳೆಗಳನ್ನು ಬೆಳೆಸಲು ರೈತರು ಆಕರ್ಷಿತರಾದ ಪರಿಣಾಮವಾಗಿ ಎಲ್ಲರೂ ವಾಣಿಜ್ಯ ಬೆಳೆಗಳನ್ನು ಬೆಳೆಸಲು ಶುರು ಮಾಡಿದರು.

ಪರಿಣಾಮ, ಅವುಗಳ ಉತ್ಪನ್ನಗಳಲ್ಲಿ ತೀವ್ರ ಏರುಪೇರು ಹಾಗೂ ಅವುಗಳ ಬೆಲೆಗಳಲ್ಲಿ ಏರುಪೇರು, ಇವುಗಳ ದೊಡ್ಡ ಪೆಟ್ಟು ಸಣ್ಣ ಸಣ್ಣ ರೈತರ ಮೇಲೆ. ಮಾರ್ಕೆಟಿನಲ್ಲಿ ಬೆಲೆಗಳು ಸ್ಥಿರವಾಗುವ ತನಕ ಕಾದು ನಿಲ್ಲಲು ಅಶಕ್ತರಾದ ಬಹುಭಾಗದ ಸಣ್ಣ ರೈತರು ತೀವ್ರ ಆಘಾತಕೊಳಗಾಗುತ್ತಾ ಬಂದರು. ಹೆಚ್ಚೆಚ್ಚು ಪ್ರದೇಶಗಳಲ್ಲಿ ಈ ರೈತರು ತಾವು ತಮ್ಮ ಹೊಲಗಳಲ್ಲಿ ಕೃಷಿ ಮಾಡುವುದನ್ನು ತೊರೆದು, ಶ್ರೀಮಂತ ರೈತರಿಗೆ- ವಿಶೇಷವಾಗಿ ಆಂಧ್ರದಿಂದ ಬಂದ ರೈತರಿಗೆ-ಹೊಲಗಳನ್ನು 'ಲೀಸ್'ಗೆ ಕೊಟ್ಟು ಅಲ್ಪ ಸ್ವಲ್ಪ ಹಣ ಪಡೆದು ತಾವು ಇತರ ಕಸುಬುಗಳನ್ನು ಅರಸುತ್ತಾ ಹೋಗುವಂತಾಗಿದೆ; ಅಥವಾ ಅಲಸಿಗರಾಗಿ ಜೀವನ ನಿರ್ವಹಿಸುವವರಾಗಿದ್ದಾರೆ. ಸರಕಾರದ ಬೆಲೆ ನಿರ್ಣಯಗಳಿಂದ ಬಹುಭಾಗದ ರೈತರಿಗೆ ಏನೇನೂ ಪ್ರಯೋಜನವಾಗುವುದಿಲ್ಲ ಎಂಬುದು ಎಲ್ಲರಿಗೂ ತಿಳಿದ ವಿಷಯ.


3. ನೂತನ ಆರ್ಥಿಕ ನೀತಿಗಳ ಭಾಗವಾಗಿ ರಾಜ್ಯದಲ್ಲಿ ಭೂ ಸುಧಾರಣಾ ಕಾನೂನು ವಿಪರೀತವಾಗಿ ತಿದ್ದುಪಡಿಗೊಂಡಿದೆ. ಹಿಂದೆ ಭೂ ಸುಧಾರಣೆಗಳ ನಿಯಮಕ್ಕನುಸಾರವಾಗಿ ಕೇವಲ ಕೃಷಿಕರೇ ಕೃಷಿಕರ ಭೂಮಿಯನ್ನು ಸಣ್ಣ ಪ್ರಮಾಣದಲ್ಲಿ ಕೊಂಡುಕೊಳ್ಳಲು ಸಾಧ್ಯವಿದ್ದರೆ, ಈಗ ನೂತನ ತಿದ್ದು ಪಡಿಯ ಪರಿಣಾಮವಾಗಿ ದೊಡ್ಡ ದೊಡ್ಡ ಕಂಪನಿಗಳು (ದೇಶೀಯ ಅಥವಾ ವಿದೇಶಿ) ಕೃಷಿಕರ ಭೂಮಿಯನ್ನು ಖರೀದಿಸಬಹುದು. ಅವರು ಹಾಗೆ ಖರೀದಿಸಿದ ಕೃಷಿ ಭೂಮಿಯಲ್ಲಿ ತಮ್ಮ ಇಚ್ಛೆಯ ಕೃಷಿಯನ್ನು - ಹೂ, ಹಣ್ಣು, ಹಂಪಲು ಇತ್ಯಾದಿ - ಕೈಗೊಳ್ಳಬಹುದು. ಅಥವಾ ಬಿಲ್ಡಿಂಗ್‌ಗಳನ್ನು ಕಟ್ಟಬಹುದು, ದೇವಸ್ಥಾನಗಳನ್ನು ಕಟ್ಟಿಸಬಹುದು. ರಾಜ್ಯದ ಉದ್ದಗಲಕ್ಕೆ ಪ್ರಯಾಣ ಮಾಡಿದರೆ, ಹಿಂದೆ ಕೃಷಿಗೆ ಒಳಗಾಗಿದ್ದ ಲಕ್ಷಾಂತರ ಏಕರೆ ಭೂಮಿ ಈಗಿನ ಕೆಲವು ವರ್ಷಗಳಲ್ಲಿ ಕೃಷಿಯೇತರ ಉದ್ದೇಶಗಳಿಗೆ ಒಳಗಾಗುತ್ತಿರುವ ದೃಶ್ಯ ಕಾಣುತ್ತಿದೆ. ಒಟ್ಟಿನಲ್ಲಿ ನೂತನ ಆರ್ಥಿಕ ನೀತಿಯ ಫಲವಾಗಿ(ವಿಶೇಷವಾದ ನಗರೀಕರಣ ಪ್ರಕ್ರಿಯೆಗೆ ಒಳಗಾಗಿಯೂ) ಕೃಷಿ ಭೂಮಿ ತೀವ್ರ ಕಡಿಮೆ-ಕಡಿಮೆಯಾಗುತ್ತಿರುವದರಲ್ಲಿ ಸಂಶಯವಿಲ್ಲ.

4. ನೂತನ ಆರ್ಥಿಕ ನೀತಿಯ ಫಲವಾಗಿ ರಾಷ್ಟ್ರೀಯ ಬ್ಯಾಂಕುಗಳು ಖಾಸಗಿ ದೇಶೀಯ ಮತ್ತು ವಿದೇಶಿಯ ಬ್ಯಾಂಕುಗಳ ಜತೆ ಪೈಪೋಟಿ ಮಾಡಿ ಲಾಭ ಗಳಿಸುವ ಉದ್ದೇಶದಿಂದ ಕೂಡಿರುವುದರಿಂದ, ಹಿಂದಿನ ರಾಷ್ಟ್ರೀಯ ಬ್ಯಾಂಕುಗಳ ಸಾಲದ ಆದ್ಯತೆ ತೀವ್ರ ಬದಲಾಗಿದೆ. ಹಿಂದೆ 40 ಶೇಕಡ ಕೃಷಿ ಸಾಲಗಳನ್ನು ರಾಷ್ಟ್ರೀಕೃತ ಬ್ಯಾಂಕುಗಳು ಒದಗಿಸುತ್ತಿದ್ದರೆ, ಅದೀಗ ಕೇವಲ 10 ಶೇಕಡಾದಷ್ಟು ಇಳಿಯುವತ್ತ ದಾಪುಗಾಲು ಇಡುತ್ತಿವೆ. ಈಗಾಗಲೇ ಬಹುಭಾಗದ ಸಣ್ಣ ಮತ್ತು ಮಧ್ಯಮ ರೈತರು ರಾಷ್ಟ್ರೀಕೃತ ಬ್ಯಾಂಕ್‌ಗಳಿಂದಾಗಲೀ, ಸಹಕಾರಿಗಳಿಂದಾಗಲಿ ಸಾಲಗಳನ್ನು ಪಡೆಯುವ ಸ್ಥಿತಿ ತೀರಾ ಹದಗೆಟ್ಟಿದೆ. ಇತ್ತೀಚೆಗಿನ ಒಂದು ವರದಿಯ ಪ್ರಕಾರ ಸಹಕಾರಿಗಳು ಕೊಡುವ ಸಾಲಗಳು ದೊಡ್ಡ ದೊಡ್ಡ ಶ್ರೀಮಂತ ರೈತರಿಗೆ ಮತ್ತು ಬಂಡವಾಳಶಾಹಿ ಕೃಷಿಕರಿಗೆ ಟ್ರಾಕ್ಟರ್ ಇತ್ಯಾದಿ ಸಾಲಗಳಾಗಿ ಹೋಗುತ್ತಿವೆ, ಬಹುಭಾಗದ ಸಣ್ಣ ಮತ್ತು ಮಧ್ಯಮ ರೈತರಿಗೆ ಸಿಗುತ್ತಿಲ್ಲ. ಮಾತ್ರವಲ್ಲ ನಬಾರ್ಡಿನ ಸಾಲಗಳು ಉದ್ಯೋಗಪತಿಗಳಿಗೆ ಕೂಡ ವಿತರಿಸಲ್ಪಡುತ್ತಿವೆ!

ಮುಂದೆ, ಸಕಾಲದಲ್ಲಿ ಸಾಲಗಳನ್ನು ಪಡೆಯಲು ವಿಫಲರಾಗಿ, ತಮ್ಮ ಅಲ್ಪಸ್ವಲ್ಪ ಭೂಮಿಯನ್ನು ಪರಭಾರೆಮಾಡುವ ಸ್ಥಿತಿಗೆ ಬಹುಭಾಗದ ಸಣ್ಣ ಮತ್ತು ಮಧ್ಯಮ ರೈತರು ತಲುಪಿದರೆ ಆಶ್ಚರ್ಯವಿರಲಾರದು.

5. ನೂತನ ಆರ್ಥಿಕ ನೀತಿಗಳ ಫಲವಾಗಿ ಅಧಿಕ ಇಳುವರಿ ಬೀಜಗಳು ರಾಸಾಯನಿಕ ಗೊಬ್ಬರಗಳ(ಅದರಲ್ಲೂ ಫೋಸ್ಪೇಟ್, ಪ್ಪೋಟಾಶ್ ಇತ್ಯಾದಿ) ಮತ್ತು ಕ್ರಿಮಿನಾಶಕಗಳ ಬೆಲೆಗಳು ವಿಪರೀತವಾಗಿ ಏರುತ್ತಿವೆ. ಇವುಗಳ ಕುರಿತು ಸರಕಾರಿ ಆಸಕ್ತಿ ತೀರ ಕಡಿಮೆಯಾಗುತ್ತಿದೆ. ಇವುಗಳಲ್ಲಿ ಯಾವುದನ್ನೂ ಸರಕಾರ ಇನ್ನು ಮುಂದೆ ರೈತರಿಗೆ ಒದಗಿಸುವುದು ನಿಂತು ಹೋಗುತ್ತದೆ. ಮಾತ್ರವಲ್ಲ ಸರಕಾರಿ ಮತ್ತು ಕೃಷಿ ವಿಶ್ವ ವಿದ್ಯಾಲಯಗಳ "ಅನುಭವೀ ಸಲಹೆಗಳು" ಬಹುಭಾಗದ ರೈತರಿಗೆ ದೊರೆಯುವುದಿಲ್ಲ. ಅದು ಕೇವಲ ಒಂದು ಸಣ್ಣ ವಿಭಾಗದ ಆಧುನಿಕ ರಫ್ತು ಮಾಡುವ ಕೃಷಿಕ ವಿಭಾಗಗಳಿಗೆ ಮಾತ್ರ ದೊರೆಯುವುದು. ಕೃಷಿ ತಮ್ಮ ಹೊಟ್ಟೆ ಹೊರೆಯದ ಸ್ಥಿತಿ ಬಂದಾಗ, ಈ ರೈತರು ತಮ್ಮ ಭೂಮಿಯನ್ನು ಮಾರಲು ನಿರ್ಬಂಧಿತರಾಗಿ ಭೂಮಿ ಕಳೆದುಕೊಳ್ಳುವಸ್ಥಿತಿ ಬೇಗನೆ ಬರುವ ಸಾಧ್ಯತೆ ಬಹಳಷ್ಟು ಇದೆ.

6. ಹಲವು ಜಿಲ್ಲೆಗಳಲ್ಲಿ ಈಗಾಗಲೇ ಕುಡಿಯುವ ನೀರಿಗೆ ಬರ ಬಂದಿದೆ. ಇನ್ನು ಕೃಷಿಗೆ ಬೇಕಾದ ವಿಫುಲ ನೀರನ್ನು ರೈತರು ಎಲ್ಲಿಂದ ಪಡೆಯಬೇಕು?. ಕೊಳವೆ ಬಾವಿಗಳನ್ನು 300-350 ಅಡಿಗೆ ಇಳಿಸಿದರೂ ನೀರು ದೊರಕುವುದಿಲ್ಲ. ಆಗ 500 ಅಡಿ ಕೊಳವೆ ಬಾವಿಯಿಂದ ನೀರು ಪಡೆಯುವ ಶ್ರೀಮಂತರ ಬಳಿ ನೀರಿಗಾಗಿ ಇತರರ ರೈತರು ಅಂಗಲಾಚಬೇಕಾಗುವುದು. ಆ ನೀರಿನ ದರಗಳು ವಿಪರೀತ ಹೆಚ್ಚಾಗಿ ಸಣ್ಣ ರೈತರು ಕೃಷಿ ಮಾಡದ ಸ್ಥಿತಿಗೆ ತಲುಪುವ ಸಾಧ್ಯತೆ ಇದೆ.



ಅಲಮಟ್ಟಿ ಆಣೆಕಟ್ಟು. ಕರ್ನಾಟಕದ ನೀರಾವರಿ ಕೇವಲ 24%- ದೇಶದಲ್ಲೇ ಅತ್ಯಂತ ಕಡಿಮೆ

ಸ್ವಾತಂತ್ರ್ಯಾ ನಂತರದ ದಶಕಗಳಲ್ಲಿ ಕರ್ನಾಟಕ ರಾಜ್ಯದಲ್ಲಿ ಕಬ್ಬು, ಹತ್ತಿ, ಅಡಿಕೆ, ತೊಗರಿ,ತೆಂಗು ಮೊದಲಾದ ವಾಣಿಜ್ಯ ಬೆಳೆಗಳು ಬೆಳೆಯುವ ವಿಸ್ತೀರ್ಣ ಅಧಿಕಗೊಂಡಿದೆ ಮಾತ್ರವಲ್ಲ ಆ ಬೆಳೆಗಳ ಇಳುವರಿ ಕೂಡಾ ವೃದ್ಧಿಯಾಗುತ್ತಾ ಹೋಗಿದೆ. ಆದರೆ ಇವುಗಳ ಹೆಚ್ಚಿನ ಲಾಭ ಶ್ರೀಮಂತ ರೈತರ ಹಾಗೂ ಭೂಮಾಲಕರ ಪಾಲಿಗೆ ಹೋಗಿವೆ.

7. ನೂತನ ಕೃಷಿ ನೀತಿಯ ಫಲವಾಗಿ ಸರಕಾರವು ಈಗ "ಫ್ಲೋರೀಕಲ್ಚರ್"(ಹೂ ಬೆಳೆಸುವುದು), ಫಿಶೀಕಲ್ಚರ್(ಹಿನ್ನೀರಿನಲ್ಲಿ ಮೀನುಸಾಕಣೆ), ಇತ್ಯಾದಿ ವಿಪರೀತ ಬಂಡವಾಳ ಹಾಕಿ ಕೃಷಿ ಮಾಡುವವರಿಗೆ ಮಾತ್ರ ಸಹಾನೂಭೂತಿವುಳ್ಳದ್ದಾಗಿದೆ. ಆದಕಾರಣ, ಇಡೀ ಸರಕಾರಿ ಯಂತ್ರ ಹಾಗೂ ಬ್ಯಾಂಕಿಂಗ್ ವ್ಯವಸ್ಥೆ ಶ್ರೀಮಂತ ರೈತರ, ಬಂಡವಾಳಶಾಹಿ ಭೂಮಾಲಕರ ಹಾಗೂ ದೇಶೀಯ ಮತ್ತು ವಿದೇಶೀಯ ದೊಡ್ಡ ಕಂಪನಿಗಳ ಹಿತರಕ್ಷಕರಾಗಿ ರೂಪಾಂತರಹೊಂದುತ್ತಿವೆ. ಅಧಿಕಾರಿಗಳು ಸಂಪೂರ್ಣವಾಗಿ ಬಹುಭಾಗದ ಸಣ್ಣ ರೈತರ ಕಡೆಗೆ ಕಣ್ಣು ಕೂಡ ತಿರುಗಿಸದ ಸ್ಥಿತಿ ಉಂಟಾಗುತ್ತಿದೆ. ಎಲ್ಲರೂ "ದೊಡ್ಡ ಹಣ"ದ ಸೇವೆ ಮೀಸಲಾಗಿರುವುದು ರೂಢಿಗೆ ಬರುತ್ತಿದೆ. ಇದರ ಪರಿಣಾಮ, ಭಾರತದ ಗ್ರಾಮಾಂತರಗಳಲ್ಲಿ ತೀವ್ರ ಆತಂಕದ ಸ್ಥಿತಿಯನ್ನುಂಟುಮಾಡಲಿದೆ.


8. ನೂತನ ಆರ್ಥಿಕ ನೀತಿಗಳ ಫಲವಾಗಿ ರಾಜ್ಯದಲ್ಲಿ ಹಾಗೂ ದೇಶದಲ್ಲಿ "ಸರಕಾರಿ ಕೃಷಿ ಯೋಗ್ಯ ಬಂಜರು ಭೂಮಿ"ಯ (ಲಕ್ಷ ಲಕ್ಷ ಎಕ್ರೆ) ಭೂಮಿಯ ಮೇಲೆ ಶ್ರೀಮಂತ ಕಂಪನಿಗಳ ಕಣ್ಣು ಬಿದ್ದಿದೆ. ಈ ಭೂಮಿ ನಿಜವಾಗಿ ಬಡ ರೈತರಿಗೆ ಹಂಚಿ ಸಿಕ್ಕಿ ಲಕ್ಷಾಂತರ ಬಡ ರೈತರ ಕುಟುಂಬಗಳು ಬಡತನದ ರೇಖೆಗಿಂತ ಮೇಲಕ್ಕೇರಲು ಸಾಧ್ಯವಾಗುವುದರ ಬದಲು, ಎಲ್ಲಾ ರೀತಿಯ ಕುತಂತ್ರ ವ್ಯವಹಾರಗಳ ಫಲವಾಗಿ ಶ್ರೀಮಂತರ ಸೊತ್ತಾಗಿ, ಅವರನ್ನು ಇನ್ನೂ ಶ್ರೀಮಂತರನ್ನಾಗಿ ಮಾಡುವ ಸಾಧನವಾಗುವುದರಲ್ಲಿ ಸಂಶಯವಿಲ್ಲ. ಶ್ರೀಮಂತರ ಮತ್ತು ಬಡವರ ನಡುವಿನ 'ರಣರಂಗ' ವಾಗಿಯೂ ಪರಿಣಮಿಸಬಹುದು. ಖಂಡಿತವಾಗಿ, ಬಹುಭಾಗದ ಬಡ ರೈತರು ಈ ಬಂಜರು ಭೂಮಿಯ ಮೇಲಿನ ತಮ್ಮ ಹಕ್ಕನ್ನು

ಪುಟ 48 ನೋಡಿ ▶

ಕರ್ನಾಟಕದಲ್ಲಿ ೫೦ ವರ್ಷದ ರಾಜಕೀಯ

ಎನ್.ಕೆ.ಉಪಾಧ್ಯಾಯ

ಪ್ರಕೃತಿಯ ದೇಣಿಗೆಯಾಗಿ ಅಪಾರ ಸಂಪತ್ತು ರಾಜ್ಯದಲ್ಲಿದ್ದರೂ ಕೂಡ ಅವುಗಳನ್ನುಪಯೋಗಿಸಿ ಜನಜೀವನವನ್ನು ಮೇಲಕ್ಕೆತ್ತುವ ಮನೋಭಾವ ಐವತ್ತು ವರ್ಷಗಳಿಂದ ಆಳುತ್ತ ಬಂದವರಲ್ಲಿ ಬೆಳೆದು ಬಂದಿಲ್ಲ. ಹಳೇ ಮೈಸೂರಿನಲ್ಲಾದ ಬೆಳವಣಿಗೆಯಿಂದಲಾದರೂ ಸ್ಫೂರ್ತಿಗೊಂಡು ಕನ್ನಡ ನಾಡನ್ನು ಶ್ರೀಮಂತಗೊಳಿಸಬಹುದಿತ್ತು. ಜಾತಿ ಉಪಜಾತಿಗಳನ್ನು ಸಂತೈಸುವುದರಲ್ಲೇ ಮಗ್ನರಾಗಿರುವ ಬಂಡವಾಳಶಾಹಿ ಪಕ್ಷಗಳಿಂದ ಅಂಥ ಪುಣ್ಯದ ಕೆಲಸ ಸಾಧ್ಯವಿಲ್ಲ.



ಸ್ವತಂತ್ರ ಭಾರತದ ಐವತ್ತು ವರ್ಷಗಳ ಉತ್ಸವವನ್ನು ಆಚರಿಸುತ್ತಿದ್ದೇವೆ. ಈ ಹೊತ್ತು ಕರ್ನಾಟಕ ರಾಜ್ಯವಾಗಿರುವ ಪ್ರದೇಶಗಳಲ್ಲಿ ಆಗಿಹೋದ ರಾಜಕೀಯ ಬೆಳವಣಿಗೆಗಳತ್ತ ಸೂಕ್ಷ್ಮ ಗಮನ ಹರಿಸುವುದು ಅಗತ್ಯ. ದೇಶ ಸ್ವತಂತ್ರವಾದಾಗ ಕನ್ನಡನಾಡು ಒಂದೇ ನೆಲೆಯಾಗಿರಲಿಲ್ಲ. ಹಲವಾರು ಪ್ರಾಂತೀಯ ಆಡಳಿತ ಮತ್ತು ಸಂಸ್ಥಾನಗಳಲ್ಲಿ ಹರಿದು ಹಂಚಿಹೋಗಿತ್ತು. ಆದಕಾರಣ ಏಕ ರೂಪದ ಚಳವಳಿ ಮೂಡಿ ಬರಲು ಸಾಧ್ಯವಾಗಲಿಲ್ಲ. ದೇಶಕ್ಕೆ ಸ್ವಾತಂತ್ರ್ಯ ಪಡೆದ ನಂತರ, ಕರ್ನಾಟಕ ರಾಜ್ಯವಾಗಿದ್ದೇವೆ. ನಾವೆಲ್ಲ ಒಂದೇ ಆಡಳಿತೆಯಡಿ ಬರುವ ಮುಂಚೆ ಸ್ವಾತಂತ್ರ್ಯಕ್ಕಾಗಿ ನಡೆದ ಚಳವಳಿ ಬೇರೆ ಬೇರೆ ವಿಭಾಗಗಳಲ್ಲಿ ಬೇರೇ ಬೇರೆ ರೀತಿಯಾಗಿತ್ತು. ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟದಲ್ಲಿ ಮುಖಂಡತ್ವದಲ್ಲಿ ವ್ಯಾಪಕ ಗುರಿ ಒಂದು ತರವಾಗಿದ್ದರೆ, ಬಹುಸಂಖ್ಯೆಯ ನಿರಪೇಕ್ಷಿತ ಜನರ ಗುರಿ ಬೇರೆಯೇ ಆಗಿತ್ತು. ಇಲ್ಲಿ ನಾವು ಗಮನಿಸಬೇಕಾದ ಮುಖ್ಯ ಅಂಶವೇನೆಂದರೆ ಬ್ರಿಟಿಷರ ಆಡಳಿತೆಯಡಿಯಲ್ಲಿದ್ದ ಕನ್ನಡ ಪ್ರದೇಶಗಳಲ್ಲಿ ನಡೆದ ಸ್ವಾತಂತ್ರ್ಯ ಚಳವಳಿ ಮತ್ತು ಅಂದಿನ ಮೈಸೂರ ಸಂಸ್ಥಾನದಲ್ಲಿ ಜವಾಬ್ದಾರಿ ಸರಕಾರಕ್ಕಾಗಿ, ಅನಂತರ ಏಕೀಕೃತ ಕರ್ನಾಟಕಕ್ಕಾಗಿ ನಡೆದ ಚಳುವಳಿಯ ವಿಶ್ಲೇಷಣೆ, ಬ್ರಿಟಿಷ್ ಆಡಳಿತೆಗೊಳಗಾದ ಮುಂಬಯಿ, ಕರ್ನಾಟಕ, ಹೈದರಾಬಾದ್ ಕರ್ನಾಟಕ ಮತ್ತು ಮದ್ರಾಸ್ ಕರ್ನಾಟಕ ಪ್ರದೇಶಗಳಲ್ಲಿ ಜಾತ್ಯಾತೀತವಾದ, ನಿರಪೇಕ್ಷಿತವಾದ ಸ್ವಾತಂತ್ರ್ಯ ಚಳವಳಿ ನಡೆಯಿತು.

ಪ್ರಾರಂಭದ ದಿನಗಳಲ್ಲಿ ಕಾಂಗ್ರೇಸ್ ಮುಖಂಡತ್ವದಲ್ಲಿ ಬ್ರಾಹ್ಮಣರೇ ಹೆಚ್ಚಾಗಿ ಕಂಡುಬಂದದ್ದರಿಂದ, ಲಿಂಗಾಯಿತ ಕೋಮಿನ ಮುಖಂಡತ್ವ ಮುಂದಾಳುತ್ವ ವಹಿಸಲು ಹಿಂದೇಟು ಹಾಕಿತ್ತು. ಆದರೆ 1930 ರಲ್ಲಿ ಬ್ರಿಟಿಶ್ ವಸ್ತುಗಳಿಗೆ, ಶೇಂದಿಗೆ ಬಹಿಷ್ಕಾರ, ಉಪ್ಪು ಸತ್ಯಾಗ್ರಹದಂಥ ಚಳುವಳಿ ತೀವ್ರಗೊಂಡಾಗ, ಜನಸಾಮಾನ್ಯರು ಉತ್ಸಾಹದಿಂದ ಅಂಥ ಚಳುವಳಿಯಲ್ಲಿ ಪಾಲ್ಗೊಂಡು ಪ್ರಭಾವ ಬೀರಿದಾಗ, ಪ್ರಾರಂಭದಲ್ಲಿ ಚಳವಳಿಯನ್ನು ವಿರೋಧಿಸುತ್ತಿದ್ದ, ತಟಸ್ಥರಾಗಿದ್ದ ಲಿಂಗಾಯಿತ ಮುಖಂಡರು ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿದರು. ಚಳುವಳಿಯ ಮುಖಂಡತ್ವ ವಹಿಸಲು ಮುಂದಾದರು.

ಭಾರತದೊಂದಿಗೆ ವಿಲೀನಕ್ಕಾಗಿ

ಪ್ರಾರಂಭದಲ್ಲಿ ಸ್ವಾತಂತ್ರ್ಯ ಚಳವಳಿಯನ್ನು ವಿರೋಧಿಸುತ್ತಾ ಬಂದು, ಚಳವಳಿ ತೀವ್ರಗೊಂಡಾಗ, ಅದರಲ್ಲಿ ಸೇರಿಕೊಂಡು ಸಕ್ರಿಯ ಭಾಗವಹಿಸುವುದರಲ್ಲಿ ಲಿಂಗಾಯಿತ ಕೋಮಿನ ಭೂಮಾಲಿಕ ಮತ್ತು ಶ್ರೀಮಂತ ವರ್ಗ, ಮುಂದೆ ಸ್ವಾತಂತ್ರ್ಯ ಸಿಕ್ಕಾಗ ಆಡಳಿತೆಯಲ್ಲಿ ಪ್ರಭಾವ ಬೀರುವ ಉದ್ದೇಶ ಹೊಂದಿರಬೇಕೆಂಬ ಪರಿಕಲ್ಪನೆಗೆ ಅವಕಾಶ ಮಾಡಿಕೊಟ್ಟಿದ್ದಾದರೆ ತಪ್ಪೇನಿಲ್ಲ. ಆದರೆ ಈಗಿನ ಕರ್ನಾಟಕದ ಅರ್ಧ ಭಾಗದಷ್ಟಿರುವ ಮೈಸೂರು ಸಂಸ್ಥಾನದಲ್ಲಿ 1930 ರಿಂದ ಬ್ರಾಹ್ಮಣೇತರ ಚಳುವಳಿ ಪ್ರಾರಂಭವಾಗಿ, ಅದು ಪ್ರಜಾ ಪಕ್ಷ, ಪ್ರಜಾ ಮಿತ್ರ ಮಂಡಳಿಯಾಗಿ ರೂಪತಾಳಿ, ಹೊರಗಿನ ರಾಜಕೀಯ ಪ್ರಭಾವದಿಂದಾಗಿ 1938 ರಲ್ಲಿ ಅವೆರಡೂ ಒಂದಾಗಿ ಮೈಸೂರು ಕಾಂಗ್ರೇಸ್ ಎಂದು ನಾಮಕರಣ ಹೊಂದಿ ಜವಾಬ್ದಾರಿ ಸರಕಾರ ರಚನೆಗಾಗಿ ಚಳವಳಿ ನಡೆಸಿದರು. ಆಗಲೂ ಕೂಡ ಮೈಸೂರು ಸಂಸ್ಥಾನದಲ್ಲಿ ಪ್ರಬಲ ಕೋಮಿನ ಒಕ್ಕಲಿಗ ಮುಖಂಡರು ಸ್ವಾತಂತ್ರ್ಯ ಚಳವಳಿಯಿಂದಾಗಿ ಸ್ವರಾಜ್ಯ ಲಭ್ಯವಾದಾಗ ಅದು ತಮ್ಮ ಹಸ್ತಗತವಾಗಬೇಕೆಂಬ ಅಭಿಲಾಷೆ ಹೊಂದಿದ್ದರೆಂಬುದರಲ್ಲಿ ಅಪಾರ್ಥವೇನಿಲ್ಲ. ಒಕ್ಕಲಿಗ ಕೋಮಿನ ಭೂಮಾಲಿಕ, ಮೇಲ್ವರ್ಗದ ಒಂದು ಗುಂಪು, ಮಹಾರಾಜರ ಕೃಪಾಕಟಾಕ್ಷದಿಂದ ದೂರವಾಗಿರಲು ನಿರಾಕರಿಸಿ, ಅವರ ಕೃಪೆಯಿಂದ ರಾಜ್ಯದ ಆಡಳಿತೆಯಲ್ಲಿ ಹಿಡಿತ ಉಳಿಸಿಕೊಳ್ಳುವ ಹೊಂಚು ಹೊಂದಿದ್ದರೆ, ಮತ್ತೊಂದು ಗುಂಪು ದೇಶದ ಸ್ವಾತಂತ್ರ್ಯ ಚಳುವಳಿಯ ಅಂಗವಾಗಿ ಮೈಸೂರು ಸಂಸ್ಥಾನದಲ್ಲಿ ಮೆರೆದು ಅನಂತರ ಸಿಗಬಹುದಾದ ಅಧಿಕಾರದಲ್ಲಿ ಪಾಲುಗಾರರಾಗುವ, ಪ್ರಭಾವಿತ ರಾಜಕಾರಣಿಗಳಾಗುವ ಕನಸು ಕಂಡವರಿದ್ದರು.

1945 ರಲ್ಲಿ ಪ್ರಜಾ ಪ್ರತಿನಿಧಿ ಸಭೆಗೆ ನಡೆದ ಚುನಾವಣೆಯಲ್ಲಿ ಕಾಂಗ್ರೇಸ್ಸಿಗೆ ಬಹುಮತ ದೊರೆಯಿತು, ಕೆಂಗಲ್ ಹನುಮಂತಯ್ಯನವರು ಮುಖ್ಯಮಂತ್ರಿಯಾಗಿ ಆಯ್ಕೆಯಾದರು. ಚುನಾವಣೆ ನಡೆಸಿದರೂ ಕೂಡ ಮಹಾರಾಜರು ಕಾಂಗ್ರೆಸ್ಸಿಗೆ ಅಧಿಕಾರ ನಡೆಸಲು ಬಿಡಲಿಲ್ಲ. ಜವಾಬ್ದಾರಿ ಸರಕಾರಕ್ಕಾಗಿ ತೀವ್ರ ಚಳುವಳಿ ನಡೆಯಿತು. ಅದರಲ್ಲಿ ಕಮ್ಯುನಿಸ್ಟ್ ಪಾರ್ಟಿ ಮತ್ತು ಅದರ ನೇತೃತ್ವದ ಕಾರ್ಮಿಕ ವರ್ಗ ಪರಿಣಾಮಕಾರಿ ಪಾತ್ರವಹಿಸಿತ್ತು. ಕೆ.ಜಿ.ಎಫ್.ಗಣಿ ಕೆಲಸಗಾರರು, ಬೆಂಗಳೂರು, ದಾವಣಗೆರೆ, ಭದ್ರಾವತಿ, ಮೈಸೂರು, ಕಾರ್ಖಾನೆಗಳ ಕೆಲಸಗಾರರೆಲ್ಲ ಜವಾಬ್ದಾರಿ ಸರಕಾರಕ್ಕಾಗಿ ನಡೆದ ಚಳುವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡರು. ಮುಷ್ಕರ ಹೂಡಿದರು. ಪ್ರತಿಬಂಧಕಾಜ್ಞೆಗಳನ್ನು ಮುರಿದರು. ಕೆಲವು ಕಮ್ಯುನಿಸ್ಟ್ ಮುಖಂಡರನ್ನು ಗಡೀಪಾರು ಮಾಡಲಾಯಿತು(ಎನ್.ಎಲ್.ಉಪಾಧ್ಯಾಯ, ಸಿ.ಬಿ.ಮೊನ್ನಯ್ಯ). ಸಂಸ್ಥಾನಗಳು ಭಾರತದಲ್ಲಿ ವಿಲೀನಗೊಳ್ಳುವ ಕಾಯ್ದೆಗೆ ಮಹಾರಾಜರು 1947 ಆಗಸ್ಟ 6 ರಂದು ಸಹಿ ಹಾಕಿದರೂ ಕೂಡ, ಒಕ್ಕೂಟದಲ್ಲಿ ಸೇರಲಿಕ್ಕೆ ನಿರಾಕರಿಸಿದರು. ಅದರ ವಿರುದ್ಧ ಪ್ರಚಂಡ ಚಳವಳಿ ನಡೆದ ಕಾರಣದಿಂದಾಗಿ 24.10.1947 ರಂದು ಕೆ.ಸಿ.ರೆಡ್ಡಿಯವರ ನಾಯಕತ್ವದಲ್ಲಿ ಜವಾಬ್ದಾರಿ ಸರಕಾರ ಸ್ಥಾಪನೆಯಾಯಿತು. ಮೈಸೂರು ಸಂಸ್ಥಾನ "ಬಿ" ವರ್ಗದ ರಾಜ್ಯವಾಗಿ ಪರಿವರ್ತನೆಗೊಂಡಿತು. 26-1-1950 ರಂದು ಮಹಾರಾಜರು ಮೈಸೂರು ಸರಕಾರದ ರಾಜ ಪ್ರಮುಖರಾಗಿ ಅಧಿಕಾರ ಸ್ವೀಕಾರ ಮಾಡಿದರು. 1956 ರಲ್ಲಿ ಏಕೀಕರಣವಾಗುವ ಮುಂಚೆಯ ಕೆಲವು ತಿಂಗಳು ಕಡಿದಾಳ್ ಮಂಜಪ್ಪನವರು ಮುಖ್ಯಮಂತ್ರಿಯಾಗಿ ಕೆ.ಹನುಮಂತಯ್ಯನವರಿಂದ ವಿಧಾನ ಸೌಧ ಕಟ್ಟಡ ರಚನೆಯಾಯಿತು. ಕರ್ನಾಟಕ ಏಕೀಕರಣವಾದಾಗ 1.11.56 ರಂದು ಮೈಸೂರು ರಾಜ್ಯವಾಗಿತ್ತು. 1973ರಲ್ಲಿ ದೇವರಾಜ್ ಅರಸ್ ಮುಖ್ಯಮಂತ್ರಿಯಾಗಿದ್ದಾಗ ಕರ್ನಾಟಕ ರಾಜ್ಯವಾಯಿತು.

ಬದಲಾವಣೆಗಳಿಲ್ಲ

ಈಗ ನಾವು ಪ್ರಚಲಿತ ರಾಜಕೀಯದಲ್ಲಿ ನೋಡುತ್ತಿರುವ ರಾಜಕೀಯ ಹಳೇ ಮೈಸೂರಲ್ಲಿ ಜವಾಬ್ದಾರಿ ಸರಕಾರಕ್ಕಾಗಿ ನಡೆದ ಹಾಗೆಯೇ ಇರುವುದನ್ನು ಕಾಣಬಹುದಾಗಿದೆ. ಹಳೇ ಮೈಸೂರಿನಲ್ಲಿ ಒಕ್ಕಲಿಗರ ನೇತೃತ್ವಕ್ಕಾಗಿ ಪೈಪೋಟಿ ನಡೆದರೆ, ಕರ್ನಾಟಕ ಏಕೀಕರಣವಾದರೆ ಲಿಂಗಾಯಿತರ ಹಿಡಿತದಲ್ಲಿರಬೇಕಾಗುತ್ತದೆಂಬ ಅಂಜಿಕೆಯಿಂದಾಗಿ ಕರ್ನಾಟಕದ ಏಕೀಕರಣಕ್ಕೆ ವಿರೋಧ, ಕೊನೆಗೆ ಜನತೆಯ ಹೋರಾಟಕ್ಕೆ ಗೆಲುವು ದೊರೆಯಿತು. ಆದರೆ ಏಕೀಕರಣದ ನಂತರ ಮೈಸೂರಿನಲ್ಲಿ ಜಾತೀವಾದದ ಪ್ರಭಾವ ಇತರ ಪ್ರದೇಶಕ್ಕೂ ಹಬ್ಬಿ ಈಗಲೂ ರಾಜ್ಯದ ರಾಜಕೀಯದಲ್ಲಿ ಜಾತಿ-ಉಪಜಾತಿ ಪ್ರಧಾನ ಪಾತ್ರ ವಹಿಸುತ್ತಿದೆ.

ವಿಧಾನ ಸೌಧ, ಎಚ್.ಎಂ.ಟಿ., ಐ.ಟಿ.ಐ, ಬಿ.ಎಚ್.ಇ.ಎಲ್ ಮುಂತಾದ ಕೆಲವು ಮಹತ್ವದ ಕಾರ್ಖಾನೆಗಳನ್ನು ಬಿಟ್ಟರೆ, ಸ್ವಾತಂತ್ರ್ಯ ದೊರೆತ ನಂತರ ಹಳೇ ಮೈಸೂರಿನಲ್ಲಿ ಹೇಳಿಕೊಳ್ಳುವಂಥ ಹೊಸ ಬೆಳವಣಿಗೆಗಳಿಲ್ಲ. ಕೆ.ಜಿ.ಎಫ್.ನ ಚಿನ್ನದ ಗಣಿ ಹಾಗೆಯೇ ಮೈಸೂರು, ಬೆಂಗಳೂರುಗಳಲ್ಲಿಯ ಮಹತ್ವದ ಕಾರ್ಖಾನೆಗಳು ಮುಚ್ಚಲ್ಪಡುತ್ತಿವೆ, ಖಾಸಗೀಕರಣಕ್ಕೊಳಗಾಗುತ್ತಿವೆ. ರಾಜ್ಯದ ಇತರೆಡೆಗಳಲ್ಲಿ ಹೇಳಿಕೊಳ್ಳು

ವಂಥ ಅಭಿವೃದ್ಧಿ ಕೆಲಸಗಳಿಲ್ಲದಾಗಿದೆ. ಇದ್ದ ಕಾರ್ಖಾನೆಗಳೂ ಮುಚ್ಚಲ್ಪಟ್ಟಿವೆ. ನೀರಾವರಿ ಯೋಜನೆಗಳು ಕಣ್ಣೀರು ಸುರಿಸುತ್ತಿವೆ. ವಿದ್ಯುತ್ ಬೆಳಕು ನೀಡದಾಗಿದೆ, ರೈತರಿಗೆ ಭೂಮಿ ಸಿಗಲಾರದಾಗಿದೆ. ರಾಜ್ಯದ ನಕಾಶೆಯಲ್ಲಿ ಹೇಳಿಕೊಳ್ಳುವಂಥ ಬದಲಾವಣೆ ಕಾಣುತ್ತಿಲ್ಲ.

ದೇಶದ ಸ್ವಾತಂತ್ರ್ಯಕ್ಕೆ ಹೋರಾಟ ನಡೆದಾಗ, ಮೈಸೂರು ಸಂಸ್ಥಾನದಲ್ಲಿ ಪ್ರಬಲವಾಗಿದ್ದ ಜಾತೀವಾದವನ್ನು 1-11-1956 ರ ನಂತರ ಏಕೀಕೃತ ಕರ್ನಾಟಕದಲ್ಲಿ ಹಿಂದೆ ಸರಿಸಲು ಸಾಧ್ಯವಾಗಿತ್ತು. ಸಾವುಕಾರ ಚೆನ್ನಯ್ಯ, ಕೆ.ಸಿ.ರೆಡ್ಡಿ ಯಂಥವರ ಪ್ರಾಬಲ್ಯ ಕುಂಠಿತಗೊಳಿಸಲು ಸಾಧ್ಯವಾಗಿತ್ತು. ಏಕೀಕರಣ ಆಗುವ ಮುಂಚೆಯಿದ್ದ ಜಾತಿ ಸೌಹಾರ್ದತೆ ಏಕೀಕರಣದ ನಂತರ ಉಳಿಯಲಿಲ್ಲ. ಪ್ರಬಲ ಜಾತಿ ಮೇಲುಗೈ ಸಾಧಿಸುವಂತಾಯಿತು.

1971-72 ರಲ್ಲಿ ಕಾಂಗ್ರೆಸ್ ಒಡೆದು ನಿಜಲಿಂಗಪ್ಪನವರು ಸಂಸ್ಥಾ ಕಾಂಗ್ರೆಸ್ಸಿನ ಅಧ್ಯಕ್ಷರಾದಾಗ, ರಾಜ್ಯದಲ್ಲಿ ಇಂದಿರಾ ಕಾಂಗ್ರೆಸ್ ಹಿಂದುಳಿದ ವರ್ಗದವರ ಪಾಲಾಯಿತು. ದೇವರಾಜ ಅರಸ್ ಅವರು ಮೇಲ್ಜಾತಿ ವರ್ಗವನ್ನು ಹಿಂದೆ ಸರಿಸಿ ಹಿಂದುಳಿದ ವರ್ಗದ ಮುಖ್ಯಮಂತ್ರಿಯಾಗಿ, ಮೈಸೂರು ಎಂಬ ಹೆಸರು ತೆಗೆದು ಹಾಕಿ ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣ ಮಾಡುವ ಧೈರ್ಯ ತೋರಿಸಿದರು. ಭೂಮಿ ಮಸೂದೆಯಲ್ಲಿ ಬದಲಾವಣೆಯನ್ನು ತಂದು ಭೂಮಿಯಲ್ಲಿ ದುಡಿಯುವ ರೈತನಿಗೆ ಭೂಮಿ ಹಕ್ಕು ಕೊಡಿಸಿದರು. ಹೆಚ್ಚುವರಿ ಭೂಮಿ ವಿತರಣೆಯಾಗದಿದ್ದರೂ ಹೆಚ್ಚಿನ ಗೇಣಿದಾರರು ಎಂಬುವವರಿಗೆ ಭೂಮಿಯ ಹಕ್ಕು ಸಿಗುವಂತಾಯಿತು. ಹೇಳಿಕೊಳ್ಳುವಂಥ ಪುರೋಗಾಮಿ ವಿಚಾರಧಾರೆ ಇಲ್ಲಿ ಕಾಣದಿದ್ದರೂ ಕರ್ನಾಟಕದ ರಾಜಕೀಯದಲ್ಲಿ ಎರಡು ಪ್ರಬಲ ಜಾತಿಗಳ ಪ್ರಭಾವವನ್ನೆದುರಿಸಿ ಅವರು ಆಡಳಿತ ನಡೆಸಿದರು. ಮತ್ತೊಂದು ಗಮನಿಸತಕ್ಕ ವಿಷಯ ಗುಂಡೂರಾಯರ ಗುಂಡಿನ ಆಡಳಿತ. ಪಿತಾಮಹರೆಂದೆನಿಸಿಕೊಳ್ಳುವ ನಿಜಲಿಂಗಪ್ಪನವರು ಇಂದಿರಾಗಾಂಧಿಯ ಸರ್ವಾಧಿಕಾರತ್ವದ ವಿರುದ್ಧ ಕಾಂಗ್ರೆಸ್ ವಿಭಾಗವಾದಾಗ ಸಂಸ್ಥಾ ಕಾಂಗ್ರೆಸಿನ ಅಧ್ಯಕ್ಷರಾಗಿರುವುದನ್ನು ಬಿಟ್ಟರೆ, ಕರ್ನಾಟಕ ಏಕೀಕರಣವಾದ ನಂತರ ಎರಡು ಸಲ ಮುಖ್ಯಮಂತ್ರಿಯಾಗಿದ್ದರೂ ಏನೂ ಆಗಲಿಲ್ಲ. ವೀರೇಂದ್ರ ಪಾಟೀಲರು ಕೂಡ ಒಳ್ಳೆ ಆಡಳಿತಗಾರರೆಂದು ಹೇಳಿಕೊಂಡರಲ್ಲದೆ ಮತ್ತೇನೂ ಮಾಡಲಿಲ್ಲ. ರಾಮಕೃಷ್ಣ ಹೆಗಡೆ, ಜೆ.ಎಚ್.ಪಟೇಲರ ಕುರಿತು ಹೇಳಲಿಕ್ಕೇನೂ ಉಳಿದಿಲ್ಲ. ಭ್ರಷ್ಟಾಚಾರ ನೆಲೆಗೊಳ್ಳಲಿಕ್ಕೆ ಪ್ರೋತ್ಸಾಹ ನೀಡುತ್ತಿದ್ದಾರೆಂದು ಹೇಳಿದರೆ ಸಾಕು.

ಮುಖ್ಯ ಮಂತ್ರಿಗಳು

1. ಕೆ.ಸಿ. ರೆಡ್ಡಿ,	24-10-1947
"	ಮೈಸೂರು ಸಂಸ್ಥಾನ
2. ಕೆ.ಹನುಮಂತಯ್ಯ.	
3. ಕಡಿದಾಳ್ ಮಂಜಪ್ಪ	17-9-1956
4. ಎಸ್. ನಿಜಲಿಂಗಪ್ಪ	1-11-1956
ಮೈಸೂರು ರಾಜ್ಯ (ಏಕೀಕೃತ ಕರ್ನಾಟಕ) 4 ಸಲ ಮುಖ್ಯಮಂತ್ರಿಗಳು.	
5. ಬಿ.ಡಿ.ಜತ್ತಿ.	1958
6. ಎಸ್.ಆರ್. ಕಂಠಿ.	1962
7. ಎಸ್. ನಿಜಲಿಂಗಪ್ಪ	1962
8. ವೀರೇಂದ್ರ ಪಾಟೀಲ್	1968
9. ದೇವರಾಜ ಅರಸ್	1972
10. ಗುಂಡೂರಾವ್	1980
11. ರಾಮಕೃಷ್ಣ ಹೆಗಡೆ	1983
12. ಎಸ್. ಆರ್. ಬೊಮ್ಮಾಯಿ	1988
13. ವೀರೇಂದ್ರ ಪಾಟೀಲ್	1989
14. ಎಸ್. ಬಂಗಾರಪ್ಪ	1990
14. ವೀರಪ್ಪ ಮೊಯಿಲಿ	1991
15. ಹೆಚ್.ಡಿ. ದೇವೇ ಗೌಡ	1993
16, ಜೆ.ಹೆಚ್. ಪಟೇಲ್	1994

ರಾಜಕೀಯ ರಂಗದಲ್ಲಿ

1947 ರಲ್ಲಿ ಭಾರತ ಸ್ವತಂತ್ರನಾದಾಗ ಕರ್ನಾಟಕದಲ್ಲಿ ಕಾಂಗ್ರೇಸ್ ಮತ್ತು ಕಮ್ಯುನಿಸ್ಟ್ ಎರಡೇ ರಾಜಕೀಯ ಪಕ್ಷಗಳಿದ್ದವು. ಮುಸ್ಲಿಂ ಲೀಗೂ ಇತ್ತು. ಫಾರ್ವರ್ಡ್‌ಬ್ಲಾಕ್ (ಪುರೋಗಾಮಿ ಪಕ್ಷ) ಪ್ರಜಾ ಸೋಷಲಿಸ್ಟ ಪಾರ್ಟಿ ಕೂಡ ಇತ್ತು. ಅನಂತರ ಸ್ವತಂತ್ರ ಪಾರ್ಟಿ, ಜನತಾ ಪಾರ್ಟಿ (ಕೆ.ಎಚ್.ಪಾಟೀಲ್) ಸಂಸ್ಥಾ ಕಾಂಗ್ರೆಸ್, ಜನ ಸಂಘ ಹಳೇ ಪಕ್ಷಗಳು, ಈಗ ಉಳಿದಿರುವುದು ಜನತಾದಳ, ಕಾಂಗ್ರೈ, ಬಿಜೆಪಿ, ಸಿಪಿಐ(ಎಂ), ಸಿಪಿಐ, ಲೋಕಶಕ್ತಿ. ಪುರೋಗಾಮಿ ಪಕ್ಷ ಇಲ್ಲದಾಗಿದೆ. ಸೋಷಲಿಶ್ವರೆನ್ನಿಸಿಕೊಳ್ಳುವವರು ಕಾಂಗ್ರೈ, ಜನತಾ ದಳದಲ್ಲಿ ಸೇರಿಕೊಂಡಿದ್ದಾರೆ.

ಕಳೆದ ಐವತ್ತು ವರ್ಷಗಳ ಬೆಳವಣಿಗೆಯಲ್ಲಿ ಎರಡು ಮುಖ್ಯ ಅಂಶಗಳನ್ನು ನಮ್ಮಲ್ಲಿ ಗಮನಿಸಬಹುದು. ಒಂದು ವಿಜ್ಞಾನದ ಬೆಳವಣಿಗೆ. ಟಾಟಾ ಇನ್‌ಸ್ಟಿಟ್ಯೂಟ್, ಇಸ್ರೋ ಹಾಗೆಯೇ ವೈಮಾನಿಕ ತಂತ್ರಜ್ಞಾನದ ಬೆಳವಣಿಗೆ, ರಕ್ಷಣಾಖಾತೆಯ ವಿಜ್ಞಾನ-ತಂತ್ರಜ್ಞಾನದ ಬೆಳವಣಿಗೆ ಶ್ಲಾಘನೀಯವಾಗಿದೆ. ಎರಡನೆಯದಾಗಿ ಸರಕಾರಿ ಕ್ಷೇತ್ರದಿಂದ ಆಗದಿದ್ದರೂ ಖಾಸಗೀ ಕ್ಷೇತ್ರದಲ್ಲಿ, ಮೆಡಿಕಲ್-ಇಂಜಿನಿಯರಿಂಗ್, ಪೊಲಿಟೆಕ್ನಿಕಲ್ ಮೊದಲಾದ ಹಲವಾರು ಕಾಲೇಜುಗಳು ರಾಜ್ಯದಲ್ಲಿ ತಲೆಎತ್ತಿ ನಿಂತಿವೆ. ದೇಶದ ನಾನಾ ಭಾಗಗಳಿಂದ ಹೆಚ್ಚಿನ ಅಭ್ಯಾಸಕ್ಕಾಗಿ ಆಮಂತ್ರಿಸುತ್ತಿವೆ. ಇವುಗಳಲ್ಲದೆ, ಪ್ರಕೃತಿಯ ದೇಣಿಗೆಯಾಗಿ ಅಪಾರ ಸಂಪತ್ತು ರಾಜ್ಯದಲ್ಲಿದ್ದರೂ ಕೂಡ ಅವುಗಳನ್ನುಪಯೋಗಿಸಿ ಜನಜೀವನವನ್ನು ಮೇಲಕ್ಕೆತ್ತುವ ಮನೋಭಾವ ಐವತ್ತು ವರ್ಷಗಳಿಂದ ಆಳುತ್ತ ಬಂದವರಲ್ಲಿ ಬೆಳೆದು ಬಂದಿಲ್ಲ. ಹಳೇ ಮೈಸೂರಿನಲ್ಲಾದ ಬೆಳವಣಿಗೆಯಿಂದಲಾದರೂ ಸ್ಫೂರ್ತಿಗೊಂಡು ಕನ್ನಡ ನಾಡನ್ನು ಶ್ರೀಮಂತಗೊಳಿಸಬಹುದಿತ್ತು. ಜಾತಿ ಉಪಜಾತಿಗಳನ್ನು ಸಂತೈಸುವುದರಲ್ಲೇ ಮಗ್ನರಾಗಿರುವ ಬಂಡವಾಳಶಾಹಿ ಪಕ್ಷಗಳಿಂದ ಅಂಥ ಪುಣ್ಯದ ಕೆಲಸ ಸಾಧ್ಯವಿಲ್ಲ.

ದೇಶದ ಸ್ವಾತಂತ್ರ್ಯದ ಸ್ವರ್ಣ ಜಯಂತಿಯನ್ನು ವರ್ಷವಿಡೀ ಆಚರಿಸುತ್ತಿರುವಾಗ ಐವತ್ತು ವರ್ಷಗಳ ರಾಜಕೀಯ ಜೀವನದ, ಆಗುಹೋಗುಗಳ, ಚಳವಳಿಗಳ ವಿಮರ್ಶೆ ನಡೆಸಿ, ಅದರ ಅನುಭವದ ಆಧಾರದಲ್ಲಿ ಕನ್ನಡನಾಡಿನ-ಕನ್ನಡ ಜನತೆಯ ಸಮಸ್ಯೆಗಳ ಪರಿಹಾರಕ್ಕೆ ಎಡ ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳ ಬಲ ಸಮೃದ್ಧಿಗಾಗಿ ದುಡಿಯೋಣ, ಶ್ರಮಿಸೋಣ, ಗುರಿಸಾಧಿಸೋಣ ಎಂಬ ನಂಬಿಕೆಯಿಂದ ಕಾರ್ಯಪ್ರವೃತ್ತರಾಗೋಣ.

○

ಕರ್ನಾಟಕದಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಕಮ್ಯುನಿಸ್ಟರ ಪಾತ್ರ

ಕಾರವಾರ, ಬಿಜಾಪುರ, ಮಂಗಳೂರು ಜಿಲ್ಲೆಗಳಲ್ಲಿ ಹಾಗೆಯೇ ಮೈಸೂರು ಸಂಸ್ಥಾನದಲ್ಲಿ ಕಮ್ಯುನಿಸ್ಟ್ ಕಾರ್ಯಕರ್ತರು ಸಕ್ರಿಯವಾಗಿ ಚಳುವಳಿಯಲ್ಲಿ ಪಾಲ್ಗೊಂಡು ಜೈಲುವಾಸ ಅನುಭವಿಸಿದ್ದರು. ಬಿಜಾಪುರದಲ್ಲಿ ಬಾಲಸಿಂಗ್ ಮಾಸ್ತರ, ಕಾರವಾರದಲ್ಲಿ ಶ್ಯಾಮರಾವ್ ಪರುಳೇಕರ, ದಿನಕರ ದೇಸಾಯಿ, ಮಾಳಸೇಕರ, ಮಂಗಳೂರಿನಲ್ಲಿ ಬಿ.ವಿ. ಕಕ್ಕಿಲಾಯ ಮೊದಲಾದವರು, ಬೆಂಗಳೂರಿನಲ್ಲಿ ಕಂಠಿ ಮೊದಲಾದವರು, ಅನಂತರ ಎಸ್.ಎಲ್. ಉಪಾಧ್ಯಾಯ, ಎಂ.ಎಸ್.ಉಗ್ರಪ್ಪ, ವಾಸನ್, ಗೋವಿಂದನ್ (ಕೆ.ಜಿ.ಎಫ್), ಸಿ.ಬಿ.ಮೊನ್ನಯ್ಯ (ಕೊಡಗು) ಚಂದು ಕಟ್ಟೆ ನಾಯರ್ (ಶಿವಮೊಗ್ಗ) ಎಸ್.ಕೆ. ಉಪಾಧ್ಯಾಯ (ಹುಬ್ಬಳ್ಳಿ), ಮಾಳ್ಸೇಕರ(ಕಾರವಾರ), ಚುಕೋಬಾ, ಗುಲ್ಬರ್ಗಾದ ಎಂ.ಎಸ್.ಧಾರೇಶ್ವರ್‌ಮೊದಲಾದವರು ಚಳುವಳಿಗೆ ಹೊಸ ರೂಪ ಕೊಟ್ಟರು. ಸ್ವಾತಂತ್ರ್ಯ ಚಳುವಳಿಯಲ್ಲಿ ಕಾರ್ಮಿಕರು, ರೈತರು, ವಿದ್ಯಾರ್ಥಿಗಳೂ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡುವ ಅವಶ್ಯಕತೆಯನ್ನು ಕಂಡ ಈ ಮುಖಂಡರೆಲ್ಲ ಕಾರ್ಮಿಕ-ರೈತ-ವಿದ್ಯಾರ್ಥಿಗಳ ಸಂಘಟನೆ ಮಾಡಿ ಹೋರಾಟ ನಡೆಸಿದರು. ಉಳುವವನೇ ಭೂಮಿಯ ಒಡೆಯ ಎಂಬ ಘೋಷಣೆಯಡಿಯಲ್ಲಿ ರೈತರನ್ನು ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ಅಣಿ ನೆರೆಸಿದಾಗ, ಅವರಲ್ಲಿ ಸ್ಫೂರ್ತಿ ತುಂಬುವ ಸಲುವಾಗಿ ಹೊಲದಲ್ಲಿ ಬೆಳೆದ ಬೆಳೆಯ ಮುಕ್ಕಾಲು ಭಾಗಕ್ಕಾಗಿ ತೀವ್ರ ಹೋರಾಟ ನಡೆದು ಸ್ವಾತಂತ್ರ್ಯ ಸಂಗ್ರಾಮಕ್ಕೆ ಹೊಸತಿರುವು ಕೊಡಲಾಯಿತು. ಉಪ್ಪು ಸತ್ಯಾಗ್ರಹದಲ್ಲಿ ಸ್ಫೂರ್ತಿಗೊಂಡಿದ್ದ ಕಾರವಾರ ಜಿಲ್ಲೆಯ ರೈತರು ಈ ಹೋರಾಟಕ್ಕೆ ಉತ್ಸಾಹದಿಂದ ಬೆಂಬಲ ನೀಡಿ ಕೆಂಬಾವುಟದ ನೇತೃತ್ವದಲ್ಲಿಯ ರೈತರ ಹೋರಾಟಕ್ಕೆ ಹೊಸ ತಿರುವು ಹಾಗೂ ಗೆಲುವು ತಂದರು. ಮಂಗಳೂರು, ಬಿಜಾಪುರಗಳಲ್ಲಿಯೂ ರೈತರ ಹೋರಾಟ ನಡೆಯಿತು. ಮಂಗಳೂರು, ಬಿಜಾಪುರ, ಬೆಳಗಾಂವ, ಧಾರವಾಡ ಮತ್ತು ಹಳೇ ಮೈಸೂರುಗಳಲ್ಲಿ ಕಾರ್ಮಿಕರನ್ನು, ವಿದ್ಯಾರ್ಥಿಗಳನ್ನು ಸಂಘಟಿಸಿ ಹೋರಾಟಕ್ಕಿಳಿಸಲಾಯಿತು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅವರೆಲ್ಲಾ ಸ್ಪಂದಿಸುವಂತೆ ಮಾಡಲು ಸಾಧ್ಯವಾಯಿತು. ೧೯೪೫-೪೭ ರ ನಂತರದಲ್ಲಿ ಎಸ್. ಸೂರ್ಯನಾರಾಯಣ ರಾವ್, ಎಂ.ಎಸ್.ಕೃಷ್ಣನ್, ಎಚ್.ಎಸ್.ರಾಮರಾವ್ ಮೊದಲಾದ ಹಲವಾರು ಮುಖಂಡರು ಕಮ್ಯುನಿಸ್ಟ್ ಪಾರ್ಟಿಯ ಮುಖಂಡರಾಗಿ ಹೋರಾಟ ಮುನ್ನಡೆಸಿದರು.

ಸಿ.ನಂಜುಂಡಪ್ಪ



ಭಾರತದ ಕಾರ್ಮಿಕ ವರ್ಗ ರಾಷ್ಟ್ರೀಯ ವಿಮೋಚನಾ ಹೋರಾಟದಲ್ಲಿ ಗಣನೀಯ ಪಾತ್ರ ವಹಿಸಿದೆ. ರಾಷ್ಟ್ರೀಯ ವಿಮೋಚನಾ ಹೋರಾಟ ಮತ್ತು ವರ್ಗ ಹೋರಾಟವನ್ನು ಬೆಸೆದು ಅದು ಸ್ವಾತಂತ್ರ್ಯ ಹೋರಾಟದ ಉದ್ದಕ್ಕೂ ನಡೆಸಿದ ಹೋರಾಟಗಳು, ಮುಷ್ಕರಗಳ ಪ್ರಭಾವದಿಂದ ಬ್ರಿಟಿಷರ ಅಧೀನವಿದ್ದ ಭಾರತೀಯ ಸೈನಿಕ ಪಡೆಗಳೂ ಬ್ರಿಟಿಷ್ ಆಳರಸರ ವಿರುದ್ಧ ತಿರುಗಿಬೀಳುವಂತಾಯಿತು. ಸ್ವಾತಂತ್ರ್ಯ ಹೋರಾಟ ಇನ್ನೂ ಮೇಲ್ಮಟ್ಟಕ್ಕೆ ಹೋಯಿತು. ಸಹಜವಾಗಿಯೇ ಸ್ವಾತಂತ್ರ್ಯ ಹೋರಾಟದ ನೇತೃತ್ವದಲ್ಲಿದ್ದ ಬಂಡವಾಳಗಾರರ ಪ್ರತಿನಿಧಿಗಳು ಇದನ್ನು ಮರೆಮಾಚಲು ಪ್ರಯತ್ನಿಸುತ್ತಾ ಬಂದಿದ್ದಾರೆ. ಆದರೆ ಸ್ವಾತಂತ್ರ್ಯವನ್ನು ಬಹುಪಾಲು ಭಾರತೀಯರಿಗೆ ಅರ್ಥಪೂರ್ಣವಾಗಿಸುವ ಹೋರಾಟದಲ್ಲಿ ತೊಡಗಿರುವವರು ಇದನ್ನು ಮರೆಯಲು ಸಾಧ್ಯವಿಲ್ಲ.

ಭಾರತವು 1997 ಆಗಸ್ಟ್ 15 ರಂದು ಮತ್ತು ಅದರ ನಂತರ ಒಂದು ವರ್ಷದ ಕಾಲ ತನ್ನ ಸ್ವಾತಂತ್ರ್ಯದ ಸುವರ್ಣೋತ್ಸವವನ್ನು ಆಚರಿಸುತ್ತಿದೆ. ಬ್ರಿಟಿಶ್ ವಸಾಹತುಶಾಹಿ ಆಡಳಿತದ ವಿರುದ್ಧವಾಗಿ ದೇಶದಲ್ಲಿ ಸುದೀರ್ಘ ಕಾಲ ನಡೆದ ಸ್ವಾತಂತ್ರ್ಯ ಚಳುವಳಿಯಲ್ಲಿ ನಮ್ಮ ಜನರು, ಕಾರ್ಮಿಕರು, ರೈತರು, ಮಧ್ಯಮ ವರ್ಗದವರು ಮಾಡಿದ ತ್ಯಾಗ ಅಪಾರವಾದುದು. ಸುವರ್ಣೋತ್ಸವವನ್ನು ಆಚರಿಸುವ ಸಂದರ್ಭದಲ್ಲಿ ಜನರ ತ್ಯಾಗವನ್ನು, ಕಾರ್ಮಿಕ ವರ್ಗದ ಪಾತ್ರವನ್ನು ಸ್ಮರಿಸುವುದು, ಇಂದಿನ ಪೀಳಿಗೆಯಲ್ಲಿ ಅದನ್ನು ಜನಪ್ರಿಯಗೊಳಿಸಿ ಅವರನ್ನು ಇರುವ ಸ್ವಾತಂತ್ರ್ಯವನ್ನು ರಕ್ಷಿಸಲು, ಹೋರಾಡಲು ಪ್ರೇರೇಪಿಸುವುದು ಅವಶ್ಯಕವಾಗಿದೆ.

ಸ್ವಾತಂತ್ರ್ಯ ಚಳುವಳಿಯ ಕುರಿತಾದ ಬಹುತೇಕ ಬರಹಗಳಲ್ಲಿ ಭಾರತದ ರಾಜಕೀಯ ಸ್ವಾತಂತ್ರ್ಯವು ಗಾಂಧೀಜಿ ಮತ್ತಿತರ ಕಾಂಗ್ರೆಸ್ ಮುಖಂಡರ ನಾಯಕತ್ವದ ಕಾಂಗ್ರೆಸ್ ಪಕ್ಷದ ಅಹಿಂಸಾಮಾರ್ಗದಿಂದಲೇ ಸಾಧ್ಯವಾಯಿತೆಂದು ತಿಳಿಸಲಾಗಿದ್ದು ಕಾರ್ಮಿಕ-ರೈತರ ಪಾತ್ರವನ್ನು ಪ್ರಸ್ತಾಪಿಸಲಾಗಿಲ್ಲ. ಒಂದುವೇಳೆ ಪ್ರಸ್ತಾಪಿಸಿದ್ದರೂ ಅದನ್ನು ನಗಣ್ಯವಾಗಿಸಿದ್ದಾರೆ. ಆದ್ದರಿಂದ ಸ್ವಾತಂತ್ರ್ಯದ ಸುವರ್ಣೋತ್ಸವದ ಸಂದರ್ಭದಲ್ಲಿ ಕಾರ್ಮಿಕ ವರ್ಗದ ಪಾತ್ರವನ್ನು ಕುರಿತಾದ ಕೆಲವು ವಿಚಾರಗಳನ್ನು ನಿವೇದಿಸುವುದೇ ಈ ಲೇಖನದ ಉದ್ದೇಶವಾಗಿದೆ.

ಬ್ರಿಟಿಶ್ ವಸಾಹತುಶಾಹಿ ಸರಕಾರವು 1908 ರ ಜೂನ್ 24 ರಂದು ರಾಜದ್ರೋಹದ ಲೇಖನವನ್ನು ಮರಾಠಿ ಪತ್ರಿಕೆಯಾದ 'ಕೇಸರಿ' ಯಲ್ಲಿ ಪ್ರಕಟಿಸಿದ ಆಪಾದನೆಯನ್ನು ಹೇರಿ ಲೋಕಮಾನ್ಯ ಬಾಲಗಂಗಾಧರ ತಿಲಕರನ್ನು ಬಂಧಿಸಿತು. ಅವರಿಗೆ ಆರು ವರ್ಷಗಳ ಗಡೀಪಾರು ಶಿಕ್ಷೆಯನ್ನು ವಿಧಿಸಿ ಅವರನ್ನು ಬರ್ಮಾದ ಮಾಂಡಲೆಯ ಜೈಲಿಗೆ ಕಳುಹಿಸಿತು. ತಿಲಕರಿಗೆ ನೀಡಿದ ಸಜೆಯನ್ನು ಪ್ರತಿಭಟಿಸಿ ಜನರು ಹಲವು ಕಡೆ ಪ್ರತಿಭಟನಾ ಹರತಾಳಗಳನ್ನು ಆಚರಿಸಿದರು. ಮುಂಬಯಿಯ ಕಾರ್ಮಿಕರು ಒಂದು ವರ್ಷಕ್ಕೆ ಒಂದು ದಿವಸದಂತೆ ಆರು ವರ್ಷಗಳ ಸಜೆಗೆ ಆರು ದಿನಗಳ ಕಾಲ ಬೃಹತ್ ಮುಷ್ಕರ ನಡೆಸಿದರು. ಭಾರತದ ಚರಿತ್ರೆಯಲ್ಲಿ ಇದು ಕಾರ್ಮಿಕರ ಪ್ರಪ್ರಥಮ ಮುಷ್ಕರವಾಗಿದೆ. ಮುಷ್ಕರದ ಸಂಬಂಧದಲ್ಲಿ ಪೋಲೀಸರ ದಾಳಿಯಲ್ಲಿ ಹದಿನೈದು ಕಾರ್ಮಿಕರು ಪ್ರಾಣಾರ್ಪಣೆ ಮಾಡಿದರು ಮತ್ತು ಮುವತ್ತೆಂಟು ಜನರು ಗಾಯಗೊಂಡರು.

ಮುಂಬಯಿಯ ಕಾರ್ಮಿಕರ ಈ ಮುಷ್ಕರವನ್ನು ಕುರಿತು ಕಾಮ್ರೇಡ್ ಲೆನಿನರು "ಭಾರತದ ಜನರು ಜಾಗ್ರತರಾಗುತ್ತಿದ್ದಾರೆ" ಎಂದರು. ಅವರು ಈ ಕ್ರಾಂತಿಕಾರಿ ಹೋರಾಟವನ್ನು ಗಮನಿಸಿ ಭಾರತದ ಜನ ಜಾಗೃತಿಯನ್ನು ಸ್ವಾಗತಿಸಿದರು. ಬ್ರಿಟಿಶ್ ವಸಾಹತುಶಾಹಿಯ ಆಳ್ವಿಕೆಯ ಅಂತ್ಯವು ಬಹು ಬೇಗನೆ ಸಮೀಪಿಸುತ್ತಿದೆ ಎಂದು ಅವರು ನಿರೀಕ್ಷಿಸಿದರು. ಅವರ ಭವಿಷ್ಯವಾಣಿಯ ನಲವತ್ತು ವರ್ಷಗಳ ಒಳಗಾಗಿ, ಸುಮಾರು ಇನ್ನೂರು ವರ್ಷಗಳಷ್ಟು ಹಳೆಯದಾದ ಬ್ರಿಟಿಶ್ ಆಳ್ವಿಕೆಯು ಭಾರತದಲ್ಲಿ ಕೊನೆಗೊಂಡಿತು.

ಹೊಸ ಆಶಾಭಾವನೆ

ತನ್ನ ಮೇಲೆ ಬಂಡವಾಳಗಾರರು ನಡೆಸುತ್ತಿರುವ ಶೋಷಣೆಯ ವಿರುದ್ಧವಾಗಿ ಕಾರ್ಮಿಕ ವರ್ಗವು ಕ್ರಿಯಾಶೀಲ ಹೋರಾಟಕ್ಕೆ ಇಳಿಯಿತು. ಕೂಲಿ ಹೆಚ್ಚಳ, ಸಮಯಕ್ಕೆ ತಕ್ಕ ಕೆಲಸ, ದಂಡನೆಗಳನ್ನು ರದ್ದು ಪಡಿಸುವುದು, ಭೋಜನಕ್ಕೆ ವಿರಾಮ ನೀಡುವುದು, ಬಿಳಿಯರ ಮತ್ತು ಕರಿಯರ ನಡುವಿನ ಭೇದವನ್ನು ತೆಗೆದುಹಾಕುವುದು, ಬಿಳಿಯ ಅಧಿಕಾರಿಗಳ ಅತಿಕ್ರಮಗಳನ್ನು ನಿಲ್ಲಿಸುವುದು ಮುಂತಾದ ವಿವಿಧ ಬೇಡಿಕೆಗಳನ್ನಿಟ್ಟು ದೇಶದ ಮೂಲೆ ಮೂಲೆಗಳಲ್ಲಿ ಕಾರ್ಮಿಕರು ಹೋರಾಟಕ್ಕಿಳಿದರು.

ಒಂದರ ನಂತರ ಒಂದರಂತೆ ಅಹಮದಾಬಾದ್, ಮದ್ರಾಸ್ ಮತ್ತು ಮುಂಬಯಿಯ ಗಿರಣಿಯ ಕಾರ್ಮಿಕರು ಹಾಗೂ ಕಲ್ಕತ್ತದ ಸೆಣಬು ಕೆಲಸಗಾರರು ಹೋರಾಟ ನಡೆಸಿದರು.

ರಶ್ಯದಲ್ಲಿ 1917 ರಲ್ಲಿ ಕಾರ್ಮಿಕ ವರ್ಗದ ನಾಯಕತ್ವದಲ್ಲಿ ನಡೆದ ಅಕ್ಟೋಬರ್ ಕ್ರಾಂತಿಯು ಪ್ರಪಂಚದ ಹಿಂದುಳಿದ ದೇಶಗಳಲ್ಲಿ ಹೊಸ ಆಶಾಭಾವನೆಯನ್ನು ಮೂಡಿಸಿತು. ಇಡೀ ಜಗತ್ತಿಗೆ ಹರಡಿದ ಅಕ್ಟೋಬರ್ ಕ್ರಾಂತಿಯ ಪ್ರಭಾವದಿಂದ ಭಾರತವು ಹೊರಗುಳಿಯುವುದು ಅಸಾಧ್ಯವಾಯಿತು.

1919 ರಲ್ಲಿ ಮೇಲೆ ಹೇಳಿದ ಹೋರಾಟಗಳು ನಿರಂತರವಾಗಿ ನಡೆದವು. 1919 ರ ಮಾರ್ಚ್-ಏಪ್ರಿಲ್‌ಗಳಲ್ಲಿ ರೌಲತ್ ಆಕ್ಟನ್ನು ಪ್ರತಿಭಟಿಸಿ ಕಾರ್ಮಿಕ ವರ್ಗವು ರಾಜಕೀಯ ಹೋರಾಟಕ್ಕೆ ಇಳಿಯಿತು.

1919 ರ ಕೊನೆಯ ಭಾಗ ಮತ್ತು 1920 ರ ಆರಂಭದ ಕಾಲದಲ್ಲಿ ಕಾರ್ಮಿಕ ವರ್ಗದ ಚಳುವಳಿ ಇನ್ನೂ ಹೆಚ್ಚಿತು. ಈ ಕಾಲಾವಧಿಯಲ್ಲಿ ಕಾನಪುರದ ಹದಿನೇಳು ಸಾವಿರ ಗಿರಣಿ ಕಾರ್ಮಿಕರು, ಜಮಾಲ್‌ಪುರದ 16 ಸಾವಿರ ರೈಲ್ವೆ ಕಾರ್ಮಿಕರು, ಕಲ್ಕತ್ತಾದ ಮುವತ್ತೈದು ಸಾವಿರ ಸೆಣಬು ಕಾರ್ಮಿಕರು, ಮುಂಬಯಿಯ ವಿವಿಧ ಕೈಗಾರಿಕೆಗಳಲ್ಲಿನ ಎರಡು ಲಕ್ಷ ಕಾರ್ಮಿಕರು, ಸೊಲ್ಲಾಪುರದ ಹದಿನಾರು ಸಾವಿರ ಗಿರಣಿ ಕಾರ್ಮಿಕರು, ಇಪ್ಪತ್ತು ಸಾವಿರ ಬಂದರು ಕಾರ್ಮಿಕರು, ಟಾಟಾ ಕಬ್ಬಿಣ ಮತ್ತು ಉಕ್ಕಿನ ಕಂಪನಿಯ ನಲವತ್ತು ಸಾವಿರ ಕಾರ್ಮಿಕರು, ಅಹಮದಾಬಾದಿನ ಇಪ್ಪತ್ತೈದು ಸಾವಿರ ಮತ್ತು ಚೆನ್ನೈನ ಹದಿನೇಳು ಸಾವಿರ ಗಿರಣಿ ಕಾರ್ಮಿಕರು ಹೋರಾಟದ ಮುಂಚೂಣಿಯಲ್ಲಿದ್ದರು.

ರೌಲತ್ ಆಕ್ಟನ್ನು ಪ್ರತಿಭಟಿಸಿದ ಅಪರಾಧಕ್ಕಾಗಿ ಜಲಿಯನ್‌ವಾಲಾ ಬಾಗ್ ಹತ್ಯಾಕಾಂಡವು ಸಂಭವಿಸಿತು. ಜಲಿಯನ್ ವಾಲಾಬಾಗ್ ಪ್ರಕರಣದಿಂದಾಗಿ ಪಂಜಾಬಿನಾದ್ಯಂತ ಪ್ರತಿಭಟನೆ ಕಾಡ್ಗಿಚ್ಚಿನಂತೆ ಹರಡಿತು. ಟೆಲಿಗ್ರಾಫ್ ತಂತಿಗಳನ್ನು ಕೀಳಲಾಯಿತು. ರೈಲ್ವೆ ಹಳಿಗಳು ಅಸ್ತವ್ಯಸ್ತಗೊಂಡವು. ರೈಲ್ವೆ ನಿಲ್ದಾಣಗಳು ಮತ್ತು ಸರಕಾರಿ ಕಟ್ಟಡಗಳು ಬೆಂಕಿಗಾಹುತಿಯಾದವು. ಸೆರೆಮನೆಯ ಬಾಗಿಲುಗಳು ಪುಡಿ ಪುಡಿಯಾದವು. ಹಲವಾರು ಕಡೆಗಳಲ್ಲಿ ಬ್ಯಾಂಕ್ ದರೋಡೆಗಳು ನಡೆದವು. ಈ ದಂಗೆಯನ್ನೆದುರಿಸಲು ಬ್ರಿಟಿಶ್ ಸರಕಾರವು ಸೈನ್ಯವನ್ನು ಉಪಯೋಗಿಸಿತು. 11 ರಿಂದ 13 ವರ್ಷದಷ್ಟು ಎಳೆಪ್ರಾಯದ ಮಕ್ಕಳನ್ನು ಸಹ ಈ ಪ್ರಕರಣದಲ್ಲಿ ಮರಣ ದಂಡನೆ ಹಾಗೂ ಜೀವಾವಧಿ ಶಿಕ್ಷೆಗಳಿಗೆ ಗುರಿಪಡಿಸಲಾಯಿತು. ಚಳುವಳಿಗಳನ್ನು ಹತ್ತಿಕ್ಕಲು ಬ್ರಿಟಿಶರು ವ್ಯಾಪಕವಾದ ಅಮಾನುಷ ಚಿತ್ರ ಹಿಂಸೆಗಳನ್ನು ನೀಡುವ ಕ್ರಮ ಕೈಗೊಂಡರು.

ಕಾರ್ಮಿಕರ ಶಕ್ತಿ ಪ್ರದರ್ಶನ

ಬ್ರಿಟಿಶ್ ಆಳರಸರ ವಿರುದ್ಧ ಅಹಮದಾಬಾದ್ ಕಾರ್ಮಿಕರು ತಮ್ಮ ಶಕ್ತಿಯನ್ನು ಪ್ರದರ್ಶಿಸಿದರು. ಏಪ್ರಿಲ್ 11 ಮತ್ತು 12 ರಂದು ನಗರವು ಸಂಪೂರ್ಣವಾಗಿ ಕಾರ್ಮಿಕರ ವಶದಲ್ಲಿತ್ತು. ಏಪ್ರಿಲ್ 12 - 13 ರ ರಾತ್ರಿ ಮಾತ್ರ ಬ್ರಿಟಿಶ್ ಸೈನ್ಯವು ನಗರವನ್ನು ಪ್ರವೇಶಿಸಲು ಸಾಧ್ಯವಾಯಿತು. ಹಂಟರ್ ಸಮಿತಿಯ ವರದಿಯ ಪ್ರಕಾರವೇ ಈ ಪ್ರಕರಣದಲ್ಲಿ 28 ಮಂದಿ ಕೊಲ್ಲಲ್ಪಟ್ಟಿದ್ದು 125 ಮಂದಿ ಮಾತ್ರ ತೀವ್ರ ಗಾಯಗೊಂಡಿದ್ದರು. ಕಾರ್ಮಿಕರ ಈ ತ್ಯಾಗ ಬಲಿದಾನಗಳನ್ನು ಎಲ್ಲರೂ ಮುಕ್ತ ಮನಸ್ಸಿನಿಂದ ಪ್ರಶಂಸಿದರೂ, ಗಾಂಧೀಜಿಯವರು ಮಾತ್ರ ಕಾರ್ಮಿಕರ ಈ ಹೋರಾಟವನ್ನು ಖಂಡಿಸಿದರು.


ಅಹಮದಾಬಾದ್ ನಗರದ ಘಟನೆಗಳು ಗುಜರಾತಿನ ಇತರ ನಗರಗಳಿಗೂ ಹರಡಿದವು. ಬಿರಾಮ್‌ಗಾಂವ್‌ನ ಚಳುವಳಿಗಾರರು ರೈಲ್ವೆ ಮತ್ತು ಪೋಲೀಸು ಕಛೇರಿಗಳಿಗೆ ಬೆಂಕಿ ಇಟ್ಟರು. ಟೆಲಿಗ್ರಾಫ್ ತಂತಿಗಳನ್ನು ಕಿತ್ತು ಹಾಕಿದರು. ಅಹಮದಾಬಾದ್‌ನತ್ತ ಚಲಿಸುತ್ತಿದ್ದ ಸೈನಿಕ ರೈಲು ನಡಿಯಾಡ್‌ನಲ್ಲಿ ಹಳಿತಪ್ಪಿ ನಿಲ್ಲಿಸಲ್ಪಟ್ಟಿತು. ಇವುಗಳನ್ನು ತಡೆಯಲು ಇಲ್ಲವೆ ನಿಲ್ಲಿಸಲು ಗಾಂಧೀಜಿಯವರು ಕೂಡಾ ಅಸಮರ್ಥರಾದರು.



ಈಗ, ರುಚಿಭರಿತವಷ್ಟೇ ಅಲ್ಲ, ಹೆಚ್ಚಿನ ರುಚಿಯಾದ ಮಿತವ್ಯಯವೂ ಕೂಡ.

ಸಫಲ್ ಫಿಲ್ಟರ್ ಮಾಡಿದ ನೆಲಗಡಲೆ ಎಣ್ಣೆ. ಪರಿಶುದ್ಧತೆಯ ಭರವಸೆಯಂತಿರುವ ಆಗ್‌ಮಾರ್ಕ್ AGMARK ಮುದ್ರೆಯೊಡನೆ. ಅತ್ಯಂತ ನ್ಯಾಯಸಮ್ಮತವಾದ ಬೆಲೆಯಲ್ಲಿ. ಸಫಲ್‌ನ ರುಚಿ ನೋಡಿರಿ. ನೆಲಗಡಲೆ ಎಣ್ಣೆಯಲ್ಲಿ ಅಡಿಗೆ ಮಾಡುವ ಆನಂದವನ್ನು ಪಡೆಯಿರಿ.

ಅಲ್ಲದೆ ಸಫಲ್
ಡಬಲ್ ರಿಫೈನ್ಡ ನೆಲಗಡಲೆ
ಎಣ್ಣೆಯು ಲಭ್ಯ



KOF ಅತ್ಯಂತ ಪರಿಶುದ್ಧವಾದ ಎಣ್ಣೆ ವೆಚ್ಚವಾಗಿಯೇ ಇರಬೇಕೆಂದೇನಿಲ್ಲ.



ಸಫಲ್

From Cherished ideals to their realisation
Kerala sets the standard

From the epoch-making Temple Entry Proclamation
State leaves behind landmarks in social emancipation.....
the revolutionary land reforms.....
and its far-reaching impact on the socio-economic fabric.....
a prioritised education policy and its fruitful gains.....
health standards at W.H.O. parametres-
-a low birth and death rate, and high life expectancy.....
welfare schemes in all walks of life.....
giant leaps in the communication front.....
attainment of total literacy.....
quality living standards.....

To the decentralisation of power
Kerala leads the Way

On the 50th year of Independence
Let us rededicate ourselves to
take Freedom to greater heights

Public Relations Department, Government of Kerala

ಪಂಜಾಬ್ ಘಟನೆಗಳ ಸುದ್ದಿ ಮುಂಬಯಿಗೆ ತಲುಪುತ್ತಲೇ ಅಲ್ಲಿಯೂ ಸಹ ಪೋಲೀಸು ಮತ್ತು ಜನರ ನಡುವೆ ಗಲಭೆಗಳು ನಡೆದವು. ಬಿಹಾರ, ಒರಿಸ್ಸಾದಂತಹ ಇತರ ಪ್ರಾಂತಗಳಲ್ಲಿ ಕೂಡ ಚಳುವಳಿ ನಡೆಯಿತು. ಬ್ರಿಟಿಶ್ ಆಳರಸರು ಏಪ್ರಿಲ್ 13 ಕ್ಕೆ ಸೈನ್ಯದ ಮುಖಾಂತರ ಸಂಪೂರ್ಣ ಹತೋಟಿಯನ್ನು ಸಾಧಿಸಿದ್ದೇವೆಂದು ಸಾರಿದರೂ, ಗಲಭೆಗಳು ಅಲ್ಲಲ್ಲಿ ಏಪ್ರಿಲ್ ಕೊನೆಯತನಕ ಮುಂದುವರೆದವು.

1921 ರ ಕೊನೆಯಲ್ಲಿ ರಾಷ್ಟ್ರೀಯ ಚಳುವಳಿಯು ಅತ್ಯುನ್ನತ ಮಟ್ಟಕ್ಕೇರಿತು. ಭಾರತದ ಜನರು ಬ್ರಿಟಿಶ್ ಸಾಮ್ರಾಜ್ಯಶಾಹಿಯ ವಿರುದ್ಧವಾಗಿ ಹಲವು ರಂಗಗಳಲ್ಲಿ ಹೋರಾಡುತ್ತಿದ್ದರು. ಕಾರ್ಮಿಕರು ದೊಡ್ಡ ಮುಷ್ಕರಗಳನ್ನು ನಡೆಸಿದರು. ಪಂಜಾಬಿನ ಅಕಾಲಿ ಚಳುವಳಿ, ಮಲಬಾರಿನ (ಜೆನ್ಮಿಗಳ ವಿರುದ್ಧ) ಮಾಪಿಳ್ಳೆಗಳ ದಂಗೆ ಮುಂತಾದ ಚಳುವಳಿಗಳ ಮೂಲಕ ದೇಶದ ರೈತಾಪಿ ಜನರು ಬ್ರಿಟಿಶ್ ಆಳರಸರ ವಿರುದ್ಧ ಹೋರಾಟ ನಡೆಸಿದ್ದರು. ವಿದ್ಯಾರ್ಥಿಗಳು ಶಾಲೆ ಕಾಲೇಜುಗಳನ್ನು ಬಹಿಷ್ಕರಿಸಿ ಚಳುವಳಿಗಳಲ್ಲಿ ಭಾಗವಹಿಸಿದರು. ದೇಶಾದ್ಯಂತ ಹರತಾಳ ಮತ್ತು ಪಿಕೆಟಿಂಗುಗಳ ಅಲೆ ಎದ್ದಿತು.

1922 ರ ಫೆಬ್ರವರಿ 4 ರಂದು ಉತ್ತರ ಪ್ರದೇಶದ ಗೋರಕ್‌ಪುರ ಜಿಲ್ಲೆಯಲ್ಲಿ "ಚೌರಿ-ಚೌರಾ" ಘಟನೆ ಸಂಭವಿಸಿತು. ತಮ್ಮ ಮೇಲೆ ನಡೆದ ಅತ್ಯಾಚಾರಗಳನ್ನು ಪ್ರತಿಭಟಿಸಿ ರೈತರು ಪೋಲೀಸ್ ಠಾಣೆಯನ್ನು ಸುತ್ತುವರಿದು ನಿಂತು ಸುಟ್ಟು ಹಾಕಿದರು. ಪೋಲೀಸು ಅಧಿಕಾರಿ ಮತ್ತು ಹಲವಾರು ಪೋಲೀಸರು ಬೆಂಕಿಯಲ್ಲಿ ಸುಟ್ಟುಹೋದರು. ಅನಂತರ ಬ್ರಿಟಿಶ್ ಸರಕಾರವು ಎಣಿಸಲಾರದಷ್ಟು ದಬ್ಬಾಳಿಕೆಯನ್ನು ನಡೆಸಿತು. ಈ ವಿಚಾರ ತಿಳಿದೊಡನೆಯೇ ಗಾಂಧೀಜಿಯವರು ತಮ್ಮ ಎಲ್ಲಾ ಕಾರ್ಯಕ್ರಮಗಳನ್ನು ರದ್ದು ಮಾಡಿ ರೈತರನ್ನೇ ಖಂಡಿಸಿದರು.

ರಾಷ್ಟ್ರೀಯ ಹೋರಾಟ ಮತ್ತು ವರ್ಗ ಹೋರಾಟ

ದೇಶಾದ್ಯಂತ ವರ್ಗ ಹೋರಾಟವು ತೀವ್ರಗೊಳ್ಳುತ್ತಿತ್ತು. ರೈತರು, ಕಾರ್ಮಿಕರು ಮತ್ತಿತರ ಶೋಷಣೆಗೊಳಗಾದ ಜನರು ತಮ್ಮ ಶೋಷಕರನ್ನು ಕಂಡು ಕೊಳ್ಳುವಂತಾಗಿತ್ತು. ಶೋಷಿತ ವರ್ಗದ ರಾಜಕೀಯ ಜಾಗೃತಿಯ ಬೆಳವಣಿಗೆಯ ಭೀತಿಯು ಸಾಮ್ರಾಜ್ಯಶಾಹಿ ಶೋಷಕರಿಗೆ ಮಾತ್ರವಲ್ಲ ದೇಶಿಯ ಶೋಷಕರಿಗೂ ಮನವರಿಕೆಯಾಗಿದ್ದಿತು. ಕಾಂಗ್ರೆಸ್‌ನ ಬಂಡವಾಳಶಾಹಿ ಮುಂದಾಳುಗಳು ಶೋಷಿತ ವರ್ಗದ ಜಾಗೃತಿಯನ್ನು ಸಹಿಸದಾದರು. ಶೋಷಣೆಯ ವಿರುದ್ಧ ರೈತರ ಮತ್ತು ಕಾರ್ಮಿಕರ ಹೋರಾಟವನ್ನು ಅವರು ಖಂಡಿಸಿದರು. ರೈತರು ತೆರಿಗೆ ಪಾವತಿ ಮಾಡದೆ ಚಳುವಳಿಗಿಳಿದಾಗ ಅದು ಸ್ಪಷ್ಟವಾಗಿ ಜಮೀನುದಾರರ ಹಿತವನ್ನು ಕೆಣಕಿತು. ಆದುದರಿಂದಲೇ ಗಾಂಧೀಜಿ ಮತ್ತವರ ಸಹೋದ್ಯೋಗಿಗಳು ತೆರಿಗೆ ವಿರೋಧಿ ಚಳುವಳಿಯನ್ನು ಖಂಡಿಸಿದರು.

1922 ರಲ್ಲಿ ಗಾಂಧೀಜಿ ಜನತಾ ಚಳುವಳಿಯನ್ನು ಹಿಂತೆಗೆದುಕೊಂಡುದುದರಿಂದ ಜನರಿಗೆ ಉಂಟಾದ ಆಶಾಭಂಗವು ಕಾರ್ಮಿಕ ವರ್ಗದಿಂದ ಭೇದಿಸಲ್ಪಟ್ಟಿತು. ಜನರು ದೃಢ ನಿಶ್ಚಯದಿಂದ ಹೋರಾಟಕ್ಕೆ ಮುಂದಾದರು. ಜನರ ಹೋರಾಟಗಳು ಹೆಚ್ಚೆಚ್ಚು ಸಂಘಟಿತವಾಗಿದ್ದವು. ಇದರ ಪರಿಣಾಮವಾಗಿ ಮುಷ್ಕರಗಳ ಸಂಖ್ಯೆ ಹಿಂದಿಗಿಂತ ಕಡಿಮೆಯಾದರೂ ನಷ್ಟವಾದ ಕೆಲಸದ ದಿನಗಳ ಸಂಖ್ಯೆಯು ಹೆಚ್ಚಾಯಿತು. 1921 ರಲ್ಲಿ 396 ಮುಷ್ಕರಗಳಲ್ಲಿ 6,00,351 ಕಾರ್ಮಿಕರು ಭಾಗವಹಿಸಿದ್ದು 69,48,426 ಕೆಲಸದ ದಿನಗಳು ನಷ್ಟಗೊಂಡಿದ್ದರೆ, 1925 ರಲ್ಲಿ 138 ಮುಷ್ಕರಗಳಲ್ಲಿ 2,70,423 ಕಾರ್ಮಿಕರು ಭಾಗವಹಿಸಿದ್ದು 1,25,78,129 ಕೆಲಸದ ದಿನಗಳ ನಷ್ಟವಾಗಿತ್ತು. 1928-29 ರ ವೇಳೆಗೆ ಕಾರ್ಮಿಕರ ಚಳುವಳಿಯು ಬಹಳ ಮುಂದುವರೆದಿದ್ದಿತು. 1928 ರಲ್ಲಿ 203 ಮುಷ್ಕರಗಳಲ್ಲಿ 5,06,851 ಮಂದಿ ಭಾಗವಹಿಸಿದ್ದು 3,16,47,404 ಕೆಲಸದ ದಿನಗಳು ನಷ್ಟವಾಗಿದ್ದುವು.

1937 ರಲ್ಲಿ ಕೆಲವು ಪ್ರಾಂತ್ಯಗಳಲ್ಲಿ ಚುನಾವಣೆಗಳು ನಡೆದು ಕಾಂಗ್ರೆಸ್ ಸರಕಾರಗಳು ಅಧಿಕಾರಕ್ಕೆ ಬಂದವು. ಕಾಂಗ್ರೆಸ್ ಮಂತ್ರಿಮಂಡಳಿಗಳ ಜನವಿರೋಧಿ ಧೋರಣೆಗಳನ್ನು ವಿರೋಧಿಸಲು 1937 ಮತ್ತು 38 ರಲ್ಲಿ 6,48,000 ಕಾರ್ಮಿಕರು ಮುಷ್ಕರ ನಡೆಸಿದರು. ಕಾಂಗ್ರೆಸ್ ಮುಂದಾಳುಗಳು ಕಾರ್ಮಿಕ ಚಳುವಳಿಯನ್ನು ಛಿದ್ರಗೊಳಿಸಿ, ಕಾರ್ಮಿಕ ಸಂಘಟನೆಗಳನ್ನು ಸುಧಾರಣಾವಾದಿ ದಾರಿಯಲ್ಲಿ ಕೊಂಡೊಯ್ಯಲು ಸರಕಾರಿ ಯಂತ್ರಗಳನ್ನು ಉಪಯೋಗಿಸಿ ತಮ್ಮದೇ ಪ್ರತಿನಿಧಿಗಳುಳ್ಳ ಬದಲೀ ಕಾರ್ಮಿಕ ಸಂಘಟನೆಗಳನ್ನು ರಚಿಸಿದರು. ಕಾರ್ಮಿಕರನ್ನು ಅವರ ಹೋರಾಟದಿಂದ ವಂಚಿಸಲು 1938 ರಲ್ಲಿ ಮುಂಬಯಿಯ ಸರಕಾರದ ಕಾಂಗ್ರೆಸ್ ಮಂತ್ರಿ ಮಂಡಳವು ಕಾರ್ಮಿಕ ವಿವಾದ ಕಾಯಿದೆಯನ್ನು ರಚಿಸಿತು. ಇದರಿಂದ ಸಂತಸಗೊಂಡ ದೇಶದ ಹಿರಿಯ ಬಂಡವಾಳಗಾರರು ಕೇಂದ್ರ ಸರಕಾರವೂ ಕೂಡಾ ಇದನ್ನು ಅಂಗೀಕರಿಸಬೇಕೆಂದೂ ಇದರಿಂದ ಇಡೀ ದೇಶಕ್ಕೆ ಪ್ರಯೋಜನವುಂಟೆಂದೂ ಆಗ್ರಹಪಡಿಸಿದರು.

ಮುಂಬಯಿಯ ಕಾರ್ಮಿಕರು ಈ ಕಾಯಿದೆಯನ್ನು ಸಂಪೂರ್ಣವಾಗಿ ವಿರೋಧಿಸಲು, 1938 ರ ನವೆಂಬರ್ 7 ರಂದು ಇಡೀ ಮುಂಬಯಿಯ ಪ್ರಾಂತ್ಯದಾದ್ಯಂತ ಒಂದು ದಿನದ ಸಾಂಕೇತಿಕ ಮುಷ್ಕರ ನಡೆಸಿದರು. ಕಾಂಗ್ರೆಸ್ ಮಂತ್ರಿ ಮಂಡಳದ ಆಜ್ಞೆಯ ಪ್ರಕಾರ ಪೋಲೀಸರು ಕಾರ್ಮಿಕರ ಮೇಲೆ ಎರಡು ಸುತ್ತು ಗುಂಡು ಹಾರಿಸಿದರು. ಬಂಡವಾಳಶಾಹಿ ಕಾಂಗ್ರೆಸ್ ಮುಂದಾಳುಗಳ ಕಾರ್ಮಿಕ-ವಿರೋಧಿ ಮುಖವಾಡವು ಬಯಲಾಯಿತು.

ದೇಶಾದ್ಯಂತ ವರ್ಗ ಹೋರಾಟವು ತೀವ್ರಗೊಳ್ಳುತ್ತಿತ್ತು. ರೈತರು, ಕಾರ್ಮಿಕರು ಮತ್ತಿತರ ಶೋಷಣೆಗೊಳಗಾದ ಜನರು ತಮ್ಮ ಶೋಷಕರನ್ನು ಕಂಡು ಕೊಳ್ಳುವಂತಾಗಿತ್ತು. ಶೋಷಿತ ವರ್ಗದ ರಾಜಕೀಯ ಜಾಗೃತಿಯ ಬೆಳವಣಿಗೆಯ ಭೀತಿಯು ಸಾಮ್ರಾಜ್ಯಶಾಹಿ ಶೋಷಕರಿಗೆ ಮಾತ್ರವಲ್ಲ ದೇಶಿಯ ಶೋಷಕರನ್ನು ಆವರಿಸಿತು.

1939 ರ ಅಕ್ಟೋಬರ್ 2 ರಂದು ಮುಂಬಯಿಯ 90 ಸಾವಿರ ಕಾರ್ಮಿಕರು ಯುದ್ಧ ವಿರೋಧಿ ಮುಷ್ಕರ ನಡೆಸಿದರು. ಬೆಲೆ ಏರಿಕೆಯ ವಿರುದ್ಧ ಕಾರ್ಮಿಕರು ಹೋರಾಟಕ್ಕೆ ಇಳಿದರು. 1939 ರ ಕೊನೆಯ ಮೂರು ತಿಂಗಳುಗಳಲ್ಲಿ 1,70,00 ಕಾರ್ಮಿಕರು ಭಾಗವಹಿಸಿದ 110 ಮುಷ್ಕರಗಳು ನಡೆದವು. 1940 ರಲ್ಲಿ ಹಲವು ದೊಡ್ಡ ದೊಡ್ಡ ಕಾರ್ಮಿಕರ ಹೋರಾಟಗಳು ನಡೆದವು. ಅವುಗಳ ಪೈಕಿ ಮುಂಬಯಿಯ 1,75,000 ಬಟ್ಟೆ ಗಿರಣಿ ಕಾರ್ಮಿಕರ ಮುಷ್ಕರವು ಅತ್ಯಂತ ದೊಡ್ಡದಾಗಿದ್ದಿತು. 40 ದಿನಗಳ ನಂತರ ಕೊನೆಗೊಂಡ ಈ ಮುಷ್ಕರದ ಪರಿಣಾಮವಾಗಿ 1940 ಏಪ್ರಿಲ್ 13 ಕ್ಕೆ ಕಾರ್ಮಿಕರ ವೇತನವು ಶೇ 10 ರಷ್ಟು ಹೆಚ್ಚಿತು. ಮುಂಬಯಿಯ ಈ ಮುಷ್ಕರದ ನಂತರ ದೇಶಾದ್ಯಂತ ಅಸಂಖ್ಯಾತ ಮುಷ್ಕರಗಳು ನಡೆದವು.

ಮಹಾಯುದ್ಧದ ನಂತರ

ಎರಡನೆಯ ಮಹಾಯುದ್ಧವು ಕೊನೆಗೊಂಡ ನಂತರ 1945 ರ ದ್ವಿತೀಯಾರ್ಧದಲ್ಲಿ ಬಹುತೇಕವಾಗಿ ಎಲ್ಲಾ ಕೈಗಾರಿಕೆಗಳಲ್ಲಿಯೂ ನಿರಂತರವಾಗಿ ಮುಷ್ಕರಗಳು ನಡೆದವು. ಸರಕಾರದ ಅಂಕಿ-ಅಂಶಗಳ ಪ್ರಕಾರವೇ 885 ಮುಷ್ಕರಗಳು ನಡೆದು 7,47,000 ಕಾರ್ಮಿಕರು ಭಾಗವಹಿಸಿದ್ದರು. ಈ ಮುಷ್ಕರಗಳು ಕೆಲವು ಕಡೆಗಳಲ್ಲಿ ದೊಡ್ಡ ಪ್ರಮಾಣದ ಘರ್ಷಣೆಗಳಾಗಿ ಮಾರ್ಪಟ್ಟವು. 1945 ರ ಆಗಸ್ಟ್‌ನಲ್ಲಿ ವಾರಾಣಾಸಿಯಲ್ಲಿ ನಡೆದ ಗಲಭೆಯಲ್ಲಿ 17 ಮಂದಿ ಮೃತ ಪಟ್ಟರು. 2,000 ಮಂದಿ ಬಂಧಿತರಾದರು. ಇಂತಹ ಘಟನೆಗಳು ದೇಶದ ಇತರ ಕಡೆಗಳಲ್ಲೂ ಸಂಭವಿಸಿದವು.

1946 ರಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಮಿಕರು ಹೋರಾಟಕ್ಕಿಳಿದರು. ಸರಕಾರದ ಅಂಕಿಸಂಖ್ಯೆಗಳ ಪ್ರಕಾರವೇ 19,51,000 ಕಾರ್ಮಿಕರು ಮುಷ್ಕರಗಳಲ್ಲಿ ಭಾಗವಹಿಸಿದ್ದರು. ಗ್ವಾಲಿಯರ್‌ನಲ್ಲಿ ಪೋಲೀಸ್ ಗೋಳಿಬಾರಿನಲ್ಲಿ 17 ಮಂದಿ ಕಾರ್ಮಿಕರು ಅಸುನೀಗಿದರು. ಜನಸಾಮಾನ್ಯರ ಮತ್ತು ಕಾರ್ಮಿಕರ ಈ ಹೋರಾಟ ಪ್ರವೃತ್ತಿಯನ್ನು ಕಂಡು ಬ್ರಿಟಿಶರು ಮಾತ್ರವಲ್ಲ, ಕಾಂಗ್ರೆಸ್ ಹಾಗೂ ಮುಸ್ಲಿಂ ಲೀಗ್ ಮುಂದಾಳುಗಳೂ ಗಾಬರಿಗೊಂಡರು.



1945 ರಲ್ಲಿ ಇಂದೂರಿನಲ್ಲಿ ಜವಳಿ ಗಿರಣಿ ಗೇಟಿನೆದುರು ಮುಷ್ಕರದ ವೇಳೆಗೆ ಮಹಿಳಾ ಸ್ವಯಂ ಸೇವಕರು.

ಪೋಲೀಸ್ ಹಾಗೂ ಸೈನಿಕ ಪಡೆಗಳಲ್ಲಿ ಅತೃಪ್ತಿಯು ಸಿಡಿದಿದ್ದು 1946 ರ ಪ್ರಮುಖ ಘಟನೆಯಾಗಿತ್ತು. ರಾಯಲ್ ಏರ್‌ಪೋರ್ಸಿನ ಭಾರತೀಯ ಸಿಬ್ಬಂದಿಗಳು ತಮಗೆ ಬ್ರಿಟಿಶ್ ಸಿಬ್ಬಂದಿಯು ಸರಿಸಮಾನವಾದ ಸ್ಥಾನಮಾನಗಳನ್ನು ನೀಡಬೇಕೆಂದು ಮುಂಬಯಿಯಲ್ಲಿ ಮುಷ್ಕರ ಹೂಡಿದರು. ಈ ಮುಷ್ಕರದಲ್ಲಿ 1,500 ಕ್ಕೂ ಹೆಚ್ಚು ವಾಯುದಳದ ಸೈನಿಕರು ಭಾಗವಹಿಸಿದ್ದರು.

ರಾಯಲ್ ಇಂಡಿಯನ್ ನೇವಿಯಲ್ಲಿ 1946 ರ ಫೆಬ್ರವರಿಯಲ್ಲಿ ಸಂಭವಿಸಿದ ದಂಗೆಯು ಎರಡನೆಯ ಜಾಗತಿಕ ಯುದ್ಧದ ನಂತರ ರಾಷ್ಟ್ರೀಯ ಚಳುವಳಿಯ ಚರಿತ್ರೆಯಲ್ಲಿ ಅತ್ಯಂತ ಮಹತ್ವದ ಘಟನೆಯಾಗಿದೆ. ನಾವಿಕರ ಬೇಡಿಕೆಗಳು ಕೇವಲ ಭಾರತೀಯ ಹಾಗೂ ಬ್ರಿಟಿಶ್ ಅಧಿಕಾರಿಗಳ ನಡುವಿನ ಭೇದವನ್ನು ತೊಡೆದು ಹಾಕುವುದು ಮಾತ್ರವಲ್ಲದೆ ರಾಜಕೀಯ ಬೇಡಿಕೆಗಳನ್ನೂ ಒಳಗೊಂಡಿದ್ದವು. ಬ್ರಿಟಿಶ್ ಅಧಿಕಾರಿಗಳು ಇವರ ಆರ್ಥಿಕ ಬೇಡಿಕೆಗಳನ್ನು ಕಡೆಗಣಿಸಿದರು. ಮುಂಬಯಿಯ ನಾವಿಕ ರಾಣಿಗೆಗಳಲ್ಲಿ "ಭಾರತವನ್ನು ಬಿಟ್ಟು ತೊಲಗಿ", "ಭಾರತ ಚಿರಾಯುವಾಗಲಿ" ಎಂಬಂತಹ ಘೋಷಣೆಗಳು ಕಾಣಿಸಿದವು. ಈ ಘೋಷಣೆಗಳನ್ನು ಬರೆದ ಅಪಾದನೆಯ ಮೇಲೆ ರೇಡಿಯೋ ಅಪರೇಟರ್ ಆಗಿದ್ದ ದತ್ತಾ ಎಂಬುವವರನ್ನು ಬಂಧಿಸಲಾಯಿತು. ಇದನ್ನು ಪ್ರತಿಭಟಿಸಿ ಫೆಬ್ರವರಿ 18 ರಂದು ಎಲ್ಲಾ ನಾವಿಕ ವಿಭಾಗಗಳಲ್ಲೂ ಮುಷ್ಕರ ಆರಂಭವಾಯಿತು. ಮಧ್ಯಾಹ್ನದ ವೇಳೆಗೆ ಐ.ಎನ್.ಎಸ್. ತಲವಾರದ ಎಲ್ಲಾ ಸಿಬ್ಬಂದಿಗಳೂ ಮುಷ್ಕರಕ್ಕೆ ಸೇರಿದರು. 19 ರ ವೇಳೆಗೆ ಮುಂಬಯಿಯ ನೌಕಾಖಾತೆಯ ಎಲ್ಲಾ ಕಛೇರಿಗಳಿಗೂ ಬಂದರಿನಲ್ಲಿ ಲಂಗರು ಹಾಕಿದ್ದ 20 ಯುದ್ಧನೌಕೆಗಳಿಗೂ ಮುಷ್ಕರ ಹರಡಿತು. 20,000 ನಾವಿಕ ಸೇನಾ ಸಿಬ್ಬಂದಿಗಳು ಮುಷ್ಕರದಲ್ಲಿ ಪಾಲ್ಗೊಂಡರು. ಬ್ರಿಟಿಶ್ ರಾಷ್ಟ್ರೀಯ ಧ್ವಜಗಳನ್ನು ಯುದ್ಧನೌಕೆಗಳಿಂದ ತೆಗೆದು ಬಿಸಾಕಿ ಅವುಗಳ ಸ್ಥಾನದಲ್ಲಿ ಕಾಂಗ್ರೆಸ್ ಮುಸ್ಲಿಂ ಲೀಗಿನ ಬಾವುಟಗಳು ಮತ್ತು ಕೆಂಬಾವುಟ ಒಟ್ಟಾಗಿ ಏರಿಸಲ್ಪಟ್ಟವು. ಮುಂಬಯಿಯಲ್ಲಿ ನೌಕಾ ಸಿಬ್ಬಂದಿ ಸಮವಸ್ತ್ರದಲ್ಲಿ ಕಾಂಗ್ರೆಸ್, ಮುಸ್ಲೀಂ ಲೀಗ್ ಮತ್ತು ಕಮ್ಯುನಿಸ್ಟ್ ಬಾವುಟಗಳನ್ನು ಹಿಡಿದುಕೊಂಡು ಬೀದಿಗಳಲ್ಲಿ ಮತಪ್ರದರ್ಶನ ಮಾಡಿದರು. 'ಜೈ ಹಿಂದ್', 'ಇನ್‌ಕ್ವಿಲಾಬ್ ಜಿಂದಾಬಾದ್', 'ಹಿಂದೂ ಮುಸ್ಲಿಮರು ಒಂದಾಗಿರಿ', 'ಬ್ರಿಟಿಶ್ ಸಾಮ್ರಾಜ್ಯಶಾಹಿ ಕೊನೆಗೊಳ್ಳಲಿ', 'ಐಎನ್‌ಎ ಮತ್ತು ರಾಜಕೀಯ ಬಂಧಿಗಳನ್ನು ಬಿಡುಗಡೆ ಮಾಡಿರಿ', 'ಇಂಡೋನೇಶ್ಯಾದಿಂದ ಭಾರತದ ಸೇನೆಯನ್ನು ಹಿಂತೆಗೆದುಕೊಳ್ಳಿರಿ' ಎಂಬಿತ್ಯಾದಿ ಘೋಷಣೆಗಳನ್ನು ಮೊಳಗಿಸಿದರು.

ಈ ಮುಷ್ಕರವು ಕರಾಚಿಯಲ್ಲಿ ತಂಗಿದ್ದ ಯುದ್ಧನೌಕೆಗಳಿಗೂ ಹರಡಿತು. ಫೆಬ್ರವರಿ 21 ರ ವೇಳೆಗೆ ಸಮಸ್ತ ನೌಕಾ ಸಿಬ್ಬಂದಿ ಮುಷ್ಕರ ಮಾಡಿದ್ದರು. ಹಾಗೆಯೇ ನೌಕಾ ಕಾರ್ಯಾಗಾರದವರೂ, ಬಂದರು ಕೆಲಸಗಾರರೂ ಮುಷ್ಕರದಲ್ಲಿ ಭಾಗವಹಿಸಿದ್ದರು. ನೌಕಾ ಜನರ ಹೋರಾಟವನ್ನು ನಡೆಸಲು ಐದು ಮಂದಿ ಸದಸ್ಯರುಳ್ಳ ಒಂದು ಮುಷ್ಕರ ಸಮಿತಿಯೂ ಆಯ್ಕೆಗೊಂಡಿತು.

ನೌಕಾ ವಿಭಾಗದವರ ಬೇಡಿಕೆಗಳನ್ನು ಈಡೇರಿಸುವ ಬದಲು ಬ್ರಿಟಿಶ್ ಆಳರಸರು ಅವರನ್ನು ಕ್ರೂರವಾಗಿ ಎದುರಿಸಿದರು. ಫೆಬ್ರವರಿ 21 ರಂದು ಬ್ರಿಟಿಶ್ ಪಡೆಗಳು ಅವರ ಮೇಲೆ ಧಾಳಿ ಮಾಡಿದವು. ಮುಂಬಯಿಯ ನೌಕಾ ಸೇನಾಗಾರದ ಹೊರಗೆ ಯುದ್ಧವಿರಾಮವಾಗುವ ತನಕ 7 ಗಂಟೆಗಳ ಭೀಕರ ಹೋರಾಟ ನಡೆಯಿತು. ಅದೇ ದಿನ ಮೂರು ಗಂಟೆಗೆ ಬ್ರಿಟಿಶ್ ಸೇನಾಧಿಕಾರಿ ಅಡ್ಮಿರಲ್ ಗಾಢ್‌ಫ್ರೆ 'ಕೂಡಲೇ ಶರಣಾಗಿರಿ ಇಲ್ಲವಾದರೆ ಇಡೀ ನೌಕಾ ನೆಲೆಯೇ ಧ್ವಂಸವಾದರೂ ಸರಿ ನಮ್ಮೆಲ್ಲಾ ಶಕ್ತಿಯನ್ನು ಪ್ರಯೋಗಿಸಿ ನಿಮ್ಮನ್ನು ಸದೆಬಡಿಯುವೆವು" ಎಂದು ಅಂತಿಮವಾಗಿ ಎಚ್ಚರಿಕೆಯನ್ನು ಕೊಟ್ಟನು. ಈ ಬೆದರಿಕೆಗೆ ಬೆಂಗಾವಲಾಗಿ ಬ್ರಿಟಿಶ್ ಯುದ್ಧ ನೌಕಾ ಪಡೆಯೊಂದನ್ನು ಬರಮಾಡಿಕೊಳ್ಳಲಾಯಿತು.

ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ನಾವಿಕ ಸೇನೆಯು ದೇಶದ ಜನತೆಯ ಮತ್ತು ಪ್ರಮುಖ ಮೂರು ರಾಜಕೀಯ ಪಕ್ಷಗಳಾದ ಕಾಂಗ್ರೆಸ್, ಮುಸ್ಲೀಂ ಲೀಗ್ ಮತ್ತು ಕಮ್ಯುನಿಸ್ಟ್ ಪಕ್ಷಗಳ ಸಹಾಯವನ್ನು ಯಾಚಿಸಿತು. ಕಾಂಗ್ರೆಸ್ಸಿನ ಮತ್ತು ಮುಸ್ಲೀಂ ಲೀಗ್‌ನ ಬಂಡವಾಳಶಾಹಿ ಮತ್ತು ಪಾಳೆಯಗಾರಿ ಮುಂದಾಳುಗಳು ನೌಕಾದಳದವರ ಹೋರಾಟಕ್ಕೆ ಬೆಂಬಲ ನೀಡುವ ಬದಲು ಅವರ ಹೋರಾಟವನ್ನು ಖಂಡಿಸಿದ್ದಲ್ಲದೆ ಕೂಡಲೇ

ಭಾರತದ ಕಾರ್ಮಿಕ ವರ್ಗವು ಸ್ವಾತಂತ್ರ್ಯ ಚಳುವಳಿಯ ಉದ್ದಕ್ಕೂ ನಡೆಸಿದ ಮುಷ್ಕರಗಳು, ಹೋರಾಟಗಳ ಪ್ರಭಾವವು ಸೈನಿಕ ಪಡೆಗಳ ಮೇಲೂ ಬಿದ್ದು ಸೈನಿಕ ಪಡೆಗಳೂ ಬ್ರಿಟಿಶ್ ಆಡಳಿತದ ವಿರುದ್ಧವಾಗಿ ಹೋರಾಡುವಂತಾಯಿತು.

ಶರಣಾಗುವಂತೆ ಕರೆ ನೀಡಿ ಬ್ರಿಟಿಶ್ ಆಳರಸರ ಏಜೆಂಟರಂತೆ ವರ್ತಿಸಿದರು. ಆದರೆ ಕಾರ್ಮಿಕ ವರ್ಗ ಮತ್ತು ಕಮ್ಯುನಿಸ್ಟ್ ಪಕ್ಷ ಈ ಹೋರಾಟಕ್ಕೆ ಸಂಪೂರ್ಣ ಬೆಂಬಲವನ್ನು ನೀಡಿದವು.

ಫೆಬ್ರವರಿ 22 ರಂದು ನೌಕಾದಳದ ಕೇಂದ್ರೀಯ ಮುಷ್ಕರ ಸಮಿತಿಯ ಕರೆಯಂತೆ ನೌಕಾಸೇನೆಯು ಈ ಹೋರಾಟಕ್ಕೆ ಬೆಂಬಲವಾಗಿ ಮುಂಬಯಿಯಲ್ಲಿ ಒಂದು ದಿನ ಸಂಪೂರ್ಣವಾದ ಮುಷ್ಕರವು ನಡೆಯಿತು. ಹಿಂದಿನ ದಿನ ಕಾಂಗ್ರೆಸ್ ನಾಯಕರು ಈ ಮುಷ್ಕರದ ವಿರುದ್ಧ ಪ್ರಚಾರವನ್ನು ನಡೆಸಿದ್ದರೂ, ಮುಷ್ಕರವು ಅಭೂತಪೂರ್ವವಾಗಿ ಯಶಸ್ವಿಯಾಯಿತು. ಪೋಲೀಸ್ ಮತ್ತು ಸೈನಿಕ ಶಕ್ತಿಗಳಿಂದ ಈ ಮುಷ್ಕರವನ್ನು ರಕ್ತದ ಮಡುವಿನಲ್ಲಿ ಮುಳುಗಿಸಲು ಬ್ರಿಟಿಶ್ ಆಳರಸರು ಬಯಸಿದ್ದರು. ಸರಕಾರದ ಅಂಕಿಸಂಖ್ಯೆಗಳ ಪ್ರಕಾರವೇ ಮೂರುದಿನಗಳ(21-23) ಈ ಹೋರಾಟದಲ್ಲಿ ಬ್ರಿಟಿಶರ ಗುಂಡೇಟಿಗೆ ಬಲಿಯಾಗಿ 25 ಮಂದಿ ಭಾರತೀಯರು ಹುತಾತ್ಮರಾದರು.

ಈ ಮುಷ್ಕರದಿಂದಾಗಿ ನೌಕಾದಳದ ಜನರಿಗೆ ಯಾವುದೇ ಶಿಕ್ಷೆಗಳನ್ನು ನೀಡದಂತೆ ನೋಡಿಕೊಳ್ಳುವುದಾಗಿ ಭರವಸೆಯನ್ನು ತೋರಿಸಿ ಅವರು ಶರಣಾಗುವಂತೆ ಕಾಂಗ್ರೆಸ್ ಮತ್ತು ಮುಸ್ಲೀಂ ಲೀಗ್ ಮುಖಂಡರು ಒತ್ತಡ ಹೇರಿದರು. ಇದರಿಂದ ಅಂತಿಮವಾಗಿ ಅವರು ಶರಣಾಗಬೇಕಾಯಿತು. ತಮ್ಮ ಶರಣಾಗತಿಯ ಮುನ್ನ, ಕೇಂದ್ರೀಯ ಮುಷ್ಕರ ಸಮಿತಿಯ ಅಧ್ಯಕ್ಷರು "ನಾವು ಭಾರತಕ್ಕೆ ಶರಣಾಗುವುದಲ್ಲದೆ ಬ್ರಿಟನ್ನಿಗಲ್ಲ" ಎಂಬುದಾಗಿ ಹೇಳಿಕೆ ಇತ್ತರು.

ಭಾರತದ ಕಾರ್ಮಿಕ ವರ್ಗವು ಸ್ವಾತಂತ್ರ್ಯ ಚಳುವಳಿಯ ಉದ್ದಕ್ಕೂ ನಡೆಸಿದ ಮುಷ್ಕರಗಳು, ಹೋರಾಟಗಳ ಪ್ರಭಾವವು ಸೈನಿಕ ಪಡೆಗಳ ಮೇಲೂ ಬಿದ್ದು ಸೈನಿಕ ಪಡೆಗಳೂ ಬ್ರಿಟಿಶ್ ಆಡಳಿತದ ವಿರುದ್ಧವಾಗಿ ಹೋರಾಡುವಂತಾಯಿತು. ಜನತಾ ಆಂದೋಲನದ ಈ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ಪೋಲೀಸರ ಮುಷ್ಕರಗಳು, ವಾಯು ಸೇನೆಯ ಮುಷ್ಕರಗಳು ನಡೆದು ಸ್ವಾತಂತ್ರ್ಯ ಹೋರಾಟವನ್ನು ಬಹಳ ಮೇಲ್ಮಟ್ಟಕ್ಕೆ ಕೊಂಡೊಯ್ದವು.

ಕಾರ್ಮಿಕ ವರ್ಗವು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಗಮನಾರ್ಹವಾದ ಗಣನೀಯವಾದ ಪಾತ್ರವನ್ನು ವಹಿಸಿದೆ. ಆದರೆ ನಾಯಕ ಸ್ಥಾನದಲ್ಲಿದ್ದುದು ಬಂಡವಾಳಗಾರರು. ಭಾರತಕ್ಕೆ ಸ್ವಾತಂತ್ರ್ಯವನ್ನು ತಂದದ್ದು ಭಾರತದ ಜನ ಕೋಟಿ ಎಂಬುದನ್ನು ಸುವರ್ಣೋತ್ಸವದ ಸಂದರ್ಭದಲ್ಲಿ ಒತ್ತುಕೊಟ್ಟು ಹೇಳಬೇಕು. ○

ಅಕ್ಟೋಬರ್ 2, 1939 ರಂದು ಮುಂಬಯಿಯಲ್ಲಿ ಯುದ್ಧವಿರೋಧಿ ಮುಷ್ಕರ



ಸಾರ್ವಜನಿಕ ವಲಯ ಬಿಕ್ಕಟ್ಟು ಮತ್ತು ಪರಿಹಾರ

ಪ್ರಕಾಶ್ ಕಾರಟ್

ಸ್ವಾತಂತ್ರ್ಯದ ಆರಂಭದಲ್ಲಿ ಸಾರ್ವಜನಿಕ ವಲಯಕ್ಕೆ ಉನ್ನತ ಸ್ಥಾನ ನೀಡಲು ಸರಕಾರಿ ಮುಖಂಡರು ಮುಂದಾಗಿದ್ದರೆ ಈಗ ಅದನ್ನು ಹೀಗಳೆಯುವುದು, ಗೇಲಿ ಮಾಡುವುದೇ ಸರ್ಕಾರಿ ಮುಖಂಡರಿಗೆ ದೈನಂದಿನ ಕಸುಬಿನಂತಾಗಿದೆ. ಹೀಗೇಕೆ? ಸಾರ್ವಜನಿಕ ವಲಯದಲ್ಲಿ ಸುಧಾರಣೆ ಅಗತ್ಯವಾಗಿದೆಯೇ? ಅಗತ್ಯವಾಗಿದ್ದರೆ ಎಂತಹ ಸುಧಾರಣೆ ಬೇಕಾಗಿದೆ?



ಸ್ವಾತಂತ್ರ್ಯದ ನಂತರವೂ 'ಪ್ರಭುತ್ವ ಬಂಡವಾಳವಾದ' (State Capitalism)ಕ್ಕೆ ಭಾರತದಲ್ಲಿ ಬಂಡವಾಳಶಾಹಿ ಬೆಳವಣಿಗೆ ಅವಶ್ಯವೆನಿಸಿದ್ದರಿಂದ ಸಾರ್ವಜನಿಕ ವಲಯವನ್ನು ಬೆಳೆಸಲಾಯಿತು. ಬಂಡವಾಳಶಾಹಿ ವರ್ಗದ ಹರಿಕಾರರು ಇದನ್ನು ಮೂಲಭೂತ ಅವಶ್ಯಕತೆ ಎಂದೇ ಗುರುತಿಸಿದ್ದರು. 'ಮುಂಬೈ ಯೋಜನೆ' ಎಂದು ಹೆಸರು ಪಡೆದ 1944 ರಲ್ಲಿ ಜೆ.ಆರ್.ಡಿ.ಟಾಟಾ ಮತ್ತು ಜಿ.ಡಿ.ಬಿರ್ಲಾ ಇದ್ದ ಸಮಿತಿ ರೂಪಿಸಿದ ಈ ಯೋಜನೆಯಲ್ಲಿ ಈ ವಿಷಯ ಇದ್ದದ್ದು ಆಕಸ್ಮಿಕವೇನಲ್ಲ. ಆರ್ಥಿಕದಲ್ಲಿ ಸರಕಾರದ ಮುಖ್ಯ ಮಧ್ಯಪ್ರವೇಶ ಮತ್ತು ಸಾರ್ವಜನಿಕ ವಲಯದ ಕಟ್ಟುವಿಕೆ, ಮುಖ್ಯವಾಗಿ ಅಂತರ್ರಚನಾ ಸೌಕರ್ಯಗಳಲ್ಲಿ ಅದರ ಪಾತ್ರ ಭಾರತದ ಬಂಡವಾಳಶಾಹಿಯ ಬೆಳವಣಿಗೆಗೆ ಬಹುಮುಖ್ಯ ಎಂದು ಪರಿಗಣಿಸಲಾಗಿತ್ತು. ಸ್ವಾತಂತ್ರ್ಯ ದೊರೆಯುವವರೆಗೆ ಭಾರತೀಯ ಬಂಡವಾಳಶಾಹಿಗೆ ಅಭಿವೃದ್ಧಿ ಹೊಂದಿದ ದೇಶಗಳ ಬಂಡವಾಳದೊಂದಿಗೆ ಸ್ಪರ್ಧಿಸುವ ಅನಿವಾರ್ಯತೆ ಇತ್ತು.

ಖಾಸಗಿ ಬಂಡವಾಳದಿಂದ ಅಂತರ್ರಚನಾ ಸೌಲಭ್ಯಗಳ ಸೃಷ್ಟಿ ಮತ್ತು ಬೃಹತ್ ಕೈಗಾರಿಕೆಗಳ ಸ್ಥಾಪನೆ ಸಾಧ್ಯವಿರದಿದ್ದರಿಂದ ಮತ್ತು ಈ ಕ್ಷೇತ್ರದಿಂದ ಬರುವ ಪ್ರತಿಫಲ ಬಹಳ ಕಡಿಮೆಯಾದ್ದರಿಂದ ಖಾಸಗಿಯವರಿಗೆ ಹೂಡಿಕೆ ಮಾಡಲು ಒಲವೂ ಇರದೇ ಹೋದ್ದರಿಂದ ಸಾರ್ವಜನಿಕ ವಲಯದ ಸ್ಥಾಪನೆ ಅನಿವಾರ್ಯವಾಯಿತು. ಇದರಿಂದಾಗಿ ವಿದ್ಯುತ್, ಗಣಿಗಾರಿಕೆ, ತೈಲ, ಉಕ್ಕು ಲೋಹಶಾಸ್ತ್ರ ಮತ್ತು ಬಂಡವಾಳ ಸರಕು ಕ್ಷೇತ್ರಗಳಲ್ಲಿ ಸಾರ್ವಜನಿಕ ವಲಯ ಬೆಳೆಯುವಂತಾಯಿತು.

ತಪ್ಪು ಗ್ರಹಿಕೆ

ಸಾರ್ವಜನಿಕ ವಲಯ ಸಮಾಜವಾದಿ ನೀತಿಗಳನ್ನು ಪ್ರತಿನಿಧಿಸುತ್ತದೆ ಎಂದು ಮಾರುಕಟ್ಟೆ ಆರ್ಥಿಕದ ಪ್ರತಿಪಾದಕರು ಹೇಳುತ್ತಾರೆ. ಆದರೆ ಇದು ಪೂರ್ಣ ತಪ್ಪು ಗ್ರಹಿಕೆ. ವಾಸ್ತವವೇನೆಂದರೆ ಉದಯೋನ್ಮುಖ ಭಾರತೀಯ ಬಂಡವಾಳಶಾಹಿ ವರ್ಗ ಬಂಡವಾಳಶಾಹಿ ಅಭಿವೃದ್ಧಿಗೆ ತಳಹದಿ ನಿರ್ಮಿಸಲು ಸಾರ್ವಜನಿಕ ವಲಯವನ್ನು ಪ್ರೋತ್ಸಾಹಿಸಿತು. ಇದರಿಂದೇನಾಯಿತೆಂದರೆ ಪ್ರಾರಂಭದಿಂದಲೂ ಸಾರ್ವಜನಿಕ ವಲಯ ಖಾಸಗಿ ವಲಯದ ಯಜಮಾನಿಕೆಗೆ ಒಳಪಟ್ಟಿತು. ಈ ಸಾರ್ವಜನಿಕ ವಲಯ ಖಾಸಗಿ ವಲಯಕ್ಕೆ ಲಾಭವಾಗುವಂತಹ ಅವಾಸ್ತವಿಕ ಬೆಲೆ ನೀತಿಯಡಿ ನಲುಗಿತು.

ಪ್ರಭುತ್ವ ಬಂಡವಾಳಶಾಹಿಯ ಬಿಕ್ಕಟ್ಟು ಸಾರ್ವಜನಿಕ ವಲಯವನ್ನು ತಟ್ಟಲೇಬೇಕಾಗಿತ್ತು. ಯಾಕೆಂದರೆ ಬೂರ್ಜ್ವಾ ವರ್ಗ ಈ ಪ್ರಕ್ರಿಯೆಯನ್ನು ಪ್ರಾಥಮಿಕ ಬಂಡವಾಳ ಕ್ರೋಢೀಕರಣದ ಸಾಧನವಾಗಿ ಬಳಸಿತು. ಸಾರ್ವಜನಿಕ ಹೂಡಿಕೆಯನ್ನು ಬೃಹತ್ ಸಾಲಗಳ ಮೂಲಕ ಮಾಡಲಾಯಿತು. ಸರಕಾರಿ ಹಣಕಾಸು ಸಂಸ್ಥೆಗಳು ತಮ್ಮ ಬಂಡವಾಳದ ಬಹುಭಾಗವನ್ನು ದೊಡ್ಡ ಬಂಡವಾಳಶಾಹಿ ಕುಟುಂಬಗಳ ಬಂಡವಾಳ ಅವಶ್ಯಕತೆಯನ್ನು ಪೂರೈಸಲು ಬಳಸಿದವು. ಇದೇ ಸಮಯದಲ್ಲಿ ಸರಕಾರ ತನ್ನ ಅಧಿಕಾರವನ್ನು ಶ್ರೀಮಂತ ವರ್ಗ ತೆರಿಗೆ ತೆರುವಂತೆ ಮಾಡಲು ಮತ್ತು ಬಳಕೆಯನ್ನು ಸೀಮಿತಗೊಳಿಸುವಂತೆ ಮಾಡಲು ಉಪಯೋಗಿಸುವಲ್ಲಿ ವಿಫಲವಾಯಿತು.

ಸಾರ್ವಜನಿಕ ವಲಯದಿಂದ ಲಾಭ ಹೊಂದಿದವರು ಆರ್ಥಿಕದಲ್ಲಿ ಹಣಕಾಸು ಕೊರತೆ ಹೆಚ್ಚಿದಾಗ ಸಾರ್ವಜನಿಕ ವಲಯದ ಆಸ್ತಿಗಳನ್ನು ಖಾಸಗೀಕರಿಸಿ ಎಂದು ಕೇಳುವಂತಾಯಿತು. ಇದೇ ಸಮಯದಲ್ಲಿ ಸರಕಾರಿ ನೀತಿಗಳಿಂದಾದ ನಕಾರಾತ್ಮಕ ಪರಿಣಾಮಗಳು ಕಾಣತೊಡಗಿದವು. ದೊಡ್ಡ ಬಂಡವಾಳಶಾಹಿಗೆ ಸಹಾಯಧನ ನೀಡುವಂತಹ "ಸಾಮಾಜಿಕ ಜವಾಬ್ದಾರಿಗಳನ್ನು" ಹೊಂದಿದ ಈ ಸಾರ್ವಜನಿಕ ವಲಯ ಬಹಳ ಸಮರ್ಥವಾಗಿರಬೇಕೆಂಬ, ಸ್ಪರ್ಧಾತ್ಮಕವಾಗಿದ್ದು ಲಾಭವನ್ನು ಮಾಡಬೇಕೆಂಬ ನಿರೀಕ್ಷೆ ಇತ್ತು. ಆದರೆ ಈ ವಲಯದಲ್ಲಿ ರಾಜಕೀಯ ಹಸ್ತಕ್ಷೇಪ ತೀವ್ರವಾಗಿತ್ತು ಮತ್ತು ಅಧಿಕಾರಶಾಹಿ ನಿರ್ಬಂಧಗಳು ಹಲವಿದ್ದವು.


ಸಾರ್ವಜನಿಕ ವಲಯಕ್ಕೆ ನೀಡಿದ ಸಾಮಾಜಿಕ ಜವಾಬ್ದಾರಿಗಳು ಖಾಸಗಿ ವಲಯಕ್ಕೆ ಇರಲಿಲ್ಲ. ಸಾರ್ವಜನಿಕ ವಲಯ ಲಾಭ ಮಾಡಬೇಕು ಸ್ಪರ್ಧಾತ್ಮಕವಾಗಿರಬೇಕು ಎಂದು ನಿರೀಕ್ಷಿಸುವಾಗ ಅದೇ ಉದ್ದಿಮೆಗಳಲ್ಲಿ ಖಾಸಗೀ ವಲಯವೂ ಇದನ್ನು ಸಾಧಿಸಬೇಕೆಂಬ ನಿರೀಕ್ಷೆ ಇರಲಿಲ್ಲ. ಉದಾಹರಣೆಗೆ ರೈಲು ಉದ್ದಿಮೆ ಮತ್ತು ಅಂಚೆ ಇಲಾಖೆ. ಈ ಸಾರ್ವಜನಿಕ ಉದ್ದಿಮೆಗಳು ಇಲ್ಲಿಯವರೆಗೂ ಸೇವೆಯನ್ನು ಒಟ್ಟಾರೆಯಾಗಿ ಸಮರ್ಥವಾಗಿ ನಿರ್ವಹಿಸಿಕೊಂಡು ಬಂದವು. ಇಂದು ಈ ಸೇವೆಗಳನ್ನು ಕೀಳುಗೊಳಿಸುವ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಎಂತಹ ಸುಧಾರಣೆಗಳು

ಸಾರ್ವಜನಿಕ ವಲಯದ ಸುಧಾರಣೆಗಳು ಇಂದು ಅತ್ಯವಶ್ಯಕವಾಗಿದೆ. ಆದರೆ ಈ ಸುಧಾರಣೆಗಳ ಹೆಸರಲ್ಲಿ ಆಗುತ್ತಿರುವುದು ಉದಾರೀಕರಣದ ಕ್ರಮಗಳ ಮೂಲಕ ಸಾರ್ವಜನಿಕ ವಲಯವನ್ನೇ ಕಳಚಿಹಾಕುವ ಪ್ರಯತ್ನ. ಇದು ಬ್ಯಾಂಕ್ - ಫಂಡ್‌ಗಳ ನೀತಿಯ ತಿರುಳೂ ಹೌದು. ಸಾರ್ವಜನಿಕ ವಲಯದ ಶೇರುಗಳ ಮಾರಾಟ ಇಂತಹ ಅಪಾಯಕಾರಿ ನೀತಿಗಳಿಗೆ ಒಂದು ನಿದರ್ಶನವಷ್ಟೆ.

ಎರಡು ಸುತ್ತಿನ ಶೇರು ಮಾರಾಟಗಳಲ್ಲಿ ಹಗರಣಗಳೇ ಆಗಿ ಹೋದವು. ಲಾಭದಾಯಕ ಸಾರ್ವಜನಿಕ ವಲಯದ ಉದ್ದಿಮೆಗಳ ಆಸ್ತಿ ಮಾರಾಟ ಅತ್ಯಂತ ಕೆಟ್ಟ ಖಾಸಗೀಕರಣ ಎಂಬುದರಲ್ಲಿ ಸಂಶಯವಿಲ್ಲ. ಇದು ಸಾರ್ವಜನಿಕ ಉದ್ದಿಮೆಗಳ ಸುಧಾರಣೆ ಮತ್ತು ಪುನರ್ರಚನೆಯ ಬದಲು ಸಾರ್ವಜನಿಕ ಆಸ್ತಿಯನ್ನು ಪೋಲು ಮಾಡುವ, ಸಾರ್ವಜನಿಕ ಉದ್ದಿಮೆಗಳನ್ನು ಕೊಲ್ಲುವ ಪ್ರಯತ್ನ. ಸಾರ್ವಜನಿಕ ವಲಯದ ಶೇರುಗಳ ಮಾರಾಟದಿಂದ ಬಂದ ಬಂಡವಾಳ ಹಣಕಾಸು ಕೊರತೆಯನ್ನು ನೀಗಿಸಲು ಹೋಗಿದೆ. ಈ ರೀತಿ ಶೇರು ಮಾರಾಟದಿಂದ ಬಂದ ಹಣವನ್ನು ಈ ಉದ್ದಿಮೆಗಳ ಆಧುನೀಕರಣ ಮತ್ತು ಪುನರ್ರಚನೆಗೆ ಬಳಸುವ ಭರವಸೆಯೇನೂ ಇಲ್ಲ.

ಆಳುವ ವಲಯದಲ್ಲಿ ಸಾರ್ವಜನಿಕ ವಲಯವನ್ನು ಖಾಸಗೀಕರಿಸಬೇಕು ಯಾ ಮುಚ್ಚಬೇಕು ಎಂಬ ಸಿದ್ಧಾಂತ ಪ್ರಚಲಿತವಿದೆ. ಆದರೆ ಭಾರತದಂತಹ ದೇಶಕ್ಕೆ ಈ ಸಾರ್ವಜನಿಕ ವಲಯವನ್ನು ಸಾರ್ವಜನಿಕ ಮಾಲಿಕತ್ವದಲ್ಲೇ ಉಳಿಸಿಕೊಳ್ಳಬೇಕಾದ ಮೂಲಭೂತ ಅವಶ್ಯಕತೆ ಇದೆ. ಮಾಲಿಕತ್ವದ ಬಾಹುಳ್ಯ ಮತ್ತು ನವೋನ್ಮೇಷವೆರಡೂ ರೋಗಪೀಡಿತ ಉದ್ದಿಮೆಗಳ ಪುನರುಜ್ಜೀವನಕ್ಕೆ


One vision, One Nation, One destination
Being Indian is being a part of glorious achievements in the fields of agriculture, industry, technology, medicine and education. Achievement that involve the emotion of more than 90 crores of people.
On the 50th anniversary of independence lets renew our oath in being as one with the feelings of one mighty nation. And, lets reach out towards the next century once again, as one.
50
Govt. of West Bengal
INDIA CELEBRATES THE 50TH ANNIVERSARY OF HARMONIC ONENESS

ಅವಶ್ಯವೇ ಎಂದು ಪರಿಶೀಲಿಸಬಹುದು. ಆದರೆ ಬಂಡವಾಳದ ಬಹುತೇಕ ಹತೋಟಿ ಸರಕಾರೀ ವಲಯದಲ್ಲೇ ಇರಬೇಕು. ಇಲ್ಲವಾದಲ್ಲಿ ರಾಷ್ಟ್ರೀಯ ಅಭಿವೃದ್ಧಿಗೆ ಬೇಕಾದ ಸ್ವಾವಲಂಬನೆ ಮತ್ತು ಸಾರ್ವಭೌಮತ್ವಗಳನ್ನು ಸಂರಕ್ಷಿಸಲಾಗುವುದಿಲ್ಲ.

ಬೇರೆ ತಳಹದಿಯಲ್ಲೇ

ಈಗಾಗಲೇ ಸಾರ್ವಜನಿಕ ವಲಯದ ಉದ್ದಿಮೆಗಳ ಮೂಲಕ ಸಾಧಿಸಿರುವ ವೈಜ್ಞಾನಿಕ ಮತ್ತು ತಾಂತ್ರಿಕ ಮಟ್ಟವನ್ನು ಪೋಷಿಸುವುದು ಮತ್ತು ಇದನ್ನು ಬೆಳೆಸುವುದು ಅವಶ್ಯ. ಸ್ವಾವಲಂಬಿ ಸಾಮಾಜಿಕ - ಆರ್ಥಿಕ ಮಾದರಿಯ ಬೆಳವಣಿಗೆ ಸಾಧಿಸುವ ಮೂಲಕ ಮಾತ್ರ ಇದು ಸಾಧ್ಯ. ಇದನ್ನು ಸಾಧಿಸಲು ಸಾರ್ವಜನಿಕ ವಲಯದ ಸುಧಾರಣೆಯನ್ನು ಬೇರೆ ತಳಹದಿಯಲ್ಲೇ ಮಾಡುವ ಅವಶ್ಯಕತೆ ಇದೆ.

ಮೊದಲನೆಯದಾಗಿ ಈಗಿನ ವಿಷಪೂರಿತ ತಾರತಮ್ಯದ ನೀತಿಯನ್ನು ಕೈ ಬಿಡಬೇಕು. ಇಂದು ಹೊಸ ಹೊಸ ಕ್ಷೇತ್ರಗಳಿಗೆ ಖಾಸಗಿ ವಲಯಕ್ಕೆ ಪ್ರವೇಶ ನೀಡುತ್ತಿರುವಾಗ ಸಾರ್ವಜನಿಕ ವಲಯವನ್ನು ಈ ಕ್ಷೇತ್ರಗಳಿಂದ ಹೊರಗಿಡಲಾಗುತ್ತಿದೆ. ಉದಾಹರಣೆಗೆ, ದೂರಸಂಪರ್ಕ ವಲಯ. ಇಲ್ಲಿ ಸಾರ್ವಜನಿಕ ವಲಯದ ಉದ್ದಿಮೆಗಳು ಮೂಲಭೂತ ಮತ್ತು ಮೌಲ್ಯ ಸೇವೆಗಳಲ್ಲಿ ಪ್ರವೇಶಿಸುವುದನ್ನೇ ನಿರ್ಬಂಧಿಸಲಾಯಿತು. ತೈಲ ವಲಯದಲ್ಲೂ ಇದೇ ಕತೆ. ಸಾರ್ವಜನಿಕ ವಲಯದ ಉದ್ದಿಮೆಗಳಿಗೆ ಸ್ವಾಯತ್ತತೆ ನೀಡಿ ಅವುಗಳನ್ನು ಅಧಿಕಾರಶಾಹಿ ಹತೋಟಿಗಳಿಂದ ಬಿಡುಗಡೆಗೊಳಿಸುವುದಕ್ಕೆ ಮೊದಲ ಆದ್ಯತೆ ನೀಡಬೇಕು.

ಇದರ ಜೊತೆಗೆ ಮ್ಯಾನೇಜ್‌ಮೆಂಟಿನ ಉನ್ನತ ವ್ಯಕ್ತಿಗಳಿಗೆ ಜವಾಬ್ದಾರಿತ್ವ ಇರಬೇಕು. ಅವರು ಉದ್ಯೋಗಿಗಳ ಸಹಕಾರ ಪಡೆದು ಉತ್ಪಾದಕತೆಯನ್ನು ಹೆಚ್ಚಿಸುವಂತಾಗಬೇಕು. ಸದ್ಯದ ನೀತಿಯಾದ ಸಾರ್ವಜನಿಕ ವಲಯಕ್ಕೆ ಬಜೆಟ್ ಬೆಂಬಲ ನೀಡದೇ ಇರುವುದು, ಈ ಉದ್ದಿಮೆಗಳಿಗೆ ಸರಕಾರಿ ಆರ್ಡರ್ ನೀಡದೇ ಇರುವುದು, ಬಹುರಾಷ್ಟ್ರೀಯ ಕಂಪನಿಗಳಿಗೆ ಆದ್ಯತೆ ನೀಡುವುದು ಇವೆಲ್ಲಾ ಬದಲಾಗಬೇಕು.

ಸ್ಪರ್ಧಾತ್ಮಕ ಸಾಮರ್ಥ್ಯ ಬರೀ ಮಾಲಿಕತ್ವದ ಮೇಲೆ ಅವಲಂಬಿಸಿಲ್ಲ. ಬದಲಿಗೆ ಈ ಉದ್ದಿಮೆಗಳನ್ನು ಹೇಗೆ ನಡೆಸಲಾಗುತ್ತಿದೆ ಎಂಬುದರ ಮೇಲೆ ಅವಲಂಬಿಸಿದೆ. ಸರಕಾರ ಈಗ (ಇಷ್ಟು ತಡವಾಗಿ) 'ನವರತ್ನ'ಗಳಿಗೆ ಸ್ವಾಯತ್ತತೆ ನೀಡುತ್ತಿದೆ ಮತ್ತು ಪ್ರೋತ್ಸಾಹ ನೀಡಲಾಗುತ್ತದೆ ಎಂದು ಪ್ರಕಟಿಸಿದೆ.

ಇದು ಅತ್ಯಂತ ಲಾಭದಾಯಕ ಉದ್ದಿಮೆಗಳಿಗೆ ಮಾತ್ರ ಅನ್ವಯವಾಗುವ ಬದಲು ಸಾಮಾಜಿಕವಾಗಿ ಅತ್ಯವಶ್ಯವಾಗಿರುವ ಉದ್ದಿಮೆಗಳಿಗೂ ಅನ್ವಯವಾಗಬೇಕು. ಉದಾಹರಣೆಗೆ ಐಡಿಪಿಎಲ್ ಅನ್ನು ಪುನರುಜ್ಜೀವನಗೊಳಿಸಿ ಪುನಶ್ಚೇತನಗೊಳಿಸಿದರೆ ಸಗಟು ಔಷಧಿ ಬೆಲೆಗಳು ಕಡಿಮೆಯಾಗುತ್ತವೆ. ಇಂತಹ ಪ್ರಾಮಾಣಿಕ ಪ್ರಯತ್ನ ಮಾಡಿದರೆ ಅದಕ್ಕೆ ಟ್ರೇಡ್ ಯೂನಿಯನ್ನುಗಳು ಮತ್ತು ಕಾರ್ಮಿಕರು ಸರಿಯಾಗಿ ಪ್ರತಿಸ್ಪಂದಿಸುತ್ತಾರೆ. ಕೆಲವು ಸಾರ್ವಜನಿಕ ಉದ್ದಿಮೆಗಳನ್ನು ಪುನರುಜ್ಜೀವನಗೊಳಿಸುವಲ್ಲಿ ಯೂನಿಯನ್ನುಗಳು ತಳೆದ ಧೋರಣೆ ಇದನ್ನು ಸ್ಪಷ್ಟಗೊಳಿಸುತ್ತದೆ. ○

ಸ್ವತಂತ್ರ ಭಾರತದ ಅಭಿವೃದ್ಧಿ ಮತ್ತು ಕಾರ್ಮಿಕ ವರ್ಗ

ವಿ.ಜೆ.ಕೆ.ನಾಯರ್



ಭಾರತ ಅಂಗೀಕರಿಸಬೇಕಾದ ಅಭಿವೃದ್ಧಿ ವಿಧಾನದ ಬಗ್ಗೆ ಗಂಭೀರ ಚರ್ಚೆ ನಡೆಯಬೇಕು. ಅದು 'ನೆಹರೂ ಮಾದರಿ' ವಿಧಾನವಾಗಲು ಸಾಧ್ಯವಿಲ್ಲ, 'ಗಾಂಧಿವಾದಿ ವಿಧಾನ'ವಾಗಲೂ ಸಾಧ್ಯವಿಲ್ಲ. ಇದು ಕಾರ್ಮಿಕ ವರ್ಗದ ಅಭಿವೃದ್ಧಿ ವಿಧಾನವಾಗಬೇಕು - ಈಗ ನಾವು ಪಡೆದಿರುವ ಸಾರ್ವಜನಿಕ ಮತ್ತು ಖಾಸಗಿ ಉದ್ದಿಮೆಗಳನ್ನೆಲ್ಲಾ ಉಳಿಸಿಕೊಂಡು ಅವನ್ನು ತ್ವರಿತವಾಗಿ ಬೆಳೆಸುವ, ನಗರಗಳ ಹಾಗೂ ಗ್ರಾಮೀಣ ದುಡಿಯುವ ಜನಗಳ ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಳ್ಳುವ ವಿಧಾನವಾಗಬೇಕು.

ಸ್ವತಂತ್ರ ಭಾರತದಲ್ಲಿ ಕಾರ್ಮಿಕ ವರ್ಗದ ಪರಿಸ್ಥಿತಿ ತನ್ಮೂಲಕ ಇಡೀ ಜನಸಮೂಹಗಳ ಪರಿಸ್ಥಿತಿಗೂ ದೇಶದ ಅಭಿವೃದ್ಧಿಯ ವಿಧಾನ ಮತ್ತು ಅದಕ್ಕನುಗುಣವಾಗಿ ಕಂಡುಬಂದ ರಾಜಕೀಯಕ್ಕೂ ಅನ್ಯೋನ್ಯ ಸಂಬಂಧವಿದೆ.

ಸ್ವತಂತ್ರ ಭಾರತ ಯಾವ ಅಭಿವೃದ್ಧಿ ವಿಧಾನವನ್ನು ಅನುಸರಿಸಬೇಕು ಎಂಬುದು ಸ್ವಾತಂತ್ರ್ಯದ ಮೊದಲೇ ಒಂದು ಚರ್ಚೆಯ ವಿಷಯವಾಗಿತ್ತು. ಕೈಗಾರಿಕೀಕೃತ ದೇಶಗಳಾದ ಪಶ್ಚಿಮ ಯುರೋಪ್, ಅಮೇರಿಕಾ ಹಾಗೂ ಏಶ್ಯಾದ ದೇಶ ಜಪಾನ್ ಇವೆಲ್ಲಾ ಆಗಿದ್ದ ಮಾದರಿಗಳು. ಸೋವಿಯತ್ ಒಕ್ಕೂಟ ಅಂಗೀಕರಿಸಿದ ಬೆಳವಣಿಗೆ ವಿಧಾನದ ಉದಾಹರಣೆಯೂ ಕಣ್ಣ ಮುಂದಿತ್ತು. ಕೊನೆಗೆ ಸ್ವತಂತ್ರ ಭಾರತ ಅನುಸರಿಸಲು ನಿರ್ಧರಿಸಿದ ದಾರಿಯೆಂದರೆ ಯೋಜನಾಬದ್ಧ ಕೈಗಾರಿಕಾ ಬೆಳವಣಿಗೆ. ಆಳುವ ಕಾಂಗ್ರೆಸ್ ಪಕ್ಷ ಅದನ್ನು 'ಸಮಾಜವಾದೀ ರೀತಿಯ ಅಭಿವೃದ್ಧಿ ವಿಧಾನ' ಎಂದು ಹೇಳಿತು. ಇದನ್ನು ಸಾಮಾನ್ಯವಾಗಿ ಆವಡಿ ಸಮಾಜವಾದ ಎನ್ನಲಾಗುತ್ತದೆ. ಇದನ್ನು ಜವಾಹರಲಾಲ ನೆಹರೂ ಹೆಸರಿನೊಂದಿಗೆ ಜೋಡಿಸಲಾಗುತ್ತಿದರೂ, ವಾಸ್ತವವಾಗಿ ಈ ವಿಧಾನದ ಶಿಲ್ಪಿ ಪ್ರಖ್ಯಾತ ಅರ್ಥಶಾಸ್ತ್ರಜ್ಞ ಮಹಾಲನೋಬಿಸ್. ಅದು ಆಳುವ ವರ್ಗಗಳ ಹಿತಾಸಕ್ತಿಗಳಿಗೆ ಅನುಗುಣವಾಗಿಯೇ ಇತ್ತು. ಜಿ.ಡಿ.ಬಿರ್ಲಾ, ಜೆ.ಆರ್.ಡಿ.ಟಾಟ ಮತ್ತಿತರ ಉದ್ಯಮಿಗಳು 1944 ರಲ್ಲಿ ಮುಂದಿಟ್ಟ 'ಬಾಂಬೆ ಯೋಜನೆ' ಕೂಡಾ ಇದೇ ವಿಧಾನ ಎಂಬುದು ಕೇವಲ ಆಕಸ್ಮಿಕವಲ್ಲ. ಅವರೂ ತ್ವರಿತ ಕೈಗಾರಿಕಾ ಬೆಳವಣಿಗೆಯಾಗಬೇಕು ಎಂದರು. ಅದಕ್ಕಾಗಿ ಮೂಲಸೌಕರ್ಯಗಳ ಬೆಳವಣಿಗೆಯಲ್ಲಿ ಸರಕಾರ ಬಂಡವಾಳ ತೊಡಗಿಸಬೇಕು, ಭಾರೀ ಕೈಗಾರಿಕೆಗಳು ಸಾರ್ವಜನಿಕ ವಲಯದಲ್ಲಿ ಇರಬೇಕು ಎಂದು ಅವರು ಪ್ರತಿಪಾದಿಸಿದರು. ಇದೇ ರೀತಿಯ ವಿಧಾನವನ್ನು ಪ್ರತಿಪಾದಿಸಿ ವಿಶ್ವೇಶ್ವರಯ್ಯ ಕರ್ನಾಟಕದಲ್ಲಿ ಅನುಷ್ಠಾನಕ್ಕೆ ತಂದರು.

ಸ್ವಾತಂತ್ರ್ಯ ಪೂರ್ವದಲ್ಲಿ

ಇಪ್ಪತ್ತನೇ ಶತಮಾನದ ಪೂರ್ವಾರ್ಧದಲ್ಲಿ ಸ್ವಾತಂತ್ರ್ಯ ಸಿಗುವ ಹಿಂದಿನ ಅವಧಿಯಲ್ಲೇ ವಿಶ್ವೇಶ್ವರಯ್ಯನವರು ಸಾರ್ವಜನಿಕ ವಲಯದಲ್ಲಿ ಸರಕಾರ ಬಂಡವಾಳ ಹೂಡಬೇಕು ಎಂದು ಪ್ರತಿಪಾದಿಸಿದ್ದರು. ಆಗಿನ ಮೈಸೂರು ಸಂಸ್ಥಾನ ಪ್ರತಿಯೊಂದು ಜಿಲ್ಲೆಯನ್ನು ಸಂಪರ್ಕಿಸುವಂತೆ ರೈಲು ವ್ಯವಸ್ಥೆಯನ್ನು ಬೆಳೆಸಿತು. ಮದ್ರಾಸ್ ಪ್ರಾಂತ್ಯದಿಂದ ಪ್ರತಿರೋಧ ಬಂದರೂ ನೀರಾವರಿ ಅಣೆಕಟ್ಟುಗಳನ್ನು ಕಟ್ಟಲಾಯಿತು. ಕೃಷ್ಣರಾಜಸಾಗರ ನಿರ್ಮಾಣವಾಯ್ತು, ಮೊದಲು ಶಿವನಸಮುದ್ರ, ಆಮೇಲೆ ಜೋಗ್ ಬಳಿ ಜಲವಿದ್ಯುತ್ ಉತ್ಪಾದನಾ ಕೇಂದ್ರಗಳನ್ನು ಕಟ್ಟಲಾಯಿತು. ಭದ್ರಾವತಿಯಲ್ಲಿ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ ಬಂತು. ಸಾರ್ವಜನಿಕ ವಲಯಯದಲ್ಲಿ ಇನ್ನೂ ಹಲವಾರು ಉದ್ದಿಮೆಗಳು - ಸರಕಾರಿ ವಿದ್ಯುತ್ ಕಾರ್ಖಾನೆ, ಕೇಂದ್ರ ಕೈಗಾರಿಕಾ ವರ್ಕ್‌ಶಾಪ್, ಮೈಸೂರು ಕ್ರೋಮ್ ಅಂಡ್ ಟ್ಯಾನಿಂಗ್, ಮೈಸೂರು ಸೋಪ್ ಫ್ಯಾಕ್ಟರಿ, ಪೋರ್ಸಲಿನ್ ಕಾರ್ಖಾನೆ, ಮೈಸೂರು ಲ್ಯಾಂಪ್ಸ್, ಗಂಧದ ಎಣ್ಣೆ ಕಾರ್ಖಾನೆ, ಕಂಠೀರವ ಸ್ಟುಡಿಯೋ ಇತ್ಯಾದಿ ಸ್ವಾತಂತ್ರ್ಯದ ಮೊದಲೇ ಸಾರ್ವಜನಿಕ ವಲಯದಲ್ಲಿ ಬಂದವು. ಆವಾಗಲೇ ಹತ್ತೊಂಭತ್ತನೇ ಶತಮಾನದಲ್ಲಿ ಹಾಗೂ ಇಪ್ಪತ್ತನೇ ಶತಮಾನದ ಆರಂಭದಲ್ಲಿ ಸ್ಥಾಪಿಸಿದ್ದ ಹಲವಾರು ಜವಳಿ ಗಿರಣಿಗಳು ಇದ್ದವು. ಮೈಸೂರಿನ ಕೆ.ಆರ್.ಮಿಲ್ಸ್, ಬೆಂಗಳೂರು ಮೈಸೂರು ಮತ್ತು ಮಿನರ್ವ ಮಿಲ್ಸ್, ಬಿನ್ನಿಮಿಲ್, ದಾವಣಗೆರೆಯಲ್ಲಿ ಹಲವಾರು ಜವಳಿ ಗಿರಣಿಗಳು ಆಗಲೇ ಇದ್ದವು. 20 ನೇ ಶತಮಾನದ ಆರಂಭದ ದಶಕದಲ್ಲಿ ಬೆಂಗಳೂರಿನಲ್ಲಿ ಐ.ಟಿ.ಸಿ.(ಇಂಪೀರಿಯಲ್ ಟೊಬೋಕೋ ಕಂಪನಿ) ಸ್ಥಾಪನೆಯಾಯಿತು. ಎರಡನೇ ಮಹಾಯುದ್ಧದ ಅವಧಿಯಲ್ಲಿ ಹಿಂದೂಸ್ತಾನ್ ಏರ್‌ಕ್ರಾಫ್ಟ್ ಸ್ಥಾಪನೆಯಾಯಿತು. ಕೋಲಾರದಲ್ಲಿ ಚಿನ್ನದ ಗಣಿ 19ನೇ ಶತಮಾನದಲ್ಲೇ ಆರಂಭವಾಗಿತ್ತು. ಸ್ವಾತಂತ್ರ್ಯದ ಮೊದಲು ಆಗಿನ ಮೈಸೂರು ಸಂಸ್ಥಾನದಲ್ಲಿನ ಕೈಗಾರಿಕಾ ದೃಶ್ಯ ಇದು. ಕರ್ನಾಟಕದ ಇತರ ಕಡೆಗಳಲ್ಲೂ ಗುಲ್ಬರ್ಗಾ ಎಂ.ಎಸ್.ಕೆ. ಮಿಲ್ಸ್, ಇತ್ಯಾದಿಗಳು ಬೇಗನೇ ಆರಂಭವಾದವು. ಇವಲ್ಲದೆ ಪಾರಂಪರಿಕ ಉದ್ದಿಮೆಗಳು ರಾಜ್ಯದ ಎಲ್ಲೆಡೆ ಇದ್ದವು. ಬೀಡಿ ತಯಾರಿಕೆ ನಮ್ಮ ರಾಜ್ಯದಿಂದ ಕೇರಳಕ್ಕೆ

ಜಿ.ಡಿ.ಬಿರ್ಲಾ, ಜೆ.ಆರ್.ಡಿ.ಟಾಟ ಮತ್ತಿತರ ಉದ್ಯಮಿಗಳೂ ತ್ವರಿತ ಕೈಗಾರಿಕಾ ಬೆಳವಣಿಗೆಯಾಗಬೇಕು ಎಂದರು. ಅದಕ್ಕಾಗಿ ಮೂಲಸೌಕರ್ಯಗಳ ಬೆಳವಣಿಗೆಯಲ್ಲಿ ಸರಕಾರ ಬಂಡವಾಳ ತೊಡಗಿಸಬೇಕು, ಭಾರೀ ಕೈಗಾರಿಕೆಗಳು ಸಾರ್ವಜನಿಕ ವಲಯದಲ್ಲಿ ಇರಬೇಕು ಎಂದು ಅವರು ಪ್ರತಿಪಾದಿಸಿದರು. ಇದೇ ರೀತಿಯ ವಿಧಾನವನ್ನು ಪ್ರತಿಪಾದಿಸಿ ವಿಶ್ವೇಶ್ವರಯ್ಯ ಕರ್ನಾಟಕದಲ್ಲಿ ಅನುಷ್ಠಾನಕ್ಕೆ ತಂದರು.

ಹರಡಿತ್ತು. ಕರ್ನಾಟಕದಲ್ಲೇ ಮೂಡಿ ಬಂದ ಬ್ಯಾಂಕುಗಳಿದ್ದವು, ಮುಖ್ಯವಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ. ಇವು ಮುಖ್ಯವಾಗಿ ಪಾರಂಪರಿಕ ಉದ್ದಿಮೆಗಳಲ್ಲಿ ಉತ್ಪನ್ನಗೊಂಡ ಹೆಚ್ಚುವರಿ ಮೌಲ್ಯದಿಂದ ಆರಂಭವಾದಂತವುಗಳು. ಇವು ಬೃಹತ್ ಬ್ಯಾಂಕುಗಳಿಗಾಗಿ ಬೆಳೆದವು. ಕೊನೆಗೆ ರಾಷ್ಟ್ರೀಕರಣಗೊಂಡವು ಎಂಬುದನ್ನು ಗಮನಿಸಬೇಕು. ಇವಲ್ಲದೆ ರಾಜ್ಯದ ಕೊಡಗು, ಚಿಕ್ಕಮಗಳೂರು, ಹಾಸನಗಳಲ್ಲಿ ತೋಟಗಾರಿಕೆ ಇತ್ತು.

ಸ್ವಾತಂತ್ರ್ಯಪೂರ್ವದಲ್ಲಿ ದೇಶದಲ್ಲಿ ಕೈಗಾರಿಕಾ ಬೆಳವಣಿಗೆ ಬಂಗಾಳ, ಮುಂಬೈ ಮತ್ತು ಮದ್ರಾಸ್ ಪ್ರಾಂತ್ಯಗಳಿಗೆ ಸೀಮಿತವಾಗಿತ್ತು. ಪಾರಂಪರಿಕ ಉದ್ದಿಮೆಗಳಲ್ಲದೆ ಮೊದಲು ತೋಟಗಾರಿಕೆ, ಗಣಿಗಾರಿಕೆ, ನಂತರ ಇಂಜಿನಿಯರಿಂಗ್, ವರ್ಕ್‌ಶಾಪ್‌ಗಳು, ಗಿರಣಿಗಳು ಇತ್ಯಾದಿಗಳು ಆಧುನಿಕ ಉದ್ದಿಮೆಗಳು ಅಲ್ಲಿ ಬೆಳೆದವು.

ಬಂಗಾಳ(ಕಲ್ಕತ್ತ, ಮತ್ತು ಸುತ್ತಮುತ್ತಲು) ಮುಂಬೈ, ಅಹಮದಾಬಾದ್ ಮತ್ತು ಮದ್ರಾಸ್ ಸ್ವಾತಂತ್ರ್ಯ ಪೂರ್ವದ ಭಾರತದ ಕೈಗಾರಿಕಾ ಬೆಳವಣಿಗೆಯ ಪ್ರಮುಖ ಕೇಂದ್ರಗಳಾಗಿದ್ದವು. ಕಬ್ಬಿಣ ಮತ್ತು ಉಕ್ಕು ತಯಾರಿಕೆ ಬಿಹಾರದಲ್ಲಿ ಆರಂಭವಾಯಿತು. ಜಮಶೆಡಪುರ ಇದರಿಂದ ಮೇಲಕ್ಕೆದ್ದಿತು. ಭಾರತೀಯ ಒಡೆತನದ ಉದ್ದಿಮೆಗಳು ಮುಖ್ಯವಾಗಿ ಜವಳಿಗಿರಣಿಗಳು. ಅವು ಮುಖ್ಯವಾಗಿ ಮುಂಬೈ, ಅಹಮದಾಬಾದ್ ಪ್ರದೇಶದಲ್ಲಿದ್ದವು. ಯುರೋಪಿಯನ್ ಒಡೆತನದ ಉದ್ದಿಮೆಗಳ ಮುಖ್ಯ ಕಚೇರಿಗಳು ಸುಮಾರಾಗಿ ಹಿಂದೆ ಬ್ರಿಟಿಶ್ ಆಡಳಿತದ ರಾಜಧಾನಿಯಾಗಿದ್ದ ಕಲ್ಕತ್ತೆಯಲ್ಲೇ ಇದ್ದವು.

ಭಾರತದಲ್ಲಿ ಬ್ರಿಟಿಶ್ ಆಡಳಿತ ಬೆಳೆದಂತೆ ಬಂದರುಗಳು, ಹಡಗುಕಟ್ಟೆಗಳು, ಬಂದರುಗಳನ್ನು ಪರಸ್ಪರ ಸಂಪರ್ಕಿಸುವ ರೈಲ್ವೆ ದೇಶಾದ್ಯಂತ ಬೆಳೆದವು. ಅಂಚೆ, ತಂತಿ, ರಸ್ತೆ ಸಂಪರ್ಕ, ಸೇವೆಗಳು ಇತ್ಯಾದಿಗಳೂ ಬೆಳೆದವು.

ಆದರೂ ಭಾರತ ಪ್ರಧಾನವಾಗಿ ಕೃಷಿ ದೇಶವಾಗಿಯೇ ಉಳಿದಿತ್ತು. ಭಾರತ ಪಾರಂಪರಿಕ ಕೈಗಾರಿಕಾ ಸರಕುಗಳನ್ನು ಉತ್ಪಾದಿಸುವ ದೇಶವೂ ಆಗಿತ್ತು. ವಿಶೇಷವಾಗಿ ಜವಳಿ, ರೇಶ್ಮೆ ಕ್ಯಾಲಿಕೋ ಇತ್ಯಾದಿ. ಇವನ್ನು ಪಡೆಯಲೆಂದೇ ಯುರೋಪಿಯನ್ನರು ಇಲ್ಲಿಗೆ ಬಂದಿದ್ದರು.

ಗಾಂಧೀವಾದಿ ವಿಧಾನ

ಹಳ್ಳಿ ಆಧಾರಿತ 'ಸ್ವರಾಜ್ಯ'ದ ಗಾಂಧಿವಾದಿ ವಿಚಾರಧಾರೆಯ ಸಾಮಾಜಿಕ, ಆರ್ಥಿಕ ನೆಲೆಯನ್ನು ಇಲ್ಲೇ ಕಾಣಬಹುದು. ಅಂದರೆ ಭಾರತ ಸುಮಾರಾಗಿ ಈ ಪಾರಂಪರಿಕ ಉದ್ದಿಮೆಗಳಿಂದ ಬದುಕುಳಿದಿದೆ. ಆಧುನಿಕ ಕೈಗಾರಿಕೆಗಳಿಲ್ಲದ ವಿಶಾಲ ಪ್ರದೇಶಗಳ ಅಗತ್ಯಗಳನ್ನು ಲೆಕ್ಕಕ್ಕೆ ತಗೊಂಡಾಗಲಷ್ಟೇ ಭಾರತ ಅಭಿವೃದ್ಧಿ ಹೊಂದಲು ಸಾಧ್ಯ ಎಂಬ ನಂಬಿಕೆಯಲ್ಲಿ ಇದನ್ನು ಕಾಣಬಹುದು.

ಸ್ವಾತಂತ್ರ್ಯ ಬರುವವರೆಗೂ ದೇಶೀ ಬಂಡವಾಳಿಗರ ಕೈಯಲ್ಲಿ ಯಾವುದೇ "ಭಾರತೀಯ ಪ್ರಭುತ್ವ'ವೆಂಬುದು ಇಲ್ಲದಿದ್ದುದರಿಂದ ಹಿಂದಿನ ಮೈಸೂರು ಸಂಸ್ಥಾನದಲ್ಲಿ ವಿಶ್ವೇಶ್ವರಯ್ಯ ಪ್ರತಿಪಾದಿಸಿದ ಬೆಳವಣಿಗೆ ವಿಧಾನವನ್ನು ಇಡೀ ದೇಶಕ್ಕೆ ಅನ್ವಯವಾಗುವಂತೆ ಪ್ರತಿಪಾದಿಸುವಂತಹ ಸನ್ನಿವೇಶ ಇರಲಿಲ್ಲ. ಆದರೂ ಸ್ವಾತಂತ್ರ್ಯ ಆಂದೋಲನದ ಬೆಳವಣಿಗೆಯು ಜತೆ-ಜತೆಗೇ ಬೆಳೆದ, ಯುರೋಪಿಯನ್ ಸಂಪರ್ಕಗಳಿಂದ ಪ್ರಯೋಜನವನ್ನು ಪಡೆದ ದೇಶೀ ಉದ್ಯಮಿಗಳು ತಮ್ಮ ಅಭಿವೃದ್ಧಿಯ ಒಂದು ಯೋಜನೆಯನ್ನು ಕಂಡರಿಸಿದ್ದರು. ಅವರ 'ಬಾಂಬೆ ಯೋಜನೆ'(ಬಾಂಬೆಪ್ಲಾನ್)ಯಲ್ಲಿ ಇದು ಅಡಕವಾಗಿತ್ತು. ಅವರ ಉದ್ದಿಮೆಗಳು ಬ್ರಿಟಿಶ್ ಮತ್ತು ಇತರ ಬಂಡವಾಳದ ನಂಟಿನೊಂದಿಗೆ ಹಾಗೂ ವಿದೇಶೀ ಉತ್ಪನ್ನಗಳೊಂದಿಗೆ ಸ್ಪರ್ಧೆಯಲ್ಲಿ ಬೆಳೆದವು. ಈ ಸ್ಪರ್ಧಾತ್ಮಕ ನಂಟು ಸಾಧ್ಯವಾಗುವಲ್ಲಿ ವಿಶ್ವಯುದ್ಧ ಪ್ರಮುಖ ಪಾತ್ರವಹಿಸಿತು. ಭಾರತೀಯ ಉದ್ದಿಮೆಗಳು ಯುದ್ಧಸಮಯದಲ್ಲಿ ಉತ್ತಮ ಸರಬರಾಜುಗಾರರಾಗಿ ಕೆಲಸ ಮಾಡಿದವು. ಯುದ್ಧಕ್ಕೆ ಖರೀದಿಯನ್ನು ಬ್ರಿಟಿಶರು ಮಾಡುತ್ತಿದ್ದರು. ಅವರೊಂದಿಗೆ ಮಿತ್ರತ್ವ ಮಾಡದೆ ಉತ್ಪಾದನೆ ಮತ್ತು ಅದರ ಮಾರಾಟ ಸಾಧ್ಯವಿರಲಿಲ್ಲ. ಆದರೂ ಯುರೋಪಿಯನೇತರ ಭಾರತೀಯ ಉದ್ದಿಮೆಯ ಬೆಳವಣಿಗೆ ಭಾರತದೊಳಗಿನ ಮತ್ತು ಹೊರಗಿನ ವಿದೇಶಿ ಉದ್ಯಮಗಳೊಂದಿಗೆ ಸ್ಪರ್ಧೆಯಿಂದ ನಡೆಯಿತು. ಅವರು ತಮ್ಮದೇ ಪ್ರಭಾವಲಯವೊಂದನ್ನು ರೂಪಿಸಿಕೊಳ್ಳದೆ ಅವರ ಮುಂದಿನ ಬೆಳವಣಿಗೆ ಸಾಧ್ಯವಿರಲಿಲ್ಲ. ಆದ್ದರಿಂದ ಸ್ವಾತಂತ್ರ್ಯ ಮತ್ತು ಕೈಗಾರಿಕಾ ಬೆಳವಣಿಗೆಗೆ ಅವರು ಹಾತೊರೆದರು. ದೇಶೀ ಬಂಡವಾಳಶಾಹಿಗಳು ತಮ್ಮ ಹಿತಾಸಕ್ತಿಗಳಿಂದಾಗಿ ಬ್ರಿಟಿಶ್ ಬಂಡವಾಳಶಾಹಿಗಳೊಂದಿಗೆ ಪೂರ್ಣವಾಗಿ ಹೋರಾಡಲು ಸಿದ್ಧರಿರಲಿಲ್ಲ. ಏಕೆಂದರೆ ಅವರು ತಮ್ಮ ಮಿತ್ರರು, ಸಹ ಉದ್ಯಮಿಗಳಾಗುವ ಸಾಧ್ಯತೆಯಿತ್ತು. ಜಪಾನ್, ರಶ್ಯಾದಂತಹ ಕೈಗಾರಿಕಾ ಬೆಳವಣಿಗೆ ಅವರಿಗೆ ಬೇಕಾಗಿತ್ತು. ಆದರೆ ತಮ್ಮ ಬಂಡವಾಳ ತಮಗೇ ಉಳಿಯಬೇಕು ಎಂಬ ಆಶಯವೂ ಇತ್ತು. ಆದ್ದರಿಂದ ನೆಹರೂ ಮಾರ್ಗ ಬಂತು. ಭಾರತೀಯ ಜನ ಸಮೂಹಗಳು(ವಿಶೇಷವಾಗಿ ಗ್ರಾಮಾಂತರ ಜನರು) ಇಲ್ಲದೆ ಸ್ವಾತಂತ್ರ್ಯಪಡೆಯಲು ಸಾಧ್ಯವಿಲ್ಲ ಎಂದು ಅವರಿಗೆ ಗೊತ್ತಿತ್ತು. ಅವರನ್ನೆಲ್ಲಾ ಅಣಿನೆರೆಸಲು ಅವರಿಗೆ ಮಹಾತ್ಮರೂ ಬೇಕಿದ್ದರು.


ಇಂತಹ ಹಿನ್ನೆಲೆಯಲ್ಲಿ 1947 ರಲ್ಲಿ ಭಾರತದ ಸ್ವಾತಂತ್ರ್ಯ ಬಂತು; ಜವಾಹರಲಾಲ್ ನೆಹರೂರವರು 'ಅದೃಷ್ಟದೊಡನೆ ಸಮಾಗಮ'ದ ಭಾಷಣ ನೀಡಿದರು.

ಕಾರ್ಮಿಕ ವರ್ಗದ ಅನುಭವ

ಕಾರ್ಮಿಕ ವರ್ಗಕ್ಕೆ ಸ್ವಾತಂತ್ರ್ಯದ ಸ್ವರ್ಣ ಜಯಂತಿ ಸ್ವತಂತ್ರ ಭಾರತದಲ್ಲಿ ಕಾರ್ಮಿಕ ವರ್ಗದ ಶೋಷಣೆಯ ಸ್ವರ್ಣಜಯಂತಿ ಕೂಡಾ. ಇದು ದೇಶೀ ಬಂಡವಾಳಶಾಹಿ - ಭೂಮಾಲಕರು ನಡೆಸುತ್ತಿರುವ, ಸಾಮ್ರಾಜ್ಯಶಾಹಿ ಇನ್ನಷ್ಟು ಶಕ್ತಿಯುತಗೊಳಿಸಿರುವ ಶೋಷಣೆಯ ನೊಗವನ್ನು ಕಿತ್ತೆಸೆಯುವ ಸುವರ್ಣಾವಕಾಶ ಕೂಡ.

ಕಾರ್ಮಿಕ ವರ್ಗಕ್ಕೆ 15 ಆಗಸ್ಟ್ 1947 ರ "ಅದೃಷ್ಟದೊಂದಿಗೆ ಸಮಾಗಮ'ದ ಭಾಷಣದಲ್ಲಿ ವಿಶ್ವಾಸವಿರಲಿಲ್ಲ ಎಂದು ಸರ್ವವಿದಿತ. 50 ವರ್ಷಗಳ ಹಿಂದಿನ ನೆಹರೂರವರ ಪ್ರಖ್ಯಾತ ಭಾಷಣದಲ್ಲಿ ಅವರು ಮಹಾತ್ಮಗಾಂಧಿಯವರ 'ಪ್ರತಿಯೊಂದು ಕಣ್ಣಿನಿಂದ ಪ್ರತಿಯೊಂದು ಕಣ್ಣೀರನ್ನು ಒರೆಸುವ' ಮಾತನ್ನಾಡಿದರು. ಆದರೆ ಸ್ವತಂತ್ರ ಭಾರತದ ಆಳರಸರು ಕಣ್ಣುಗಳಿಂದ ಎಷ್ಟು ಕಣ್ಣೀರನ್ನು ಒರೆಸಬೇಕಾಗಿತ್ತೋ ಅದಕ್ಕಿಂತ ಹೆಚ್ಚು ಕಣ್ಣೀರನ್ನು ಕೋಟ್ಯಾಂತರ ಜನಗಳು ಸುರಿಸುವಂತೆ ಮಾಡಿದ್ದಾರೆ.

ನಿಜ, ಜವಾಹರಲಾಲರು 1964 ರಲ್ಲಿ ಸಾಯುವ ಮೊದಲು ಸ್ವಾತಂತ್ರ್ಯದ ಮೊದಲೆರಡು ದಶಕಗಳಲ್ಲಿ ಅನುಸರಿಸಿದ ಧೋರಣೆಗಳಿಂದ ಕಾರ್ಮಿಕವರ್ಗದ ಅಥವಾ ರೈತಾಪಿ ಜನಗಳ ಒಂದು ವಿಭಾಗ ಪ್ರಯೋಜನ ಪಡೆಯಿತು. ಅವರು 'ಆಧುನಿಕ ದೇವಸ್ಥಾನಗಳು' ಎಂದು ಇನ್ನೊಂದು ಮನತಟ್ಟುವ ಭಾಷಣದಲ್ಲಿ ವರ್ಣಿಸುತ್ತಾ ದೇಶಕ್ಕೆ ಸಮರ್ಪಿಸಿದ ಭಾಕ್ರಾ-ನಂಗಲ್‌ನಂತಹ ಕಾಮಗಾರಿಗಳನ್ನು ರೂಪಿಸಿ ಜಾರಿಗೆ ತಂದರು. "ಮಿಲಿಯಾಂತರ ಶ್ರಮ ಜೀವಿ ಜನ ಇತರ ಮಾನವ ಜೀವಿಗಳಿಗಾಗಿ ಬೆವರು ಸುರಿಸಿದ ಜಾಗಗಳಿವು" ಎಂದರು ಅವರು. ನಿಜ, ಭಾಕ್ರಾ-ನಂಗಲ್‌ನಲ್ಲಿ ಸಾವಿರಾರು ಕೂಲಿ ಆಳುಗಳ ಶ್ರಮದಿಂದ ಲಕ್ಷಾಂತರ ಪಂಜಾಬೀ, ರಾಜಸ್ತಾನಿ



ಸ್ವಾತಂತ್ರ್ಯ ಹೋರಾಟದಲ್ಲಿ ಕಾಂಗ್ರೆಸ್ ರಚಿಸಿದ ಯೋಜನಾಆಯೋಗದ ಸಭೆಯಲ್ಲಿ ನೆಹರೂ, ಬೋಸ್‌ರೊಂದಿಗೆ ಮೈಸೂರು ಸಂಸ್ಥಾನದ ವಿಶ್ವೇಶ್ವರಯ್ಯನವರು

ರೈತರು ಲಾಭ ಪಡೆದರು. ಅದು ನಂತರ ಗ್ರಾಮೀಣ ಪಂಜಾಬನ್ನೇ ಬದಲಿಸಿತು.

ಆರಂಭದ ಬೆಳವಣಿಗೆ

ಅದೇ ರೀತಿ ಕೈಗಾರಿಕಾ ಬೆಳವಣಿಗೆಯೂ ವಾಹನ ತಯಾರಿಕೆಯಿಂದ ಒಂದು ಹೊಸ ಪ್ರೋತ್ಸಾಹ ಪಡೆಯಿತು. ವಿದೇಶೀ ಸಹಯೋಗದೊಂದಿಗೆ ಹಲವಾರು ಕಾರುಗಳು, ಜೀಪುಗಳು ತಯಾರಾಗಲಾರಂಭಿಸಿದವು. ಮಹೀಂದ್ರ ಅಂಡ್ ಮಹೀಂದ್ರ ವಿಲ್ಸ್ ಜೀಪ್‌ಗಳನ್ನು (1949), ವಾಲ್‌ಚಂದ್ ಹೀರಾಚಂದ್(ಪ್ರೀಮಿಯರ್ ಆಟೋ ಮೊಬೈಲ್ಸ್)ಫಿಯಟ್ ಕಾರ್‌ಗಳನ್ನು (1950), ಟಾಟಾ ಗುಂಪಿನ ಟೆಲ್ಕೋ ಬೆಂಝ್ ಜೊತೆಗೂಡಿ ವಾಣಿಜ್ಯ ವಾಹನಗಳನ್ನು(1954), ಕೊನೆಗೆ ಬಿರ್ಲಾರವರ ಹಿಂದೂಸ್ತಾನ ಮೋಟಾರ್ಸ್ ಅಂಬಾಸಿಡರ್ ಕಾರುಗಳನ್ನು(1957) ಉತ್ಪಾದಿಸಲಾರಂಭಿಸಿದರು. ವಾಹನ ಉತ್ಪಾದನೆಯ ಉದ್ದಿಮೆಯಿಂದ ಸಹಜವಾಗಿಯೇ ಇಂಜಿನಿಯರಿಂಗ್, ಕಬ್ಬಿಣ-ಉಕ್ಕು, ವಾಹನ ಬಿಡಿ ಭಾಗಗಳು, ವಿದ್ಯುತ್ ಮತ್ತಿತರ ಫಿಟ್ಟಿಂಗ್‌ಗಳು ಇತ್ಯಾದಿಗಳನ್ನು ಉತ್ಪಾದಿಸುವ ಉದ್ದಿಮೆಗಳು ಬಂದವು.

1952 ರಲ್ಲಿ ಅಣುಶಕ್ತಿ ಆಯೋಗ ರಚನೆಗೊಂಡು, ಟ್ರಾಂಬೆ ರಿಯಾಕ್ಟರ್ ಬೇಗನೇ ರೂಪುಗೊಂಡಿತು. 1953 ರಲ್ಲಿ ಖಾಸಗೀ ವಿಮಾನಯಾನಗಳನ್ನು ರಾಷ್ಟ್ರೀಕರಿಸಲಾಯಿತು. 1959 ರಲ್ಲಿ ತೈಲ ಮತ್ತು ನೈಸರ್ಗಿಕ ಅನಿಲ ಆಯೋಗ ರಚನೆಯಾಯಿತು.

ಇವೆಲ್ಲದರ ಜತೆ-ಜತೆಗೆ ಸಾರ್ವಜನಿಕ ಹಣಕಾಸು ಸಂಸ್ಥೆಗಳೂ ಅಭಿವೃದ್ಧಿಗೊಂಡವು. 1948 ರಲ್ಲೇ ಕೈಗಾರಿಗಾ ಹಣಕಾಸು ಕಾರ್ಪೋರೇಶನ್ ರಚಿಸಿ ಉದ್ದಿಮೆಗಳಿಗೆ ದೀರ್ಘಾವಧಿಯ ಹಣಕಾಸು ನೆರವು ಕೊಡುವ ವ್ಯವಸ್ಥೆ ರೂಪಿಸಲಾಯಿತು. ಅದೇ ವರ್ಷ ಭಾರತೀಯ ರಿಝರ್ವ್‌ಬ್ಯಾಂಕ್ ಅಸ್ತಿತ್ವಕ್ಕೆ ಬಂತು. 1954 ರಲ್ಲಿ ಇಂಪೀರಿಯಲ್ ಬ್ಯಾಂಕನ್ನು ವಹಿಸಿಕೊಂಡು ಸ್ಟೇಟ್ ಬ್ಯಾಂಕ್ ಇಂಡಿಯಾ ಸ್ಥಾಪನೆಯಾಯಿತು. 1955 ರಲ್ಲಿ ಕೈಗಾರಿಕಾ ಸಾಲ ಮತ್ತು ಬಂಡವಾಳ ಕಾರ್ಪೋರೇಷನ್(ಐಸಿಐಸಿಐ) ರಚನೆಯಾಯಿತು. ಜನವರಿ 1956 ರಲ್ಲಿ ಜೀವ ವಿಮೆಯ ರಾಷ್ಟ್ರೀಕರಣವಾಯಿತು. ಸಾರ್ವಜನಿಕ ಹಣಕಾಸು ಸಂಸ್ಥೆಗಳು ಮತ್ತು ಖಾಸಗೀ ಉದ್ದಿಮೆಗಳು ಜತೆ ಜತೆಗೇ ಬೆಳೆದವು. ಈ ಸಂಸ್ಥೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರು ಮತ್ತು 1956ರ ಕೈಗಾರಿಕಾ ಧೋರಣೆಯ ನಿರ್ಣಯದ ಪ್ರಕಾರ ಸ್ಥಾಪನೆಗೊಂಡ ಸಾರ್ವಜನಿಕ ವಲಯದ ಉದ್ದಿಮೆಗಳಲ್ಲಿ ದುಡಿಯಲಾರಂಭಿಸಿದ ಕಾರ್ಮಿಕರು ತೀವ್ರ ಹೋರಾಟದ ನಂತರ ಇತರರಿಗೆ ಹೋಲಿಸಿದರೆ ಸಾಕಷ್ಟು ಉತ್ತಮ ಜೀವನ ಮಟ್ಟ ಪಡೆಯುವಂತಾಯಿತು.

ನೆಹರೂ ನಂತರ

ಜವಾಹರಲಾಲ್ ನೆಹರೂರವರ ಕೈಗಾರಿಕಾ ಅಭಿವೃದ್ಧಿಯ ನೀತಿಗಳನ್ನು ಅವರ ಮಗಳು ಮುಂದುವರಿಸಿದರು. 1977 ರಲ್ಲಿ ಮಧ್ಯೆ ಸೋಲನುಭವಿಸಿ 1980 ರವರೆಗೆ ಅಧಿಕಾರದಿಂದ ಹೊರಗಿದ್ದದ್ದು ಬಿಟ್ಟರೆ 1967 ರಿಂದ 1985 ರ ವರೆಗೆ ಭಾರತದ ರಾಜಕಾರಣದಲ್ಲಿ ಪ್ರಭಾವ ಬೀರಿದ ಇಂದಿರಾಗಾಂಧಿ ಜುಲೈ 1969 ರಲ್ಲಿ ಬ್ಯಾಂಕುಗಳನ್ನು ರಾಷ್ಟ್ರೀಕರಿಸಿದರು. 1971 ರಲ್ಲಿ ಸಾಮಾನ್ಯ ವಿಮೆಯನ್ನು ರಾಷ್ಟ್ರೀಕರಿಸಿದರು. ಈ ಅವಧಿಯಲ್ಲೇ ಬಾಂಬೆ ಹೈನಲ್ಲಿ ತೈಲ ಪತ್ತೆ(1973)ಯಾಯಿತು. ನೂರಕ್ಕೂ ಹೆಚ್ಚು ರೋಗಗ್ರಸ್ತ ಗಿರಣಿಗಳನ್ನು ವಹಿಸಿಕೊಂಡು ಎನ್.ಟಿ.ಸಿ. ಅಸ್ತಿತ್ವಕ್ಕೆ ಬಂತು. 1973 ರಲ್ಲಿ ಕಲ್ಲಿದ್ದಲು ಗಣಿಗಳ ರಾಷ್ಟ್ರೀಕರಣವಾಯಿತು. 1969 ರಲ್ಲಿ ಎಂಆರ್‌ಟಿಪಿ ಶಾಸನ ತಂದು ಗುತ್ತೇದಾರಿಗಳ ಮೇಲೆ ಹಾಗೂ ಎಫ್‌ಇಆರ್‌ಎ (ಫೆರಾ)ಶಾಸನ(1973) ತಂದು ವಿದೇಶೀ ಬಹುರಾಷ್ಟ್ರೀಯ ಕಂಪನಿಗಳ ಮೇಲೆ ಮಿತಿ ಹಾಕುವ ಪ್ರಯತ್ನ ನಡೆಯಿತು. ಈ ಅವಧಿಯಲ್ಲೇ ಐದು ದೊಡ್ಡ ಸಾರ್ವಜನಿಕ ವಲಯದ ಉಕ್ಕು ಕಂಪನಿಗಳನ್ನು ಸೇರಿಸಿ ಎಸ್‌ಎಐಎಲ್ (ಭಾರತ ಉಕ್ಕು ಪ್ರಾಧಿಕಾರ) ರಚನೆಯಾಯಿತು.

ಅದೇ ವೇಳೆಗೆ ರಾಜಕೀಯ ರಂಗದಲ್ಲಿ ಆಕೆ ಎಡಪಂಥದೊಂದಿಗೆ ಮುಖ್ಯವಾಗಿ ಸಿಪಿಐ(ಎಂ) ನೊಂದಿಗೆ ತಿಕ್ಕಾಟಕ್ಕಿಳಿದು ಅದನ್ನು ಇತರ ಎಡಶಕ್ತಿಗಳಿಂದ ಪ್ರತ್ಯೇಕಿಸಿ ಅತ್ಯಂತ ನಿರ್ದಯ ಧಾಳಿಗೊಳಪಡಿಸಿ ಎಡಶಕ್ತಿಗಳ ಅತ್ಯಂತ ಕೆಟ್ಟ ಶತ್ರುವಾದರು. ಒಂದೆಡೆ ಎಡ ಶಕ್ತಿಗಳ ಮೇಲೆ ಧಾಳಿ ಮಾಡಿ ಇನ್ನೊಂದೆಡೆ ಸಂಘಟಿತ ಕಾರ್ಮಿಕ ವರ್ಗಕ್ಕೆ ಆಮಿಷಗಳನ್ನೊಡ್ಡುವ ನೀತಿಯನ್ನು ಅನುಸರಿಸಿದರು. ಜೊತೆಗೆ 1973 ರಲ್ಲಿ ಕಡ್ಡಾಯ ಠೇವಣಿ ಯೋಜನೆ ತಂದು ಸಂಘಟಿತ ಕಾರ್ಮಿಕ ವರ್ಗದ ವೇತನ ಹೆಚ್ಚಳ ಹಾಗೂ ತುಟ್ಟಿಭತ್ಯೆ ಹೆಚ್ಚಳದ ಅರ್ಧ ಭಾಗ ಕಡ್ಡಾಯವಾಗಿ ಈ ಠೇವಣಿಗೆ ಬರುವಂತೆ ಬಲವಂತ ಮಾಡಲಾಯಿತು. ಹಣಕಾಸು ವಲಯದ ನೌಕರರ, ಸಾರ್ವಜನಿಕ ವಲಯದ ನೌಕರರ, ವಿಶೇಷವಾಗಿ ಬೆಂಗಳೂರಿನ ಘಟಕಗಳ ನೌಕರರ ದಮನಕ್ಕೆ ಸರ್ವಪ್ರಯತ್ನ ನಡೆಸಿದರು. ಇದರಿಂದಾಗಿ 1981-82 ರ ಚಾರಿತ್ರಿಕ ಮುಷ್ಕರ ನಡೆಯಿತು. ಸಂಘಟಿತ ಕಾರ್ಮಿಕ ವರ್ಗ ಆಕೆಯ ಆಡಳಿತದಲ್ಲಿ ಬಹಳಷ್ಟು ಕಷ್ಟನಷ್ಟ ಅನುಭವಿಸಬೇಕಾಯಿತು. 1971 ರ ಸಂಸದೀಯ ಚುನಾವಣೆಗಳ ನಂತರ ಪಶ್ಚಿಮ ಬಂಗಾಳ 1971-77 ರ ಅವಧಿಯಲ್ಲಿ ಅನುಭವಿಸಿದ ಅರೆ-ಫ್ಯಾಸಿಸ್ಟ್ ದಬ್ಬಾಳಿಕೆ ಆಕೆಯಿಂದಾಗಿಯೇ ನಡೆಯಿತು. ಇದಲ್ಲಿ ಸಿಪಿಐ ನ ಚಂಚಲತೆ ಹಾಗೂ ಆಕೆಯ ಜತೆಗೂಡಿದ್ದ ಎಲ್ಲರಿಗೂ ಗೊತ್ತಿದೆ.

50 ವರ್ಷಗಳ ಹಿಂದಿನ ನೆಹರೂರವರ ಪ್ರಖ್ಯಾತ ಭಾಷಣದಲ್ಲಿ ಅವರು ಮಹಾತ್ಮಗಾಂಧಿಯವರ 'ಪ್ರತಿಯೊಂದು ಕಣ್ಣಿನಿಂದ ಪ್ರತಿಯೊಂದು ಕಣ್ಣೀರನ್ನು ಒರೆಸುವ' ಮಾತನ್ನಾಡಿದರು. ಆದರೆ ಸ್ವತಂತ್ರ ಭಾರತದ ಆಳರಸರು ಕಣ್ಣುಗಳಿಂದ ಎಷ್ಟು ಕಣ್ಣೀರನ್ನು ಒರೆಸಬೇಕಾಗಿತ್ತೋ ಅದಕ್ಕಿಂತ ಹೆಚ್ಚು ಕಣ್ಣೀರನ್ನು ಕೋಟ್ಯಾಂತರ ಜನಗಳು ಸುರಿಸುವಂತೆ ಮಾಡಿದ್ದಾರೆ.

ಆದರೂ ನೆಹರೂ-ಇಂದಿರಾಗಾಂಧಿಯ ಒಂದು ಸ್ವಾವಲಂಬೀ ಭಾರತವನ್ನು ಬೆಳೆಸುವ ಧೋರಣೆಗಳು ಕಾರ್ಮಿಕ ವರ್ಗಕ್ಕೂ ಪ್ರಯೋಜನ ತಂದವು ಎಂದು ಖಂಡಿತವಾಗಿಯೂ ಹೇಳಬಹುದು. ನಿಜ, ಸಂಘಟಿತ ಕಾರ್ಮಿಕ ವರ್ಗ ತೀವ್ರ ಹೋರಾಟ ನಡೆಸಬೇಕಾಯಿತು. ಆದರೆ ಇದರಿಂದ ಅದರ ಬಲವೂ ಹೆಚ್ಚಿತು. 1971 ರಲ್ಲಿ ಸಿಐಟಿಯು ಸ್ಥಾಪನೆಯಾಯಿತು, ಸಿಪಿಐ(ಎಂ) ಹೆಮ್ಮೆಯ ಸ್ಥಾನ ಗಳಿಸಿತು, ವಿಶೇಷವಾಗಿ ಬಂಗಾಳದಲ್ಲಿ.

ಈ ತೀವ್ರ ಹೋರಾಟ, ನೆಹರೂ ಮಾದರಿ ಅಭಿವೃದ್ಧಿ ವಿಧಾನವನ್ನು ಮುಂದುವರಿಸಿದ ಇಂದಿರಾಗಾಂಧಿ ನೀತಿ, ಎಡ ಮತ್ತು ಬಲ ಪಂಥೀಯ ಶಕ್ತಿಗಳೊಂದಿಗೆ ಆಕೆಯ ತಿಕ್ಕಾಟ ಹಾಗೂ ಅಭಿವೃದ್ಧಿಯ ಫಲಗಳನ್ನು ಕಾರ್ಮಿಕ ವರ್ಗಕ್ಕೆ ನಿರಾಕರಿಸದೆ ಇರುವಂತೆ ಮಾಡುವ ಸಿಪಿಐ(ಎಂ)ನ ನೇತೃತ್ವದ ಹೋರಾಟ ಇವೆಲ್ಲದರಿಂದ ಒಂದು ವಿಶಿಷ್ಟ ಸನ್ನಿವೇಶ ನಿರ್ಮಾಣವಾಯಿತು. ಮೊದಲು ಬಂಗಾಳದಲ್ಲಿ, ನಂತರ ದೇಶಾದ್ಯಂತ ತುರ್ತುಪರಿಸ್ಥಿತಿ, ಕೊನೆಗೆ 1977 ಇಂದಿರಾಗಾಂಧಿ ಪತನಕ್ಕೆ ಕಾರಣವಾಯಿತು.

ಸ್ವಾತಂತ್ರ್ಯದ ಬೆಳ್ಳಿ ಹಬ್ಬ ಬಂದಾಗ ನೆಹರೂ ದಾರಿಯನ್ನು ಕ್ರೋಢೀಕರಿಸುವ ಪ್ರಯತ್ನ ಮಗಳಿಂದ ನಡೆಯಿತು. ಆದರೆ ಇದರಲ್ಲಿ ಆಕೆಯ ವಿಶೇಷ ಛಾಪೂ ಇತ್ತು. ತನ್ನ ಎಡಪಂಥೀಯ ಹಾಗೂ ಬಲಪಂಥೀಯ ಟೀಕಾಕಾರರ ಮೇಲೆ ನೇರವಾಗಿ ಧಾಳಿ ಮಾಡಿದರು. ಸಿಪಿಐ(ಎಂ) ಮತ್ತು ಅದರ ಜತೆಗಿದ್ದ ಎಡ ಪಂಥೀಯರು ಕಾರ್ಮಿಕ ವರ್ಗದ ಮೇಲೆ ಧಾಳಿ ಮಾಡಿದ ಕಾರಣಕ್ಕಾಗಿ, ಕೇರಳ, ಪಶ್ಚಿಮಬಂಗಾಳಗಳ ಮೇಲೆ ಧಾಳಿ ಮಾಡಿದ್ದಕ್ಕಾಗಿ ವಿರೋಧಿಸಿದರೆ, ಬಲಪಂಥೀಯರು ಆಕೆ 'ಕಮ್ಯುನಿಸ್ಟ್ ಒಲವಿ'ನವರೆಂಬ ಸಂದೇಹದಿಂದ(ಬ್ಯಾಂಕ್ ರಾಷ್ಟ್ರೀಕರಣ, ರಾಜಧನ ರದ್ಧತಿ, ಫೆರಾ ಇತ್ಯಾದಿ ಕಾನೂನುಗಳು)ವಿರೋಧಿಸಿದರು. ಆದರೆ ಆಕೆ ನಡೆಸಿದ ಪ್ರಜಾಪ್ರಭುತ್ವ ಹಕ್ಕುಗಳ ದಮನ ಇವೆರಡೂ ಶಕ್ತಿಗಳನ್ನೂ ಒಟ್ಟಿಗೆ ತಂದು 1977 ರ ಚಾರಿತ್ರಿಕ ಚುನಾವಣೆಯಲ್ಲಿ ಇಂದಿರಾಗಾಂಧಿ ಸೋಲುವಂತಾಯಿತು.

1977 ನಂತರ

ತುರ್ತುಪರಿಸ್ಥಿತಿ ಮುಗಿಯಿತು. ಪ್ರಜಾಪ್ರಭುತ್ವ



ಆಗಸ್ಟ್ 15 ರ ಪ್ರಖ್ಯಾತ 'ಅದೃಷ್ಟದೊಂದಿಗೆ ಸಮಾಗಮ' ಭಾಷಣ

ಹಕ್ಕುಗಳ ಮರು ಸ್ಥಾಪನೆಯಾಯಿತು. ಆಗ ಬಹುಪಾಲು ಎಲ್ಲಾ ಬಲಪಂಥೀಯ ಶಕ್ತಿಗಳನ್ನು-ಭಾರತೀಯ ಜನಸಂಘ, ಕಾಂಗ್ರೆಸ್(ಐ), ಲೋಕದಳ - ಹೊಂದಿದ್ದ ಹಾಗೂ ಬಲಪಂಥೀಯರೊಂದಿಗೆ ಸೇರಿಕೊಳ್ಳುವ ಸಮಯಸಾಧಕ "ಎಡವಾದಿ"ಗಳನ್ನು (ಸೋಷಲಿಸ್ಟರು) ಹೊಂದಿದ್ದ ಜನತಾಪಾರ್ಟಿ ಎರಡೂವರೆ ವರ್ಷ ಆಳ್ವಿಕೆ ನಡೆಸಿ ಆಂತರಿಕ ವೈರುಧ್ಯಗಳು ಹಾಗೂ ಹೊರಗಿನ ಹಲ್ಲೆಗಳಿಂದಾಗಿ ಕುಸಿದುಬಿತ್ತು.

1977 ರಲ್ಲಿ ಅಂತ್ಯಗೊಂಡ ಅವಧಿ ಒಂದು ರೀತಿಯಲ್ಲಿ ನೆಹರೂ ಯುಗವೆನ್ನಬಹುದು - ನಿಜ, ಕೊನೆಯಲ್ಲಿ ಜನ ಪ್ರತಿರೋಧಿಸಿದ ಇಂದಿರಾಗಾಂಧಿಯ ಛಾಪೂ ಅದರ ಮೇಲಿತ್ತು. ಜನತಾ ಪಾರ್ಟಿಯನ್ನು ರಚಿಸಿಕೊಂಡ ಮೇಲೆ ಹೇಳಿದ ಶಕ್ತಿಗಳು ನೆಹರೂ ದಾರಿಯ ಟೀಕಾಕಾರರಾಗಿದ್ದವರು. ಈ ಶಕ್ತಿಗಳು ಅಭಿವೃದ್ಧಿ ಕುರಿತಂತೆ ತಮ್ಮ - ತಮ್ಮದೇ ಆದ ಗೊಂದಲಗಳನ್ನು ಹೊಂದಿದ್ದವು.

1980 ರಲ್ಲಿ ಮತ್ತೆ ಅಧಿಕಾರಕ್ಕೆ ಬಂದ ಇಂದಿರಾಗಾಂಧಿ ಈ ಮೊದಲಿನಂತೆ ನೆಹರೂ ದಾರಿ ಮುಂದುವರಿಸಲಿಲ್ಲ. ನಂತರ 1985 ರಲ್ಲಿ ಬಂದ ಆಕೆಯ ಮಗ ರಾಜೀವ್ ಗಾಂಧಿ ಕೂಡಾ ಈ ದಾರಿ ಮುಂದುವರಿಸಲಿಲ್ಲ. ವಿಶ್ವದ ದೃಶ್ಯವೂ ಬದಲಾಗುತ್ತಿತ್ತು. ವೈಜ್ಞಾನಿಕ ಮತ್ತು ತಂತ್ರಜ್ಞಾನದ ಕ್ರಾಂತಿಯಿಂದಾಗಿ ಸಾಮ್ರಾಜ್ಯಶಾಹಿಗಳು ಹಾಗೂ ವಿಶ್ವ ಹಣಕಾಸು ಬಂಡವಾಳಶಾಹಿಗಳು ತಮ್ಮದೇ ಅಜೆಂಡಾ ರೂಪಿಸಿಕೊಂಡರು. ವಿಶ್ವಬ್ಯಾಂಕ್-ಐಎಂಎಫ್ ವ್ಯವಸ್ಥೆಯ ಮೂಲಕ ಇದನ್ನು ಹೇರಲಾರಂಭವಾಯಿತು. 1980 ರಲ್ಲಿ ಇಂದಿರಾಗಾಂಧಿ ಈ ಆಮಿಷವನ್ನು ನುಂಗಿ ಐಎಂಎಫ್ ಸಾಲಕ್ಕೆ ಕೈಯೊಡ್ಡಿದರು. ಅದರ ಬೆನ್ನ ಹಿಂದೆಯೇ 21 ಶತಮಾನಕ್ಕೆ ನೆಗೆಯುವ ಹೆಸರಲ್ಲಿ ರಾಜೀವ್ ಗಾಂಧಿ 'ಆಮದು ರಾಜ್ಯ' ಆರಂಭಿಸಿದರು. ರಾಜೀವ್ ಗಾಂಧಿ ಮುಂದಿಟ್ಟದ್ದು ತ್ವರಿತ ಆಧುನೀಕರಣದ ಚಿತ್ರ, ಫಲವಾಗಿ ಆದದ್ದು ತ್ವರಿತ ಪುನರ್ರಚನೆ. ವಿ.ಪಿ.ಸಿಂಗರ 1989-90 ರ ಅಲ್ಪ ಅವಧಿ ಬೆಳವಣಿಗೆಯ ದಾರಿಯ ಮೇಲೆ ಅಂತಹ ಪ್ರಭಾವವನ್ನೇನೂ ಬೀರಲಿಲ್ಲ. ಅವರ ಮುಖ್ಯ ಕೊಡುಗೆಯೆಂದರೆ ಒಂದೆಡೆ ಭ್ರಷ್ಟಾಚಾರವನ್ನು ಬಯಲಿಗೆಳೆದದ್ದು, ಇನ್ನೊಂದೆಡೆ ಕೋಮುವಾದದ ಬೆದರಿಕೆಗೆ ಎದೆಯೊಡ್ಡಿ ಸಂತು ಜಾತ್ಯಾತೀತತೆಗಾಗಿ ಪ್ರಧಾನಿ ಮಂತ್ರಿ ಪಟ್ಟವನ್ನೂ ಬಲಿ ಕೊಟ್ಟದ್ದು.

ನೆಹರೂ ಮಾದರಿ ಬೆಳವಣಿಗೆಯನ್ನು ಕಳಚಿ ಹಾಕುವ ಪಾತ್ರ ಇನ್ನೊಬ್ಬ 'ನೆಹರೂ ವಾದಿ' ಪಿ.ವಿ.ನರಸಿಂಹರಾಯರ ಪಾಲಿಗೆ ಬಂತು. ಇದರಲ್ಲಿ ಅವರ ನೆರವಿಗೆ ಬಂದವರು ಐಎಂಎಫ್ ಬೆಂಬಲಿತ, ಹಿಂದೆ 'ಎಡ ಪಂಥೀಯ' ಭಾಷೆಯಲ್ಲಿ ಮಾತನಾಡುತ್ತಿದ್ದ, ಅಧಿಕಾರಶಾಹಿಯಿಂದ ರಾಜಕಾರಣಿಯಾದ ಮನಮೋಹನಸಿಂಗ್.

ಜನತಾದಳ ನೇತೃತ್ವದ ಸಂಯುಕ್ತ ರಂಗ ಅಂದರೆ ಬಿಜೆಪಿಯಿಲ್ಲದ ಜನತಾಪಾರ್ಟಿಯ ಪ್ರಯೋಗದ ಪುನರಾವರ್ತನೆ ಈಗ ನರಸಿಂಹರಾಯರ ಆರ್ಥಿಕ ನೀತಿಗಿಂತ ಬಹಳ ಭಿನ್ನವಲ್ಲದ ಆರ್ಥಿಕ ನೀತಿಗಳನ್ನು ಅನುಸರಿಸುತ್ತಿದೆ.

ಮುಂದಿನ ದಾರಿ ಯಾವುದು?


ಈಗ ನಾವು ಭಾರತ ಅನುಸರಿಸಬೇಕಾದ ಬೆಳವಣಿಗೆಯ ದಾರಿಯನ್ನು ಸಂಕ್ಷಿಪ್ತವಾಗಿ ನೆನಪಿಸಿಕೊಂಡು ಈ ರಂಗದಲ್ಲಿ ನಡೆಯುತ್ತಾ ಬಂದಿರುವ ಹೋರಾಟಗಳನ್ನು ಗಮನಿಸಿ ಒಂದು ಹೊಸ ದಾರಿ ಹೇಗೆ ಮೂಡಿಬರಬೇಕು ಎಂಬುದನ್ನು ಇಡೀ ಕಾರ್ಮಿಕ ವರ್ಗದ ಪರಿಸ್ಥಿತಿ ಹಾಗೂ ಪ್ರಸ್ತುತ ಸಂದರ್ಭದಲ್ಲಿ ಹಾಗೂ ಭವಿಷ್ಯದಲ್ಲಿ ಅದರ ಪಾತ್ರದ ಬಗ್ಗೆ ಕಂಡರಿಸಬಹುದು.

ಸ್ವಾತಂತ್ರ್ಯ ಪೂರ್ವದಲ್ಲಿ ರಾಷ್ಟ್ರೀಯ ಬಂಡವಾಳ ಶಾಹಿಗಳ ನೇತೃತ್ವದಲ್ಲಿ ಆಧುನೀಕರಣಕ್ಕೆ ಪ್ರಯತ್ನಿಸಿದ ಭಾರತವನ್ನು ನೋಡಿದ್ದೇವೆ. ಅದರಲ್ಲಿ ವಿದೇಶಿ ಉದ್ದಿಮೆಗಳೊಂದಿಗೆ ಮೈತ್ರಿ, ಸ್ವತಂತ್ರ ರಾಷ್ಟ್ರೀಯ ಉದ್ದಿಮೆ ಹಾಗೂ ಗ್ರಾಮೀಣ ಆರ್ಥಿಕದೊಳಗೆ ಪಾರಂಪರಿಕ ಉದ್ದಿಮೆಯೊಳಗೆ ಕೈಯಾಡಿಸುವುದು - ಈ ಮೂರು ಅಂಶಗಳೂ ಇದ್ದವು. ಇವೆಲ್ಲಾ ಭಾರತದ ದೊಡ್ಡ ಬಂಡವಾಳಿಗರ ಬೆಳವಣಿಗೆಗೆ ನೆರವಾಯಿತು. ಈ ಬೆಳವಣಿಗೆಯೊಂದಿಗೇ, ಸಾರ್ವಜನಿಕ ವಲಯ, ಕಾರ್ಮಿಕ ವರ್ಗ, ಎಡಪಂಥ ಇತ್ಯಾದಿಗಳೂ ಇನ್ನಷ್ಟು ಬೆಳೆದವು. ಈ ಹಿನ್ನೆಲೆಯಲ್ಲಿ ಆವಡಿ ಸಮಾಜವಾದ ದೊಡ್ಡ ಬಂಡವಾಳಿಗರ ಹಿತಾಸಕ್ತಿಗಳನ್ನು ಈಡೇರಿಸುವಲ್ಲಿ ಸೀಮಿತ ಯಶಸ್ಸು ಗಳಿಸಿತು. ಅದು ಅವರಿಗೆ ಅಗ್ಗ ದರದಲ್ಲಿ ಮೂಲ ಸೌಕರ್ಯಗಳನ್ನು ಒದಗಿಸಿತು, ಕೊರತೆ ಹಣಕಾಸಿನ ಮೂಲಕ ಸಾರ್ವಜನಿಕ ಖರ್ಚಿನಿಂದ ಪೋಷಣೆ ಪಡೆಯುವ ಒಂದು ಆರ್ಥಿಕ ಅಧಾರವನ್ನು ಒದಗಿಸಿತು. ಇದರಿಂದ ಕಾರ್ಮಿಕ ವರ್ಗಗಳ ಒಂದು ಸಣ್ಣ ಸಂಘಟಿತ ವಿಭಾಗಕ್ಕಲ್ಲದೇ ಇತರರಿಗೆ ಪ್ರಯೋಜನವಾಗಲಿಲ್ಲ.

ಗಾಂಧೀಜಿಯ ಗ್ರಾಮೀಣ ಸ್ವಯಂಪೂರ್ಣ ವ್ಯವಸ್ಥೆಯನ್ನು ಗ್ರಾಮೀಣ ಅಭಿವೃದ್ಧಿ, ಪಂಚಾಯತೀ ರಾಜ್ಯ, ಹಸಿರು ಕ್ರಾಂತಿ ಇತ್ಯಾದಿಗಳ ಮೂಲಕ ಪರಿಷ್ಕರಿಸಿದ ಪ್ರಯತ್ನವೂ ದೊಡ್ಡ ಬಂಡವಾಳಶಾಹಿಗಳಿಗೆ ನೆರವಾಯಿತು. ಅದು ಅವರಿಗೆ ಕಚ್ಚಾ ಸಾಮಗ್ರಿಗಳನ್ನು ಹಾಗೂ ಅವರ ಉತ್ಪಾದನೆಗಳಿಗೆ ಬಳಕೆದಾರರನ್ನು ಒದಗಿಸಿತು. ಎಪ್ಪತ್ತರ ದಶಕದ ಅಂತ್ಯದ ವೇಳೆಗೆ ಗ್ರಾಮೀಣ ಶ್ರೀಮಂತರು ಎದ್ದು ನಿಂತದ್ದರಿಂದ ಭಾರತದ ರಾಜಕೀಯ ವ್ಯವಸ್ಥೆಯಲ್ಲಿ ಬಿರುಕುಂಟಾಯಿತು.

ದೊಡ್ಡ ಬಂಡವಾಳಿಗರು ಒಂದೆಡೆ ವಿದೇಶಿ ಹಣಕಾಸು ಬಂಡವಾಳದೊಡನೆ ಸಹಕರಿಸಿ ಇನ್ನೊಂದೆಡೆ ಭೂಮಾಲಕತ್ವದೊಂದಿಗೆ ದೃಢ ಮೈತ್ರಿ ಏರ್ಪಡಿಸಿಕೊಂಡಿರುವುದರ ವಿರುದ್ಧ ಸಿಪಿಐ(ಎಂ) ಮತ್ತು ಅದರ ಮಿತ್ರ ಶಕ್ತಿಗಳ ಪ್ರತಿರೋಧದಿಂದಾಗಿ ರಾಷ್ಟ್ರೀಯ ಅಭಿವೃದ್ಧಿಗಾಗಿ ಭಾರತೀಯ ಬಂಡವಾಳಶಾಹಿಗಳೊಂದಿಗೆ ಶಾಮೀಲಾಗುವ ಸಿಪಿಐ ದಾರಿಗೆ ಅವಕಾಶ ಕೊಡಲಿಲ್ಲ. ಇಂದಿರಾಗಾಂಧಿಯವರನ್ನು ಸಮರಕ್ಕೆ ಸೆಳೆದು ಆಕೆಯನ್ನು ಸೋಲಿಸಿ ಕೊನೆಗೆ ಕಾಂಗ್ರೆಸ್ ನ ಅಧಿಕಾರದ ಗುತ್ತೇದಾರಿಕೆಯನ್ನು ಮುರಿದು ಅದೇ ವೇಳೆಗೆ ಕೋಮುಶಕ್ತಿಗಳನ್ನು ದೂರವಿರಿಸಿ, ಭಾರತದ ರಾಜಕೀಯವನ್ನು ತೀವ್ರ ರೀತಿಯಲ್ಲಿ ಬದಲಿಸಲು ಪ್ರಯತ್ನಿಸಿದೆ. ಆದರೆ ಇವೆಲ್ಲದರಿಂದ ಇನ್ನೂ ಕಾರ್ಮಿಕ ವರ್ಗದ ಪರಿಸ್ಥಿತಿಯಲ್ಲಿ ತೀವ್ರ ಬದಲಾವಣೆ ಬರಲು ಸಾಧ್ಯವಾಗಿಲ್ಲ. ಇದು ಸಾಧ್ಯವಾಗಬೇಕಾದರೆ ಇಡೀ ಕಾರ್ಮಿಕ ವರ್ಗ ತಮ್ಮ ಹಿತಾಸಕ್ತಿಗಳ ರಕ್ಷಣೆಗೆ ಒಟ್ಟಾಗಿ ಕಾರ್ಯಾಚರಣೆಗಿಳಿಯಬೇಕು. ಹಾಗೂ ರಾಷ್ಟ್ರೀಯ ಕಾರ್ಯಕ್ರಮ ಏನಿರಬೇಕೆಂಬುದನ್ನು ಇಡೀ ಜನಸಾಮಾನ್ಯರ ಪರವಾಗಿ ಕಾರ್ಮಿಕ ವರ್ಗ ನಿರ್ಧರಿಸುವಂತಾಗಬೇಕು. ಈ ಕಾರ್ಯಾಚರಣೆ ವಿದೇಶಿ ಬಹುರಾಷ್ಟ್ರೀಯ ಕಂಪನಿಗಳ ಲಂಗುಲಗಾಮಿಲ್ಲದ ಪ್ರವೇಶವನ್ನು ವಿರೋಧಿಸಬೇಕು. ಮುಖಂಡತ್ವದಲ್ಲಿರುವ ದೊಡ್ಡ ಬಂಡವಾಳಿಗರು ವಿದೇಶಿ ಹಣಕಾಸು ಬಂಡವಾಳದೊಡನೆ ಹೊಂದಿರುವ ಶಾಮೀಲನ್ನು ಬಯಲಿಗೆಳೆಯಬೇಕು. ಗ್ರಾಮೀಣ ಪ್ರದೇಶಗಳಲ್ಲಿ ದೃಢ ಮಿತ್ರರನ್ನು ಬೆಳೆಸಬೇಕು. ಹಾಗೂ ರಾಷ್ಟ್ರೀಯ ಪುನರುಜ್ಜೀವನಕ್ಕೆ ಹೊಸದೊಂದು ಅಜೆಂಡಾವನ್ನು ಮುಂದಿಡಬೇಕು.


ಇವೆಲ್ಲ ಸಾಧ್ಯವಾಗಬೇಕಾದರೆ ಭಾರತ ಅಂಗೀಕರಿಸಬೇಕಾದ ಅಭಿವೃದ್ಧಿ ವಿಧಾನದ ಬಗ್ಗೆ ಗಂಭೀರ ಚರ್ಚೆ ನಡೆಯಬೇಕು. ಅದು 'ನೆಹರೂ ಮಾದರಿ' ವಿಧಾನವಾಗಲು ಸಾಧ್ಯವಿಲ್ಲ, 'ಗಾಂಧಿವಾದಿ ವಿಧಾನ'ವಾಗಲೂ ಸಾಧ್ಯವಿಲ್ಲ. ಇದು ಕಾರ್ಮಿಕ ವರ್ಗದ ಅಭಿವೃದ್ಧಿ ವಿಧಾನವಾಗಬೇಕು - ಈಗ ನಾವು ಪಡೆದಿರುವ ಸಾರ್ವಜನಿಕ ಮತ್ತು ಖಾಸಗಿ ಉದ್ದಿಮೆಗಳನ್ನೆಲ್ಲಾ ಉಳಿಸಿಕೊಂಡು ಅವನ್ನು ತ್ವರಿತವಾಗಿ ಬೆಳೆಸುವ, ಪಾರಂಪರಿಕ ಸಣ್ಣ ಹಾಗೂ ಮಧ್ಯಮ ಪ್ರಮಾಣದ ಉದ್ದಿಮೆಗಳನ್ನು ಕ್ರೋಢೀಕರಿಸುವ ಹಾಗೂ ಇವೆಲ್ಲಾ ನಗರಗಳ ಹಾಗೂ ಗ್ರಾಮೀಣ ದುಡಿಯುವ ಜನಗಳ ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಳ್ಳುವ ವಿಧಾನವಾಗಬೇಕು. ಸ್ವರ್ಣ ಜಯಂತಿಯ ಸಂದರ್ಭದಲ್ಲಿ ಈ ಬಗ್ಗೆ ನಿರ್ಣಯಿಸಲು ಇದೊಂದು ಸುವರ್ಣಾವಕಾಶ. ○



ವ್ಯಂಗ್ಯ ಚಿತ್ರ ಕೃಪೆ : ಇಂಡಿಯನ್ ಎಕ್ಸ್‌ಪ್ರೆಸ್

ಹುತಾತ್ಮರ ಕನಸುಗಳನ್ನು ಈಡೇರಿಸಬೇಕಾದರೆ........

ಸೀತಾರಾಂ ಯೆಚೂರಿ



ಸ್ವರ್ಣಜಯಂತಿ ಆಚರಣೆಯ ಸಂದರ್ಭದಲ್ಲಿ ನಮ್ಮ ರಾಷ್ಟ್ರಪತಿಗಳು, ಪ್ರಧಾನ ಮಂತ್ರಿಗಳ ಮಾತುಗಳು, ಕರೆಗಳು ಕೇವಲ ಸದ್ಭಾವನೆಯ ಘೋಷಣೆಗಳಾಗಿ ಉಳಿಯದೆ ಕಾರ್ಯರೂಪಕ್ಕೆ ಬರಬೇಕಾದರೆ ನಾವು ಸಾಗುತ್ತಿರುವ ದಿಕ್ಕಿನಲ್ಲಿ ಬದಲಾವಣೆಯಾಗಬೇಕು. ಪ್ರಜಾಸತ್ತಾತ್ಮಕ ಕ್ರಾಂತಿಯ ಅಪೂರ್ಣವಾಗುಳಿದ ಕರ್ತವ್ಯಗಳನ್ನು ಈಡೇರಿಸಿಕೊಂಡು ಹಸಿವು, ನಿರಕ್ಷರತೆ, ಅನಾರೋಗ್ಯಗಳಿಂದ ಮುಕ್ತವಾದ ಒಂದು ಸಮೃದ್ಧಶೀಲ ಭಾರತವನ್ನು ೨೧ ನೇ ಶತಮಾನಕ್ಕೊಯ್ಯುವುದೇ ಹುತಾತ್ಮರಿಗೆ ಸಲ್ಲಿಸಬಹುದಾದ ಅತ್ಯುತ್ತಮ ಕಾಣಿಕೆ

ದೇಶಾದ್ಯಂತ ಮತ್ತು ವಿಶ್ವಾದ್ಯಾಂತ ಭಾರತೀಯರು ಹೆಮ್ಮೆಯಿಂದ, ಸಂತೋಷ-ಸಡಗರಗಳಿಂದ ನಮ್ಮ ಸ್ವಾತಂತ್ರ್ಯದ ಸ್ವರ್ಣಜಯಂತಿಯನ್ನು ಆಚರಿಸಿದ್ದಾರೆ. ರಾಷ್ಟ್ರಪತಿ ಕೆ.ಆರ್.ನಾರಾಯಣನ್‌ರ ಮಾತುಗಳಲ್ಲಿ ಹೇಳುವುದಾದರೆ "ಹಿಂದಿನ ಸ್ಮರಣೆಗಳಿಂದ ತುಂಬಿದ ಹಾಗೂ ಭವಿಷ್ಯದ ಮಹತ್ವದಿಂದ ಮಿಡಿಯುತ್ತಿರುವ" ಹುಮ್ಮಸ್ಸು ಕಂಡುಬಂದಿದೆ. ಹಿಂದಿನ ಹುತಾತ್ಮರಿಗೆ, ನೆನಪುಗಳಿಗೆ ಕೃತಜ್ಞತಾಪೂರ್ವಕ ಶ್ರದ್ಧಾಂಜಲಿ ಅರ್ಪಿಸಿದ ಮೇಲೆ ಭವಿಷ್ಯವನ್ನು ರೂಪಿಸಲು ಸನ್ನಿವೇಶದ ವಿಶ್ಲೇಷಣೆ ಮಾಡಬೇಕಾದ ಸಮಯವಿದು.

ರಾಷ್ಟ್ರಪತಿಗಳೂ, ಪ್ರಧಾನ ಮಂತ್ರಿಗಳೂ ದೇಶವನ್ನುದ್ದೇಶಿಸಿ ಮಾಡಿದ ತಮ್ಮ ಭಾಷಣಗಳಲ್ಲಿ ನಮ್ಮ ಸಾಧನೆಗಳು ಹಾಗೂ ಸಮಸ್ಯೆಗಳ ಒಂದು ಜಮಾ-ಖರ್ಚನ್ನು ನೀಡಲು ಪ್ರಯತ್ನಿಸಿದರು. ಈ ಸಮಸ್ಯೆಗಳ ಪರಿಹಾರ ಹೇಗೆ ಎಂಬ ಈಗ ಚಿಂತನೆ ಅಗತ್ಯ.

ಮಧ್ಯರಾತ್ರಿಯ ಭಾಷಣದಲ್ಲಿ ರಾಷ್ಟ್ರಪತಿಗಳು ಕಳೆದ 50 ವರ್ಷಗಳ ಸಾಕಷ್ಟು ಗಮನಾರ್ಹ ಸಾಧನೆಗಳ ಪಟ್ಟಿ ಮಾಡುತ್ತಾ

> *"ನಮ್ಮ ಸಾಮಾಜಿಕ ಮತ್ತು ರಾಜಕೀಯ ಜೀವನದ ಮುಖ್ಯಲಕ್ಷಣಗಳಾಗಿದ್ದ ನೀತಿಗಳು ಹಾಗೂ ಆದರ್ಶವಾದದ ಜಾಗದಲ್ಲಿ ಈಗ ಕೇವಲ ಸಮಯಸಾಧಕತನ ಹಾಗೂ ಮೌಲ್ಯರಹಿತ ಅಧಿಕಾರ ರಾಜಕೀಯ ಕಾಣುತ್ತಿದೆ. ಜನಗಳು, ಗುಂಪುಗಳು ಹಾಗೂ ಪಕ್ಷಗಳ ನಡುವೆ ಸಂಬಂಧಗಳಲ್ಲಿ ಹಿಂಸಾಚಾರ ಹೆಚ್ಚಿದೆ. ಮಹಿಳೆಯರೊಡನೆ, ಪರಿಶಿಷ್ಟ ಜಾತಿಗಳು ಮತ್ತಿತರ ದುರ್ಬಲ ವಿಭಾಗದ ಜನರೊಡನೆ ದುರ್ವರ್ತನೆ, ಅವರ ಮೇಲೆ ಅತ್ಯಾಚಾರದಂತಹ ಸಾಮಾಜಿಕ ದುಷ್ಟಗಳು ಹೆಚ್ಚುತ್ತಿದ್ದು ಜಗತ್ತಿನಲ್ಲಿ ಭಾರತದ ಒಳ್ಳೆಯ ಹೆಸರಿಗೆ ಮಸಿ ಹಚ್ಚುತ್ತಿವೆ. ಮತ್ತು ಭ್ರಷ್ಟಾಚಾರ ನಮ್ಮ ರಾಜಕೀಯ ಮತ್ತು ನಮ್ಮ ಸಮಾಜದ ಸತ್ವವನ್ನೇ ಹಾಳುಗೆಡವುತ್ತಿದೆ"*

ಎಂದು ಅಳಲು ತೋಡಿಕೊಂಡರು.

ಅವರು ಮುಂದುವರಿದು ಹಿಂದಿನ ರಾಷ್ಟ್ರಪತಿ ಡಾ|| ಶಂಕರ್ ದಯಾಳ್ ಶರ್ಮ ವರ್ಣಿಸಿದ ನಾಲ್ಕು ದುಷ್ಟತನಗಳು(ಇವೆಲ್ಲಾ ಇಂಗ್ಲೀಷಿನಲ್ಲಿ `C' ಅಕ್ಷರದಿಂದ ಆರಂಭವಾಗುವ ಪದಗಳಾದ್ದರಿಂದ ಅದನ್ನು ನಾಲ್ಕು `C'ಗಳು ಎಂದಿದ್ದರು.) - ಕೋಮುವಾದ(Communalism), ಭ್ರಷ್ಟಾಚಾರ(Corruption), ಜಾತೀವಾದ(Casteism) ಮತ್ತು ಅಪರಾಧೀಕರಣ (Crminalisation) ಬಗ್ಗೆ ಹೇಳಿದರು. ರಾಷ್ಟ್ರಪತಿ ನಾರಾಯಣನ್ ಪ್ರಕಾರ ಈ ಪಿಡುಗುಗಳನ್ನು ಒಂದು ಸಾಮಾಜಿಕ ಆಂದೋಲನದಿಂದ ಮಾತ್ರವೇ ನಿರ್ಮೂಲನ ಮಾಡಲು ಸಾಧ್ಯ. ಅದೇ ಉಸಿರಿನಲ್ಲಿ ಅವರು ನಿರಕ್ಷರತೆ, ಬಡತನ ಇತ್ಯಾದಿ ಪ್ರಶ್ನೆಗಳ ಮೇಲೆ ಸಾಮೂಹಿಕ ಆಂದೋಲನವನ್ನು ಆರಂಭಿಸಬೇಕು ಎಂದೂ ಕರೆ ನೀಡಿದರು.

ಪ್ರಧಾನ ಮಂತ್ರಿಗಳು ಕೆಂಪುಕೋಟೆಯಿಂದ ಮಾಡಿದ ತನ್ನ ಭಾಷಣದಲ್ಲಿ ರಾಷ್ಟ್ರಪತಿಗಳ ಭಾವನೆಗಳನ್ನು ಪ್ರತಿಬಿಂಬಿಸುತ್ತಾ ಭ್ರಷ್ಟಾಚಾರದ ವಿರುದ್ಧ ಧರ್ಮಯುದ್ಧ ನಡೆಸಬೇಕೆಂದು ಕರೆ ನೀಡಿದರು. "ಎಷ್ಟೇ ಕಷ್ಟ ಬಂದರೂ ನಾವು ಲಂಚ ಕೊಡುವುದಿಲ್ಲ ಎಂದು ಸಾರುವ, ಒಂದು ಹೊಸ ರೀತಿಯ ಸತ್ಯಾಗ್ರಹ, ಒಂದು ರೀತಿಯ ಅಸಹಕಾರ ಆಂದೋಲನವನ್ನು ಆರಂಭಿಸಬಾರದೇಕೆ?" ಎಂದು ಪ್ರಶ್ನಿಸಿದರು.

ಸರಕಾರವೂ ಹೊಣೆಯಲ್ಲವೇ?

ಇಂತಹ ಒಂದು ಶ್ರದ್ಧಾಪೂರ್ಣ, ಸದ್ಭಾವನೆಯ ಘೋಷಣೆಯಲ್ಲಿ ಯಾರೂ ತಪ್ಪು ಹುಡುಕುವುದು ಸಾಧ್ಯವಿಲ್ಲ. ಆದರೆ ಇವು ಕೇವಲ ಸದಿಚ್ಛೆಯ ಘೋಷಣೆಗಳಾಗಿ ಉಳಿಯಬಾರದು. ರಾಷ್ಟ್ರಪತಿಗಳು ಮತ್ತು ಪ್ರಧಾನ ಮಂತ್ರಿಗಳು ಈ ದುಷ್ಟ ಪ್ರವೃತ್ತಿಗಳ ವಿರುದ್ಧ ಹೋರಾಟದಲ್ಲಿ ಮುತುವರ್ಜಿ ವಹಿಸಬೇಕು ಎಂದು ಜನಗಳನ್ನು ಪ್ರೇರೇಪಿಸಿದರೂ ಇದರರ್ಥ ಸರಕಾರಕ್ಕಾಗಲೀ, ಪ್ರಭುತ್ವಕ್ಕಾಗಲೀ ಇದರಲ್ಲಿ ಯಾವ ಜವಾಬ್ದಾರಿಯೂ ಇಲ್ಲ ಎಂದೇನೂ ಖಂಡಿತಾ ಇರಲಿಕ್ಕಿಲ್ಲ. ಯಾವುದೇ ಬದಲಾವಣೆಯ ಆಂದೋಲನದಲ್ಲಿ ಜನತೆಯ ಆಂದೋಲನ ಮತ್ತು ಅದಕ್ಕೆ ರಾಜಕೀಯ ನೇತೃತ್ವ ಸದಾ ನಿರ್ಣಾಯಕ ಅಂಗವಾಗಿದ್ದರೂ ಸರಕಾರ ಇಂತಹ ದುಷ್ಟ ಪ್ರವೃತ್ತಿಗಳನ್ನು ತಡೆಯಲು ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕಾದ ಹೊಣೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ.

ಇಂತಹ ಒಂದು ವಚನಬದ್ಧತೆ ಸರಕಾರದ ಧೋರಣೆಗಳಲ್ಲಿ ಬಿಂಬಿತವಾಗಿರಬೇಕೆಂದು ಭಾರತದ ಜನ ಪ್ರಸ್ತುತ ಸಂಯುಕ್ತ ರಂಗ ಸರಕಾರದಿಂದ ನಿರೀಕ್ಷಿಸುತ್ತಾರೆ. ಸಂಯುಕ್ತ ರಂಗದ ಸಮಾನ ಕನಿಷ್ಟ ಕಾರ್ಯಕ್ರಮ ಈ ನಾಲ್ಕು ದುಷ್ಟ ಪ್ರವೃತ್ತಿಗಳನ್ನು ಎದುರಿಸುವ ವಿವಿಧ ಕ್ರಮಗಳನ್ನು ಪಟ್ಟಿ ಮಾಡಿತ್ತು. ದುರದೃಷ್ಟವಶಾತ್ ಈ ಹಲವಾರು ಕ್ರಮಗಳು ಇನ್ನೂ ಬೆಳಕು ಕಂಡಿಲ್ಲ.

ಉನ್ನತಸ್ಥಾನಗಳಲ್ಲಿ ಭ್ರಷ್ಟಾಚಾರವನ್ನು ಎದುರಿಸಲು 'ಸಮಾನ ಕನಿಷ್ಟ ಕಾರ್ಯಕ್ರಮ' ಲೋಕಪಾಲ ವ್ಯವಸ್ಥೆಯ ಸ್ಥಾಪನೆ, ಸರಕಾರದ ವ್ಯವಹಾರಗಳಲ್ಲಿ ಮುಖ್ಯವಾಗಿ ದೊಡ್ಡ ಆರ್ಥಿಕ ಕಾಂಟ್ರಾಕ್ಟುಗಳಲ್ಲಿ ಸಂಪೂರ್ಣ ಪಾರದರ್ಶಕತೆ, ಹೊಣೆಗಾರಿಕೆ, ಮಂತ್ರಿಗಳ ಇಷ್ಟಾನಿಷ್ಟದಂತೆ ಬಳಸಬಹುದಾಗಿದ್ದ ವಿವೇಚನಾ ಕೋಟಾಗಳ ರದ್ಧತಿ ಇತ್ಯಾದಿ ಕ್ರಮಗಳನ್ನು ಪಟ್ಟಿ ಮಾಡಿತ್ತು. ಆದರೆ ಲೋಕಪಾಲ್ ಮಸೂದೆ ಇನ್ನೂ ಸಂಸತ್ತಿನ ಮುಂದೆಯೇ ಇದೆ. ಬಹುರಾಷ್ಟ್ರೀಯ ಕಂಪನಿಗಳೊಂದಿಗೆ ಆರ್ಥಿಕ ಕಾಂಟ್ರಾಕ್ಟ್‌ಗಳ ಶರತ್ತುಗಳನ್ನು ಸಾರ್ವಜನಿಕರಿಗೆ ತಿಳಿಸಲು ಗಂಭೀರ ಪ್ರಯತ್ನವೇನೂ ಮಾಡಿಲ್ಲ. ಮಾಹಿತಿ ಹಕ್ಕು ನೀಡಲಾಗುವುದೆಂಬ ವಚನವನ್ನು ಇನ್ನೂ ಈಡೇರಿಸಿಲ್ಲ. ಮಂತ್ರಿಗಳ ವಿವೇಚನಾ ಕೋಟಾಗಳನ್ನು ರದ್ದು ಮಾಡಲು ಕ್ರಮಗಳನ್ನು ಕೈಗೊಂಡರೂ ಸರಕಾರೀ ವಸತಿಗಳನ್ನು ಸರದಿ ಬಿಟ್ಟು ನೀಡಿದ್ದನ್ನು ನಿಯಮಿತಗೊಳಿಸುವ ಒಂದು ಸುಗ್ರೀವಾಜ್ಞೆಯನ್ನು ಹೊರಡಿಸಿ ಸರಕಾರ ಎಲ್ಲರನ್ನೂ ಆಶ್ಚರ್ಯಚಕಿತಗೊಳಿಸಿತು. ಸರದಿ ಬಿಟ್ಟು ಈ ಮನೆಗಳನ್ನು ನೀಡುವಲ್ಲಿ ನೀತಿ ನಿಯಮಗಳ ನಗ್ನ ಉಲ್ಲಂಘನೆಯಾಗಿದೆ ಎಂದು ಸುಪ್ರೀಂ ಕೋರ್ಟ್ ಹಿಂದಿನ ಕಾಂಗ್ರೆಸ್(ಐ) ಸರಕಾರದ ಒಂದಕ್ಕಿಂತ ಹೆಚ್ಚು ಸಂಪುಟ ಮಂತ್ರಿಗಳಿಗೆ ಛೀಮಾರಿ ಹಾಕಿದೆ. ಈ ಬಗ್ಗೆ ತನಿಖೆಗಳು ಇನ್ನೂ ನಡೆಯುತ್ತಿವೆ ಎಂದು ಓದುಗರಿಗೆ ನೆನಪಿರಬಹುದು. ಇಷ್ಟೆ ಅಲ್ಲ, ಮೇವು ಹಗರಣದ ತನಿಖೆಯ ಪ್ರಶ್ನೆ, ಹವಾಲಾ ಹಗರಣದಲ್ಲಿ ಸುಪ್ರೀಂಕೋರ್ಟ್‌ಗೆ ಅಪೀಲು, ಬೊಫೋರ್ಸ್ ತನಿಖೆ ಇವೆಲ್ಲಾ ಸರಕಾರದ ಮಧ್ಯಪ್ರವೇಶದಿಂದ ಕುಂಠಿತಗೊಂಡಂತೆ ಕಾಣುತ್ತಿದೆಯೇ ಹೊರತು, ತ್ವರಿತಗೊಂಡಂತೆ ಕಾಣುತ್ತಿಲ್ಲ. ಹೀಗೆ ರಾಷ್ಟ್ರಪತಿ ಮತ್ತು ಪ್ರಧಾನ ಮಂತ್ರಿಗಳ ಭಾಷಣದಲ್ಲಿ ಸಾರಿದ ಸದಾಶಯ ಸರಕಾರದ ಕಾರ್ಯನಿರ್ವಹಣೆಯಲ್ಲಿ ಬಿಂಬಿತವಾಗುತ್ತಿರುವಂತೆ ಕಾಣುತ್ತಿಲ್ಲ. ಸರಿಪಡಿಸಬೇಕಾಗಿರುವುದು ಇದನ್ನೇ. ಸರಕಾರ ಯುನೈಟೆಡ್‌ಫ್ರಂಟ್/ಯಾದಿಯಲ್ಲಿ 'ಸಮಾನ ಕನಿಷ್ಟ ಕಾರ್ಯಕ್ರಮ'ದಲ್ಲಿ ನೀಡಿದ ವಚನಗಳನ್ನು

ಜಾರಿಗೊಳಿಸಬೇಕು. ಈ ರೀತಿಯಿಂದ ಮಾತ್ರವೇ ಅದು ಭಾರತೀಯ ಜನಗಳೊಂದಿಗೆ ತನ್ನ ಸಂಬಂಧಗಳನ್ನು ಬಲಗೊಳಿಸಲು ಸಾಧ್ಯ.

ಅದೇ ರೀತಿ ಜಾತ್ಯಾತೀತತೆಯ ರಕ್ಷಣೆ, ಕೋಮುವಾದವನ್ನೆದುರಿಸಿ ಹೋರಾಡಿ, ಸಾಮಾಜಿಕ ನ್ಯಾಯ ದೊರೆಯುವಂತೆ ಮಾಡುವುದು, ಅಪರಾಧಿಗಳು ಮತ್ತು ರಾಜಕೀಯದ ನಡುವಿನ ನಂಟನ್ನು ಎದುರಿಸುವ ಪ್ರಶ್ನೆಗಳ ಮೇಲೂ ಸಂಯುಕ್ತ ರಂಗ ಸರಕಾರ ಹಲವು ಕ್ರಮಗಳನ್ನು ಕೈಗೊಳ್ಳುವುದಾಗಿ ವಚನ ನೀಡಿತ್ತು. ಇವೂ ಇನ್ನೂ ಕತ್ತಲಲ್ಲೇ ಇವೆ.

ಜನಗಳ ಸಂಕಟಗಳು ಹೆಚ್ಚುತ್ತಿವೆ

ಆದರೆ ಅತ್ಯಂತ ಗಂಭೀರವಾದ ಅಂಶವೆಂದರೆ ರಾಷ್ಟ್ರಪತಿಗಳು, ಪ್ರಧಾನಮಂತ್ರಿಗಳು ಬಡತನ ನಿರ್ಮೂಲನೆ, ಸುರಕ್ಷಿತ ಕುಡಿಯುವ ನೀರು, ಪ್ರಾಥಮಿಕ ಆರೋಗ್ಯ ಸೇವೆ ಇತ್ಯಾದಿಗಳ ಬಗ್ಗೆ ವ್ಯಕ್ತಪಡಿಸಿದ ಆತಂಕ. ಅಂದರೆ ಬಹುಪಾಲು ಭಾರತೀಯ ಜನತೆಯ ಜೀವನ ಪರಿಸ್ಥಿತಿಗಳಲ್ಲಿ ಸುಧಾರಣೆ, ಅವರ ಉದ್ಧಾರದ ಕುರಿತ ಆತಂಕ. ಇಲ್ಲಿ ಕೂಡಾ ಆತಂಕಕ್ಕೆ ಅನುಗುಣವಾದ ಕ್ರಿಯೆ ಇಲ್ಲ. ರಾಷ್ಟ್ರಪತಿಗಳು, ಪ್ರಧಾನ ಮಂತ್ರಿಗಳು ಇಬ್ಬರೂ ಆರ್ಥಿಕ "ಸುಧಾರಣೆ" ಯ ಪ್ರಕ್ರಿಯೆ ಭಾರತೀಯ ಜನತೆಗೆ ಹೆಚ್ಚಿನ ಸಮೃದ್ಧಿ ತಂದಿದೆ ಎಂಬ ಭಾವನೆ ನಿರ್ಮಿಸಲು ಪ್ರಯತ್ನಿಸಿದ್ದಾರೆ. ಆದರೆ ನಾವೀಗ ನೋಡುತ್ತಿರುವುದೇನು? ಈ ಆರ್ಥಿಕ ಧೋರಣೆಗಳ ಪರಿಣಾಮವಾಗಿ ಭಾರತ ವಿದೇಶೀ ಹಣಕಾಸು ಬಂಡವಾಳಕ್ಕೆ ಹೆಚ್ಚೆಚ್ಚು ಸಾಲಗಾರನಾಗುತ್ತಿದೆ. ಇನ್ನೊಂದೆಡೆ ದುಡಿಯುವ ಜನಸಾಮಾನ್ಯರ ಜೀವನ ಪರಿಸ್ಥಿತಿ ಹದಗೆಡುತ್ತಲೇ ಇದೆ.

ದೇಶ ಸ್ವಾತಂತ್ರ್ಯದ ಸ್ವರ್ಣಜಯಂತಿ ಆಚರಿಸುತ್ತಿರುವ ವೇಳೆಗೆ ಡೆಹ್ರಾಡೂನಿನ ಒಬ್ಬ ಮೋಟಾರು ಮೆಕಾನಿಕ್‌ನ ಮೂವರು ಮಕ್ಕಳು ಆತ್ಮಹತ್ಯೆ ಮಾಡಿಕೊಂಡಿರುವ ಸುದ್ಧಿ ನಮ್ಮ ಈಗಿನ ಕಟು ವಾಸ್ತವತೆಯನ್ನು ನೆನಪಿಸುವಂತದ್ದು. ಬದುಕಿಗೆ ಹೋರಾಡುವುದಕ್ಕಿಂತ ಸಾಯುವುದೇ ಅಗ್ಗ ಎಂದು ಅವರು ಸಾಯುವಾಗ ಇಟ್ಟು ಹೋದ ಪತ್ರದ ಒಕ್ಕಣಿಕೆ ಹೇಳುತ್ತದೆ. ಈ 'ಸುಧಾರಣೆಗಳ' ಫಲವಾಗಿ ಬಡತನದ ರೇಖೆಯ ಕೆಳಗಿರುವವರ ಸಂಖ್ಯೆ ಈಗಲೂ 32 ಕೋಟಿ ಗಿಂತ ಹೆಚ್ಚು. ಇನ್ನೂ ಆತಂಕದ ಸಂಗತಿಯೆಂದರೆ 1990 - 91 ರಲ್ಲಿ 'ಸುಧಾರಣಾ' ಪ್ರಕ್ರಿಯೆ ಆರಂಭವಾದಂದಿನಿಂದ ಕೃಷಿ ಬೆಳವಣಿಗೆಯ ದರ ಕೇವಲ ಎರಡು ಶೇಕಡ. ಜನಸಂಖ್ಯೆಯ ಬೆಳವಣಿಗೆಯ ದರ ಇದಕ್ಕಿಂತ ಹೆಚ್ಚಿರುವುದರಿಂದ ನಾವು ಕಾಣುತ್ತಿರುವ ನಿಜ ಪರಿಸ್ಥಿತಿಯೆಂದರೆ ತಲಾ ಆಹಾರಧಾನ್ಯ ಉತ್ಪಾದನೆ 'ಸುಧಾರಣೆಗಳು' ಆರಂಭವಾದಂದಿನಿಂದ ಇಳಿಮುಖವಾಗುತ್ತಿದೆ. ಆರ್ಥಿಕ ಬೆಳವಣಿಗೆಯ ಬಗ್ಗೆ ಡಂಗುರ ಸಾರಿದರೂ ಕೈಗಾರಿಕಾ ಹಿಂಜರಿತ ಕಾಲಿಟ್ಟಿದೆ. ಬಾಳಿಕೆ ಬರುವ ಬಳಕೆ ವಸ್ತುಗಳ ಉತ್ಪಾದನಾ ಬೆಳವಣಿಗೆ ದರ 1995-96 ರಲ್ಲಿ 4.3% ಕ್ಕೆ ಇಳಿದಿದೆ. ಬಾಳಿಕೆಯಿಲ್ಲದ ಬಳಕೆ ವಸ್ತುಗಳ ಉತ್ಪಾದನೆಯ ಬೆಳವಣಿಗೆ ದರ 7.2% ದಿಂದ 3.8% ಕ್ಕೆ ಇಳಿದಿದೆ. ಇದರಿಂದ ಉದ್ಯೋಗಾವಕಾಶ ಇಳಿದು ಜನಗಳ ಸಂಕಟ ಇನ್ನಷ್ಟು ಹೆಚ್ಚುತ್ತಿದೆ. ಇನ್ನೊಂದು ಮಟ್ಟದಲ್ಲಿ ಭಾರತದ ವ್ಯಾಪಾರ ಕೊರತೆ ಸತತವಾಗಿ ಏರುತ್ತಿದ್ದು ಅದೂ ಜನಗಳ ಮೇಲೆ ಇನ್ನಷ್ಟು ಹೊರೆ ಹಾಕುತ್ತಿದೆ.

ಇಷ್ಟೇಅಲ್ಲ, ಸ್ವಾವಲಂಬನೆಯ ಗುರಿ ನಿರಂತರವಾಗಿ ಹ್ರಾಸಗೊಳ್ಳುತ್ತಿದೆ. ಈ 'ಸುಧಾರಣೆ'ಯಲ್ಲಿ ಕಂಡು ಬಂದ ಅಂಶವಿದು. ಪ್ರಸ್ತುತ ಸಂಯುಕ್ತ ರಂಗ ಸರಕಾರವೂ ಇದೇ 'ಸುಧಾರಣೆ'ಯನ್ನು ಅಡೆ-ತಡೆಯಿಲ್ಲದೆ ಮುಂದುವರಿಸುತ್ತಿದೆ. ಸಾರ್ವಜನಿಕ ವಲಯದ ಖಾಸಗೀಕರಣ, ಬಹುರಾಷ್ಟ್ರೀಯ ಕಂಪನಿಗಳಿಗೆ ಯಾವುದೇ ಅಡೆ-ತಡೆಯಿಲ್ಲದ ಪ್ರವೇಶ, ನಮ್ಮ ಮಾರುಕಟ್ಟೆಗಳು ಹಾಗೂ ಕಚ್ಚಾ ಸಾಮಗ್ರಿಗಳನ್ನು ಪಡೆಯಲು ಅವರಿಗೆ ಮುಕ್ತ ಅವಕಾಶ ಹಾಗೂ ದೇಶದ ಶ್ರೀಮಂತರಿಗೆ ಒದಗಿಸಿರುವ ಭಾರೀ ರಿಯಾಯ್ತಿ ಇವೆಲ್ಲಾ ವಿನಾಶಕಾರಿ ಆರ್ಥಿಕ ಧೋರಣೆಗಳನ್ನು ಮುಂದುವರೆಸುವ ದಿಕ್ಕಿನಲ್ಲಿ ಕೈಗೊಂಡಿರುವ ನೀತಿಗಳು.

ಸಾಗುವ ದಿಕ್ಕು ಬದಲಾಗಬೇಕು.

ಭಾರತೀಯ ಜನತೆಗೆ ನಮ್ಮ ಸ್ವಾತಂತ್ರ್ಯದ ವೇಳೆಗೆ ನೀಡಿರುವ ವಚನವನ್ನು ಈಡೇರಿಸುವುದೆಂದರೆ ಅವರಿಗೊಂದು ಉತ್ತಮ ಬದುಕನ್ನು ಒದಗಿಸುವುದು ಎಂದರ್ಥ. ಈಗಿನ ಆರ್ಥಿಕ ಧೋರಣೆಯ ದಿಕ್ಕನ್ನು ಬದಲಿಸದೆ ಇದು ಸಾಧ್ಯವಿಲ್ಲ.


ವಿಶ್ವ ಆರ್ಥಿಕದೊಂದಿಗೆ ಭಾರತದ ಆರ್ಥಿಕವನ್ನು ಸಮಗ್ರೀಕರಿಸಬೇಕು ಎನ್ನುತ್ತಾರೆ ಹಣಕಾಸು ಮಂತ್ರಿಗಳು. ಖಂಡಿತಾ ಎಲ್ಲಾ ರೀತಿಯಲ್ಲಿ ಸಮಗ್ರೀಕರಿಸಿ. ಆದರೆ ಭಾರತಕ್ಕೆ ಪ್ರಯೋಜನವಾಗುವ ರೀತಿಯಲ್ಲಿ ಸಮಗ್ರೀಕರಿಸಿ - ವಿದೇಶಿ ಬಂಡವಾಳದ ಹಿತಾಸಕ್ತಿಗಳನ್ನು ಈಡೇರಿಸುವ ರೀತಿಯಲ್ಲಿ ಅಲ್ಲ. ಸಿಪಿಐ(ಎಂ) ಪ್ರತಿಪಾದಿಸುತ್ತಿರುವುದು ಈ ನಿಲುವನ್ನೇ.

> ಅತ್ಯಂತ ಗಂಭೀರವಾದ
> ಅಂಶವೆಂದರೆ ರಾಷ್ಟ್ರಪತಿಗಳು,
> ಪ್ರಧಾನಮಂತ್ರಿಗಳು
> ಬಡತನ ನಿರ್ಮೂಲನೆ,
> ಸುರಕ್ಷಿತ ಕುಡಿಯುವ ನೀರು,
> ಪ್ರಾಥಮಿಕ ಆರೋಗ್ಯ ಸೇವೆ
> ಇತ್ಯಾದಿಗಳ ಬಗ್ಗೆ ವ್ಯಕ್ತಪಡಿಸಿದ
> ಆತಂಕ.
> ಅಂದರೆ ಬಹುಪಾಲು ಭಾರತೀಯ
> ಜನತೆಯ
> ಜೀವನ ಪರಿಸ್ಥಿತಿಗಳಲ್ಲಿ ಸುಧಾರಣೆ,
> ಅವರ ಉದ್ಧಾರದ ಕುರಿತ ಆತಂಕ.
> ಇಲ್ಲಿ ಕೂಡಾ ಆತಂಕಕ್ಕೆ
> ಅನುಗುಣವಾದ ಕ್ರಿಯೆ ಇಲ್ಲ.

ಈ ಹಿನ್ನೆಲೆಯಲ್ಲಿ ಹಣಕಾಸು ಮಂತ್ರಿಗಳು ಎಡಪಕ್ಷಗಳೇ ಉದಾರೀಕರಣ ನೀತಿಯನ್ನು ಮುಂದುವರಿಸಲು ಇರುವ ದೊಡ್ಡ ಅಡ್ಡಿ ಎಂದು ಹಲವಾರು ಕಡೆ ಇತ್ತೀಚೆಗೆ ಒದರಾಡಿರುವುದನ್ನು ಕಂಡರೆ ಅಶ್ಚರ್ಯವಾಗದಿರದು. ನಿಜ, ನಮ್ಮ ಆರ್ಥಿಕ ಸ್ವಾವಲಂಬನೆಯ ತಳಪಾಯಕ್ಕೆ ಬೆದರಿಕೆ ತರುವ ಎಲ್ಲಾ ಇಂತಹ ಕ್ರಮಗಳನ್ನು, ಧೋರಣೆಗಳನ್ನು ಎಡ ಪಕ್ಷಗಳು ಖಂಡಿತಾ ವಿರೋಧಿಸುತ್ತವೆ. ಭಾರತದ ಆರ್ಥಿಕ ಸಾರ್ವಭೌಮತೆಯನ್ನು, ಸ್ವಾವಲಂಬನೆಯನ್ನು ಬಲಪಡಿಸುವ ನೀತಿಗಳನ್ನು ಎಡಪಕ್ಷಗಳು ಪ್ರತಿಪಾದಿಸುತ್ತವೆ. ಇದನ್ನು ಯಾರಾದರೂ 'ಸುಧಾರಣಾ-ವಿರೋಧಿ' ನಿಲುವೆಂದು ಪರಿಗಣಿಸುವುದಾದರೆ ಹಾಗೆಯೇ ಆಗಲಿ ಬಿಡಿ.

ಮೇಲೆ ಹೇಳಿರುವ ಹೆಚ್ಚಿನ ಪ್ರಶ್ನೆಗಳನ್ನು 'ಸಮಾನ ಕನಿಷ್ಟ ಕಾರ್ಯಕ್ರಮ'ದಲ್ಲಿ ಪ್ರಸ್ತಾಪಿಸಲಾಗಿದೆ ಹಾಗೂ ನಿರ್ದಿಷ್ಟ ಕ್ರಮಗಳನ್ನೂ ಅಲ್ಲಿ ಸೂಚಿಸಲಾಗಿದೆ. ಸಯುಂಕ್ತ ರಂಗ ಸರಕಾರ ಈಗ ಪ್ರಾಮಾಣಿಕತೆಯನ್ನು ತೋರಬೇಕಾಗಿದೆ. ದೇಶಕ್ಕೆ ಬಡತನ, ನಿರುದ್ಯೋಗ ಹಾಗೂ ಹಸಿವಿನಿಂದ ವಿಮೋಚನೆ ಕೊಡಲು ಪ್ರಯತ್ನಿಸಬೇಕಾಗುತ್ತದೆ. ನಮ್ಮ ಸ್ವಾತಂತ್ರ್ಯದ ಸ್ವರ್ಣ ಜಯಂತಿಯ ಸಂದರ್ಭದಲ್ಲಿ ನಮ್ಮನ್ನು ಮತ್ತೆ ಸಮರ್ಪಿಸಿಕೊಳ್ಳುವುದೆಂದರೆ ಅದರರ್ಥ ಸಂಯುಕ್ತ ರಂಗ ಸರಕಾರ ದೇಶಕ್ಕೆ ಹಾಗೂ ಜನಗಳಿಗೆ ಪ್ರಯೋಜನಕಾರಿಯಾಗುವಂತಹ ಸುಧಾರಣೆಗಳನ್ನು ಅನುಷ್ಠಾನಕ್ಕೆ ತರುವ ನಿರ್ಧಾರಕ್ಕೆ ಬರಬೇಕು.

ನಮ್ಮ ಸ್ವಾತಂತ್ರ್ಯದ 50ನೇ ವಾರ್ಷಿಕೋತ್ಸವದಲ್ಲಿ 50 ವರ್ಷಗಳ ಹಿಂದೆ ಭಾರತೀಯ ಜನತೆಗೆ ನೀಡಿದ ವಚನವನ್ನು ಈಡೇರಿಸಲು, ಪ್ರಜಾಸತ್ತಾತ್ಮಕ ಕ್ರಾಂತಿಯ ಅಪೂರ್ಣವಾಗುಳಿದ ಕರ್ತವ್ಯಗಳನ್ನು ಈಡೇರಿಸಲು ಎಲ್ಲಾ ಭಾರತೀಯ ದೇಶಪ್ರೇಮಿಗಳು ತಮ್ಮನ್ನು ಮತ್ತೆ ಸಮರ್ಪಿಸಿಕೊಳ್ಳಬೇಕು. ಹಸಿವು, ನಿರಕ್ಷರತೆ, ಪೋಷಕ ಆಹಾರದ ಅಭಾವ ಇತ್ಯಾದಿಗಳಿಲ್ಲದ ಒಂದು ಸಮೃದ್ಧಿಶೀಲ ಭಾರತವನ್ನು 21 ನೇ ಶತಮಾನಕ್ಕೆ ಒಯ್ಯುವುದು ನಾವು ಭಾರತೀಯ ಜನತೆಯ ಧೀರ ಹೋರಾಟಕ್ಕೆ ನಮ್ಮ ಹುತಾತ್ಮರಿಗೆ ಸಲ್ಲಿಸಬಹುದಾದ ಅತ್ಯುತ್ತಮ ಕಾಣಿಕೆಯಾಗುತ್ತದೆ.



ರಾಷ್ಟ್ರಪತಿಗಳೂ, ಪ್ರಧಾನ ಮಂತ್ರಿಗಳೂ ಸ್ವಾತಂತ್ರ್ಯದ ಸ್ವರ್ಣ ಜಯಂತಿಯ ಭಾಷಣಗಳಲ್ಲಿ ದೇಶವನ್ನು ಬಾಧಿಸುತ್ತಿರುವ ಪ್ರಶ್ನೆಗಳ ಮೇಲೆ ಸಾಮೂಹಿಕ ಆಂದೋಲನ ನಡೆಸಬೇಕೆಂದು ಕರೆ ನೀಡಿದರು. ಇಂಥ ಸದ್ಭಾವನೆಯ ಘೋಷಣೆಗಳೇನೋ ಸರಿ ಆದರೆ ಸರಕಾರಕ್ಕೂ ಇದರಲ್ಲಿ ಜವಾಬ್ದಾರಿ ಇಲ್ಲವೇ?

ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳುವಳಿಯ ಕೆಲವು ಮೈಲಿಗಲ್ಲುಗಳು

ಬ್ರಿಟಿಶರೂ ಸೇರಿದಂತೆ ಯುರೋಪಿಯನ್ನರು ಭಾರತದಲ್ಲಿ ಕಾಲಿಟ್ಟಾಗ ಕನ್ನಡ ಆಡುವ ಪ್ರದೇಶಗಳು, ಹಲವಾರು ರಾಜರುಗಳ ಸಾಮ್ರಾಜ್ಯಗಳಲ್ಲಿ ಹರಿದುಹಂಚಿಹೋಗಿದ್ದವು. ಉತ್ತರದಲ್ಲಿ ಪೇಶ್ವೆಗಳು, ಹಾಗೂ ಹೈದರಾಬಾದಿನ ನಿಜಾಮ, ದಕ್ಷಿಣದಲ್ಲಿ ಹೈದರಾಲಿ ಹಾಗೂ ಇತರ ಹಲವಾರು ತುಂಡರಸರು, ಪಾಳೆಯಗಾರರು ಆಳುತ್ತಿದ್ದರು. ಈ ಎಲ್ಲಾ ಅರಸರು, ಪಾಳೆಯಗಾರರು ತಮ್ಮ ತಮ್ಮಲ್ಲಿ ತಮ್ಮ ರಾಜ್ಯ ವಿಸ್ತರಿಸಲು ಕಾದಾಡುತ್ತಿದ್ದರು. ಇದರ ಲಾಭ ಪಡೆದು ಬ್ರಿಟಿಶರು ಭಾರತದ ಇತರ ಪ್ರದೇಶಗಳಂತೆ ಕರ್ನಾಟಕದ ಪ್ರದೇಶಗಳಲ್ಲೂ ಕಾಲೂರಲಾರಂಭಿಸಿದರು. ಬ್ರಿಟಿಶರ ಈ ಪ್ರಯತ್ನದಲ್ಲಿ ಪೇಶ್ವೆಗಳು, ನಿಜಾಮರು ಪ್ರತಿರೋಧ ಒಡ್ಡಿದ್ದಕ್ಕಿಂತ ಸಹಕರಿಸಿದ್ದು ಹೆಚ್ಚು. ಬ್ರಿಟಿಶರಿಗೆ ನಿಜವಾದ ಪ್ರತಿರೋಧ ಒಡ್ಡಿದ್ದು ಟಿಪ್ಪು ಸುಲ್ತಾನ್ ಮಾತ್ರ. ಈ ಅರ್ಥದಲ್ಲಿ ಬ್ರಿಟಿಶರ ವಿರುದ್ಧ ಸ್ವಾತಂತ್ರ್ಯ ಹೋರಾಟ ಆರಂಭವಾದದು ಟಿಪ್ಪುಸುಲ್ತಾನ್ ಹೂಡಿದ ಯುದ್ಧಗಳಿಂದ. ಆಮೇಲೆ ಕಿತ್ತೂರಿನ ರಾಣಿ ಚೆನ್ನಮ್ಮನ ಧೀರ ಹೋರಾಟ-ಇದು 1857 ರ ಪ್ರಥಮ ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಮೂರು ದಶಕಗಳ ಮೊದಲೇ ನಡೆದದ್ದು ಎಂಬುದು ಗಮನಾರ್ಹ. ಆ ಮೇಲಿನ ಘಟ್ಟದಲ್ಲಿ ಕಾಂಗ್ರೆಸ್ ನಾಯಕತ್ವದ ಸ್ವಾತಂತ್ರ್ಯ ಹೋರಾಟ ಕರ್ನಾಟಕದ ಬ್ರಿಟಿಶ್ ನೇರ ಆಳ್ವಿಕೆಯ ಭಾಗಗಳಲ್ಲಿ ಮತ್ತು ಸ್ವಲ್ಪ ಮಟ್ಟಿಗೆ ಮೈಸೂರು ಸಂಸ್ಥಾನದಲ್ಲಿ. ಭಾರತೀಯ ರಾಜರುಗಳ ಆಳ್ವಿಕೆಯಲ್ಲಿರುವ ಸಂಸ್ಥಾನಗಳ ಸ್ವಾತಂತ್ರ್ಯ ಚಳುವಳಿಯನ್ನು ತಡೆಯುವ ಕಾಂಗ್ರೆಸ್ ನೀತಿಯಿಂದಾಗಿ, ಕರ್ನಾಟಕದ ದೊಡ್ಡ ಭಾಗ ವಿವಿಧ ರಾಜರುಗಳ ಆಡಳಿತದಲ್ಲಿದ್ದುದರಿಂದ ಸ್ವಾತಂತ್ರ್ಯ ಚಳುವಳಿ ಈ ಭಾಗಗಳಲ್ಲಿ ದುರ್ಬಲವಾಗಿತ್ತು. ಇದಕ್ಕೆ ಹೆಣೆದುಕೊಂಡದ್ದು ಕನ್ನಡ ನಾಡಿನ ಎಲ್ಲಾ ಪ್ರದೇಶಗಳನ್ನು ಒಗ್ಗೂಡಿಸಿ ಸ್ವತಂತ್ರ ಭಾರತದಲ್ಲಿ ಕರ್ನಾಟಕವನ್ನು ಕಟ್ಟುವ ಕನಸಿನಿಂದ ಹೋರಾಡಿದ ಕನ್ನಡ ಜನತೆಯ ಕರ್ನಾಟಕ ಏಕೀಕರಣ ಚಳುವಳಿ. ಕರ್ನಾಟಕಕ್ಕಾಗಿ ಮಾಡಿದ ಹೋರಾಟ ಸ್ವಾತಂತ್ರ್ಯ ಚಳುವಳಿಯ ಭಾಗವಾದ್ದರಿಂದ ಕರ್ನಾಟಕದ ಸ್ವಾತಂತ್ರ್ಯ ಚಳುವಳಿ 1947 ರ ನಂತರವೂ ಒಂಭತ್ತು ವರ್ಷಗಳ ನಂತರ ನಡೆಯಿತು. 1947 ರ ನಂತರವೇ ಈ ಚಳುವಳಿ ತೀವ್ರಗೊಂಡದ್ದು.

ಇದು ಕರ್ನಾಟಕದ ಸ್ವಾತಂತ್ರ್ಯ ಚಳುವಳಿಯ ಸಮಗ್ರ ನೋಟವಲ್ಲ. ಎಲ್ಲಾ ಪ್ರಮುಖ ಘಟನೆಗಳ ಪಟ್ಟಿಯೂ ಅಲ್ಲ. ಕೆಲವು ಮೈಲಿಗಲ್ಲುಗಳನ್ನು ನೆನಪಿಸಿಕೊಳ್ಳಲಾಗಿದೆಯಷ್ಟೆ.



1791- ಟಿಪ್ಪು ಸುಲ್ತಾನ್ ಮತ್ತು ಬ್ರಿಟಿಶರ ನಡುವೆ ಮೂರನೇ ಮೈಸೂರು ಯುದ್ಧ - ಟಿಪ್ಪು ಸೋತು ಹಲವಾರು ಪ್ರದೇಶಗಳು ಬ್ರಿಟಿಶ ವಶ.

1799- ನಾಲ್ಕನೇ ಮೈಸೂರು ಯುದ್ಧ - ಟಿಪ್ಪು ಸುಲ್ತಾನ್ ಮರಣ - ಬ್ರಿಟಿಶರ ಆಶ್ರಿತರಾಗಿ ಮೈಸೂರು ಒಡೆಯರ ಮನೆತನದ ಆಳ್ವಿಕೆ.



ಕಿತ್ತೂರು ಚೆನ್ನಮ್ಮ

ಅಕ್ಟೋಬರ್ 23, 1824- ಕಿತ್ತೂರು ಚೆನ್ನಮ್ಮ ಹಾಗೂ ಬ್ರಿಟಿಶರ ನಡುವೆ ಮೊದಲ ಯುದ್ಧ, ಕಿತ್ತೂರಿನಿಂದ ಬ್ರಿಟಿಶ್ ಸೈನ್ಯದ ಪರಾಭವ.

ಡಿಸೆಂಬರ್ 3-5, 1824- ಕಿತ್ತೂರ್ ಚೆನ್ನಮ್ಮ ಹಾಗೂ ಬ್ರಿಟಿಶ್‌ರ ನಡುವೆ ಎರಡನೇ ಯುದ್ಧ. ಕೆಲವರ ರಾಜದ್ರೋಹದಿಂದ ಕಿತ್ತೂರಿಗೆ ಸೋಲು. ಕಿತ್ತೂರಿನ ಚೆನ್ನಮ್ಮನ ವೀರಮರಣ.

1829-31- ಸಂಗೋಳ್ಳಿ ರಾಯಣ್ಣನಿಂದ ಬ್ರಿಟಿಶರ ವಿರುದ್ಧ ಸಶಸ್ತ್ರ ಹೋರಾಟ.

ಜನವರಿ 26, 1831- ಕೆಲವು ಸಂಗಡಿಗರ ಮೋಸದಿಂದ ಸಂಗೊಳ್ಳಿ ರಾಯಣ್ಣ ಬ್ರಿಟಿಶರ ಸೆರೆ ಹಾಗೂ ಗಲ್ಲು ಗಂಬಕ್ಕೆ.


1915-ಕನ್ನಡ ಸಾಹಿತ್ಯ ಪರಿಷತ್ತಿನ ರಚನೆ ಬೆಂಗಳೂರಿನಲ್ಲಿ.

ಅಕ್ಟೋಬರ್ 7, 1917- ಕನ್ನಡ ಮಾತನಾಡುವ ಎಲ್ಲಾ ಪ್ರದೇಶಗಳನ್ನು ಸೇರಿಸಿ ಒಂದು ರಾಜಕೀಯ ಘಟಕ ಮಾಡುವ ಬಗ್ಗೆ ಒತ್ತಾಯಿಸುವ ಮೊದಲ ಬಾರಿಗೆ ಯಾವುದೇ ಸಂಸ್ಥೆಯ ನಿರ್ಣಯ - ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದಿಂದ.

1920-ನಾಗಪುರದ ಕಾಂಗ್ರೆಸ್ ಅಧಿವೇಶನದಲ್ಲಿ ಭಾಷಾವಾರು ಪ್ರಾಂತ್ಯದ ಬಗೆಗಿನ ಕಾಂಗ್ರೆಸ್ ನೀತಿಯ ಆಧಾರದ ಮೇಲೆ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ರಚನೆ.

ಜುಲೈ 1, 1921- ಧಾರವಾಡದಲ್ಲಿ ಖಿಲಾಫತ್ ಚಳುವಳಿಗಾರರ ಮೇಲೆ ಗೋಲಿಬಾರು , 3 ಜನರ ಸತ್ತು, 39 ಜನರಿಗೆ ಗಾಯ.

1924-ಬೆಳಗಾವಿಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ. ಕರ್ನಾಟಕದಲ್ಲಿ ಕಾಂಗ್ರೆಸ್ ಚಳುವಳಿಗೆ, ಸ್ವಾತಂತ್ರ್ಯ ಹೋರಾಟಕ್ಕೆ ಕುಮ್ಮಕ್ಕು. ಅದೇ ಸಮಯದಲ್ಲಿ ಕರ್ನಾಟಕ ಏಕೀಕರಣ ಪರಿಷತ್ತಿನ ಪ್ರಥಮ ಸಭೆ.



ಸಂಗೊಳ್ಳಿ ರಾಯಣ್ಣಾ

1928 ನವೆಂಬರ್ 18- ಪ್ರಿನ್ಸ್ ಆಫ್ ವೆಲ್ಸ್‌ನ ಬೆಂಗಳೂರು ಭೇಟಿ ಸಂದರ್ಭದಲ್ಲಿ ಪ್ರತಿಭಟನಾಕಾರರ ಮೇಲೆ ಬೆಂಗಳೂರು ದಂಡು ಪ್ರದೇಶದಲ್ಲಿ ಗೋಲಿಬಾರು. ಇಬ್ಬರ ಮರಣ.

1930, ಏಪ್ರಿಲ್ 4- ಅಂಕೋಲದಲ್ಲಿ 30 ಸಾವಿರ ಜನರಿಂದ ಉಪ್ಪಿನ ಸತ್ಯಾಗ್ರಹ. ಧಾರವಾಡ, ಬಿಜಾಪುರ, ಕಾರವಾರ,



ಬೆಳಗಾವಿ ಕಾಂಗ್ರೆಸ್ ಅಧಿವೇಶನದಲ್ಲಿ ಗಾಂಧೀಜಿ

ಮಂಗಳೂರಿನಲ್ಲಿ ಉಪ್ಪಿನ ಸತ್ಯಾಗ್ರಹಗಳಲ್ಲಿ ಭಾರೀ ಪಾಲ್ಗೊಳ್ಳುವಿಕೆ; ಬೆಳಗಾವಿ, ಧಾರವಾಡ, ಬಿಜಾಪುರಗಳಲ್ಲಿ ಬ್ರಿಟಿಶ್ ಸರಕಾರದ ಆಸ್ತಿಪಾಸ್ತಿಗಳ ಮೇಲೆ ಗೆರಿಲ್ಲಾ ಆಕ್ರಮಣಗಳು.

ಜೂನ್ 2, 1931- ಬೆಂಗಳೂರಿನಲ್ಲಿ ರೈಲ್ವೆ ಸ್ಟೇಶನ್ನಿನ ಎದುರಲ್ಲಿ ಧ್ವಜಾರೋಹಣ, ಪೋಲೀಸರು ಧ್ವಜ ಕೆಳಗಿಳಿಸಿದಾಗ ಅದನ್ನು ವಾಪಸು ಕೊಡುವ ವರೆಗೆ ಸತ್ಯಾಗ್ರಹ.

ಏಪ್ರಿಲ್ 11-13, 1938-ಶಿವಪುರದಲ್ಲಿ(ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ) ಮೈಸೂರು ಸಂಸ್ಥಾನ ಕಾಂಗ್ರೆಸ್ ನೇತೃತ್ವದಲ್ಲಿ ಧ್ವಜ ಸತ್ಯಾಗ್ರಹ. ನಾಲ್ಕು ದಿವಸಗಳ ಕಾಲ ಧ್ವಜ ಹಾರಿಸಿದವರ ಬಂಧನ.

ಏಪ್ರಿಲ್ 25, 1938- ವಿದುರಾಶ್ವತ್ಥ ಹತ್ಯಾಕಾಂಡ - ಕೋಲಾರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನಲ್ಲಿ ಧ್ವಜ ಸತ್ಯಾಗಹಗಾರರ ಮೇಲೆ ಪೋಲೀಸರ ಗೋಳಿಬಾರು - 49 ಜನ ಗುಂಡಿಗೆ ಬಲಿ. ಕರ್ನಾಟಕದ 'ಜಲಿಯನ್ ವಾಲಾಬಾಗ್' ಎಂದು ಹೆಸರು ಪಡೆದ ಘಟನೆ.

1946- ಮುಂಬಯಿಯಲ್ಲಿ ಸೇರಿದ್ದ ಕರ್ನಾಟಕ ಏಕೀಕರಣ ಪರಿಷತ್ತಿನಿಂದ ಬ್ರಿಟಿಶ್ ಆಡಳಿತದಲ್ಲಿದ್ದ ಮುಂಬಯಿ, ಮದ್ರಾಸ್ ಪ್ರಾಂತ್ಯಗಳಲ್ಲಿದ್ದ ಹಾಗೂ ಹೈದರಾಬಾದ್, ಮೈಸೂರು ಮತ್ತಿತರ ಸಂಸ್ಥಾನಗಳಲ್ಲಿದ್ದ ಎಲ್ಲಾ ಕನ್ನಡ ಮಾತನಾಡುವ ಜಿಲ್ಲೆ, ತಾಲ್ಲೂಕು, ಗ್ರಾಮಗಳನ್ನು ಸೇರಿಸಿ ಕರ್ನಾಟಕ ರಾಜ್ಯ ನಿರ್ಮಾಣ ಮಾಡುವ ಬಗ್ಗೆ ನಿರ್ಣಯ. ಕನ್ನಡ ನಾಡಿನ ಜನರ ಭಾರೀ ಬೆಂಬಲ.

ಆಗಸ್ಟ್ 15, 1947- ಎಲ್ಲಾ ಪ್ರದೇಶಗಳಲ್ಲಿ ಸ್ವಾತಂತ್ರ್ಯದ ಸಂಭ್ರಮ. ಆದರೆ ಮೈಸೂರು, ಹೈದರಾಬಾದು ಸಂಸ್ಥಾನಗಳಲ್ಲಿ ಧ್ವಜಾರೋಹಣಕ್ಕೆ ಅಡ್ಡಿ. ಹೈದರಾಬಾದಿನಲ್ಲಿ ಭಾರತ ಸೇರಲು ನಿಜಾಮನ ವಿರುದ್ಧ ಹೋರಾಟ. ಮೈಸೂರು ಮಹಾರಾಜ ಭಾರತ ಸೇರಿದರೂ ಜವಾಬ್ದಾರಿ ಸರಕಾರಕ್ಕೆ ನಿರಾಕರಣೆ.

ಸೆಪ್ಟೆಂಬರ್ 1947- ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರಕಾರಕ್ಕಾಗಿ ಮೈಸೂರು ಚಲೋ ಹೋರಾಟ - ಭಾರೀ ಪ್ರತಿಕ್ರಿಯೆ.

ಸೆಪ್ಟೆಂಬರ್ 24, 1947- ಜವಾಬ್ದಾರಿ ಸರಕಾರಕ್ಕೆ ಮೈಸೂರು ಮಹಾರಾಜರಿಂದ ಒಪ್ಪಿಗೆ, ಕಾಂಗ್ರೆಸ್ ಸರಕಾರ ರಚನೆ. ಕೆ.ಸಿ.ರೆಡ್ಡಿಯವರ ಮುಖ್ಯಮಂತ್ರಿತ್ವದಲ್ಲಿ.

ನವೆಂಬರ್, 1948- ಸರ್ಕಾರ ಭಾಷಾವಾರು ಪ್ರಾಂತ್ಯದ ರಚನೆ ಬಗ್ಗೆ ನೇಮಿಸಿದ್ದ ಧರ್ ಆಯೋಗದಿಂದ ಆ ರೀತಿ ಮಾಡದಿರಲು ಶಿಫಾರಸು. ಕರ್ನಾಟಕದಲ್ಲಿ ತೀವ್ರ ಅತೃಪ್ತಿ.

ಮಾರ್ಚ್ 6, 1949- ಗುಲ್ಬರ್ಗದಲ್ಲಿ ಸೇರಿದ್ದ ಕರ್ನಾಟಕ ಏಕೀಕರಣ ಪರಿಷತ್ತಿನ 12 ನೇ ಅಧಿವೇಶನದಲ್ಲಿ ಕರ್ನಾಟಕ ಪ್ರಾಂತ್ಯ ರಚನೆಗೆ ಒತ್ತಾಯ. ಜನರ ಕೋಪ, ಅಸಹನೆಯ ಪ್ರದರ್ಶನ.

ಏಪ್ರಿಲ್, 1949- ಧರ್ ಆಯೋಗದ ಶಿಫಾರಸ್ಸುಗಳನ್ನು ಎತ್ತಿ ಹಿಡಿದ ನೆಹ್ರೂ ನಾಯಕತ್ವದ ತ್ರಿಮೂರ್ತಿ ಸಮಿತಿ ವರದಿ - ಕರ್ನಾಟಕದಲ್ಲಿ ತೀವ್ರ ಅತೃಪ್ತಿ. ಮೈಸೂರಿನ ಕೆಲವು ರಾಜಕಾರಣಿಗಳು ಮೈಸೂರು ಮಹಾರಾಜರ ಸ್ಥಾನಮಾನ ಬಳಸಿ ಕರ್ನಾಟಕ ಏಕೀಕರಣವನ್ನು ವಿರೋಧಿಸಿದ್ದರ ನೆಪ ಎತ್ತಿದ್ದಕ್ಕಾಗಿ ತ್ರಿಮೂರ್ತಿ ಸಮಿತಿ ಶಿಫಾರಸ್ಸಿನ ಬಗ್ಗೆ ತೀವ್ರ ಕೋಪ.

ಜುಲೈ 13, 1951- ಬೆಂಗಳೂರಿನ ಪುರಭವನದಲ್ಲಿ ಅಖಿಲ ಕರ್ನಾಟಕ ಪ್ರಾಂತ್ಯ ರಚನಾ ಸಮ್ಮೇಳನ.

ಡಿಸೆಂಬರ್ 15, 1952 - ಆಂಧ್ರ ಪ್ರಾಂತ್ಯ ರಚನೆಗೆ ಒತ್ತಾಯಿಸಿ ಆಮರಣಾಂತ ಉಪವಾಸ ಹೂಡಿದ್ದ ಪೊಟ್ಟಿ ಶ್ರೀರಾಮುಲು ಬಲಿದಾನ.

ಮಾರ್ಚ್ 1953 - ಅದರಗುಂಚಿ ಶಂಕರಗೌಡ ಪಾಟೀಲರ ಆಮರಣಾಂತ ಉಪವಾಸ ಸತ್ಯಾಗ್ರಹ- ಕರ್ನಾಟಕ ಪ್ರಾಂತ್ಯ ರಚನೆಗೆ ಒತ್ತಾಯಿಸಿ.

ಏಪ್ರಿಲ್ 19, 1953 - ಕರ್ನಾಟಕ ಏಕೀಕರಣದ ಚಳುವಳಿಗೆ ಜನಾಂದೋಲನದ ತೀವ್ರ ತಿರುವುಕೊಟ್ಟ ಹುಬ್ಬಳ್ಳಿ 'ಗಲಭೆ'. ಕೆಪಿಸಿಸಿ ಕಾರ್ಯಕಾರಿ ಸಮಿತಿ ಸಭೆಗೆ ಬಂದಿದ್ದ ಕಾಂಗ್ರೆಸ್ ನಾಯಕರ ರಾಜೀನಾಮೆಗೆ ಒತ್ತಾಯಿಸಲು ಸೇರಿದ್ದ 25 ಸಾವಿರ ಜನರ ಮೇಲೆ ಗೋಲಿಬಾರು. ಇಪ್ಪತ್ತು ಕಾಂಗ್ರೆಸ್ಸೇತರ ನಾಯಕರ ಬಂಧನ. ಅದರಲ್ಲಿ 13 ಜನ ಕಮ್ಯುನಿಸ್ಟರು(ಎನ್ಕೆ, ಮುಧೋಳ್ ಸೇರಿದಂತೆ) ಈ ಜನರ ಒತ್ತಾಯ, ಕೋಪದ ಪರಿಣಾಮವಾಗಿ ಅಕ್ಟೋಬರ್ 1953 ರೊಳಗೆ ಕರ್ನಾಟಕ ಪ್ರಾಂತ್ಯವನ್ನು ರಚಿಸುವ ಬಗ್ಗೆ ಸ್ಪಷ್ಟ ನಿರ್ಣಯ ಹಾಗೂ 1954 ರ ಕೊನೆಯ ಒಳಗೆ ಕರ್ನಾಟಕ ರಾಜ್ಯ ರಚಿಸಲು ಕ್ರಮ ಒತ್ತಾಯಿಸಿ, ಹಾಗಾಗದಿದ್ದರೆ ಎಲ್ಲಾ ಕಾಂಗ್ರೆಸ್ ಶಾಸನ ಸಭೆ ಸದಸ್ಯರ ರಾಜೀನಾಮೆ ಕೊಡಬೇಕಾಗುತ್ತದೆ ಎಂದು ಬೆದರಿಸುವ ಕೆಪಿಸಿಸಿ ನಿರ್ಣಯ.

ಮೇ 28, 1953 - ದಾವಣಗೆರೆಯಲ್ಲಿ ಅಖಿಲ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತಿನ ಮೊದಲ ಸಭೆ. ಪರಿಷತ್ತಿನಲ್ಲಿ ಕಾಂಗ್ರೆಸ್ಸೇತರ ಪಕ್ಷಗಳು(ಕಮ್ಯುನಿಸ್ಟ್ ಹಾಗೂ ಸೋಷಲಿಸ್ಟ್ ಪ್ರಭಾವ) ಹಾಗೂ ಹಲವು ಜನನಾಯಕರ ಸಹಕಾರ.

ಸೆಪ್ಟೆಂಬರ್ ಮೊದಲ ವಾರ, 1953 - ಕರ್ನಾಟಕ ರಾಜ್ಯ ರಚನೆಗೆ ಒತ್ತಾಯಿಸಿ 'ಕರ್ನಾಟಕ ವಾರ' ಎಂಬ ಜನಾಂದೋಲನದ ಆಚರಣೆಗೆ ಪರಿಷತ್ತಿನ ಕರೆ.

ಅಕ್ಟೋಬರ್ 2, 1953 - ವಾಂಛೂ ಆಯೋಗದ ಶಿಫಾರಸ್ಸಿನ ಆಧಾರದ ಮೇಲೆ ಬಳ್ಳಾರಿ ಜಿಲ್ಲೆ ಮೈಸೂರಲ್ಲಿ ವಿಲೀನ. ಅದೇ ದಿನ ಕನ್ನಡ ಕಾರ್ಯಕರ್ತ ರಂಜಾನ್ ಸಾಬರ ಕೊಲೆ.

ಡಿಸೆಂಬರ್23, 1953 - ಅಖಿಲ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತಿನ ಎರಡನೇ ಸಭೆ ಹಂಪೆಯಲ್ಲಿ.

ಡಿಸೆಂಬರ್ 22, 1953 - ಭಾಷಾವಾರು ಪ್ರಾಂತ್ಯಗಳ ರಚನೆಗೆ ರಾಜ್ಯ ಪುನರ್ವಿಂಗಡಣಾ ಆಯೋಗ ರಚನೆ.

ನವೆಂಬರ್ 1, 1956 -ಕನ್ನಡ ಪ್ರದೇಶಗಳಲ್ಲಿ ಹೆಚ್ಚಿನವನ್ನು ಒಳಗೊಂಡ ವಿಶಾಲ ಮೈಸೂರು ರಾಜ್ಯದ ಉದಯ. ನಿಜಲಿಂಗಪ್ಪನವರು ಮೊದಲ



ಇಸ್ಸೂರಿನ ಈಶ್ವರಮ್ಮ (ಈಕೆಯು ಭಾವನನ್ನು ಗಲ್ಲಿಗೇರಿಸಲಾಯಿತು) ಮತ್ತು ಈ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೊಳಗಾದ ಎನ್.ಎಸ್.ಹುಚ್ಚುರಾಯಪ್ಪ

ಕರ್ನಾಟಕದಲ್ಲಿ ಕೃಷಿ

▶ ಪುಟ 27 ರಿಂದ

ಹೋರಾಟವಿಲ್ಲದೆ ಬಿಟ್ಟುಕೊಡಲಾರರು.

9. ನೂತನ ಆರ್ಥಿಕ ನೀತಿಗಳ ಫಲವಾಗಿ ಕೇಂದ್ರ ಸರಕಾರ ಹಾಗೂ ರಾಜ್ಯ ಸರಕಾರ ನೀರಾವರಿಗೆ ಹೂಡುವ ಬಂಡವಾಳ ಹಣ ಕಡಿಮೆ ಕಡಿಮೆಯಾಗುತ್ತಾ ಬರುತ್ತಿದೆ. ನೀರಾವರಿಯಲ್ಲಿ ಇನ್ನು ಮುಂದೆ ಖಾಸಗಿಯವರು ಬೇಕಾದರೆ ಹಣ ಹೂಡಲಿ ಎಂಬುದು ಈ ನೀತಿಗಳ ಅರ್ಥ. ಆದಕಾರಣ, ಸರಕಾರದಿಂದಲೂ ಗ್ರಾಮಂತರ ರೈತರಿಗೆ ಕೃಷಿಗೆ ನೀರು ಒದಗಿಸುವ ಪ್ರಾಥಮಿಕ ಜವಾಬ್ದಾರಿ ಸರಕಾರದ್ದು, ಜನದ್ದು ಎಂದಿದ್ದುದು ಇದೀಗ ಸರಕಾರಗಳು ಈ ತಮ್ಮ ಆದ್ಯಕರ್ತವ್ಯದಿಂದ ಹಿಂಜರಿಯುತ್ತಾ ಹೋಗುತ್ತಿವೆ- ನೂತನ ಆರ್ಥಿಕ ನೀತಿಯ ಸಿದ್ಧಾಂತದಿಂದಾಗಿ! ಪರಿಣಾಮ, ಸಣ್ಣ, ಬಡ ಹಾಗೂ ಮಧ್ಯಮ ರೈತರು ಕೃಷಿಗೆ ನೀರಾವರಿಯ ನೀರನ್ನು ಪಡೆಯದೆ (ಹಾಗೂ ತಮಗೆ ಆ ಅನುಕೂಲತೆಯನ್ನು ಸೃಷ್ಟಿಸಲು ಸಾಧ್ಯವಾಗದೆ) ತಮ್ಮ ಕೃಷಿ ಭೂಮಿಯನ್ನು ಪರಭಾರೆ ಮಾಡುವ ಸ್ಥಿತಿ ಬರುವುದರಲ್ಲಿ ಸಂಶಯವಿಲ್ಲ. ಇದೇ ಆರ್ಥಿಕ ನೀತಿಗಳ ಹಿಂದಿರುವ ಪಾಶ್ಚಿಮಾತ್ಯ ಚಿಂತನೆಯ ಉದ್ದೇಶವೂ ಕೂಡ!


10. ಕೊನೆಯದಾಗಿ, ವಿದ್ಯುಚ್ಛಕ್ತಿ ನೂತನ ಆರ್ಥಿಕ ನೀತಿಗಳನ್ನು ನರಸಿಂಹರಾವ್ ಮತ್ತು ಮನಮೋಹನ ಸಿಂಗ್ ದೇಶದಲ್ಲಿ ಜಾರಿಗೆ ತರುವವರೆಗೆ, ವಿದ್ಯುಚ್ಛಕ್ತಿ ಉತ್ಪತ್ತಿ ಮತ್ತು ವಿತರಣೆಯ ಸಂಪೂರ್ಣ ಜವಾಬ್ದಾರಿ ಸರರಕಾರಗಳದ್ದಾಗಿತ್ತು. ಈಗ ನೂತನ ಆರ್ಥಿಕ ನೀತಿಗಳ ಜಾರಿಯ ನಂತರ, ಸರಕಾರಗಳು ಈ ಜವಾಬ್ದಾರಿಯಿಂದ ವಿಮುಖವಾಗುತ್ತಿವೆ. ವಿದ್ಯುಚ್ಛಕ್ತಿ ಮತ್ತು ಅದರ ವಿತರಣೆ ಖಾಸಗೀಕರಣದತ್ತ ಸಾಗುತ್ತಿದೆ. ಕಡಿಮೆ ಕ್ರಯದಲ್ಲಿ ಜನಸಾಮಾನ್ಯರಿಗೆ, ರೈತರಿಗೆ ಎಟಕುವ ದರಗಳಲ್ಲಿ ವಿದ್ಯುಚ್ಛಕ್ತಿ ಮಾರಾಟವಾಗಬೇಕು ಎಂಬುದು ಸರಕಾರದ ಧೋರಣೆಯಾಗಿತ್ತು. ರೈತರಿಗೆ ನೂರರಲ್ಲಿ 40 ಅಂಶ ವಿದ್ಯುಚ್ಛಕ್ತಿಯನ್ನು ಇತ್ತೀಚಿಗಿನ ವರ್ಷಗಳವರೆಗೆ ಒದಗಿಸಲಾಗುತ್ತಿತ್ತು. 10 ಅಶ್ವಶಕ್ತಿ ವರೆಗೆ ಮುಫತ್ತಾಗಿ ವಿದ್ಯುಚ್ಛಕ್ತಿಯನ್ನು ಒದಗಿಸುವ ನೀತಿ ಜಾರಿಯಲ್ಲಿತ್ತು.

ಈಗ ಕಳೆದ 50 ವರ್ಷಗಳಲ್ಲಿ ವಿದೇಶಿ ಕಂಪನಿಗಳು ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡಲು ದೊಡ್ಡಪ್ರಮಾಣದಲ್ಲಿ ಬಂಡವಾಳ ಹೂಡುತ್ತವೆ ಎಂಬ ಭ್ರಮೆಯಿಂದ ಎಲ್ಲಾ ರೀತಿಯ ಸವಲತ್ತುಗಳನ್ನು ಅವರಿಗೆ ಕೊಟ್ಟರೂ, ವಿದೇಶಿ ಕಂಪನಿಗಳು ಈತನಕ ಒಂದೇ ಒಂದು ಮೆಗಾವ್ಯಾಟ್ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡಲಿಲ್ಲ. ಕರ್ನಾಟಕದಲ್ಲಿ ಕೊಜೆಂಟ್ರಿಕ್ ಕಂಪನಿ ಇದೀಗ ಒಂದು ಯೂನಿಟ್‌ಗೆ ರೂಪಾಯಿ ನಾಲ್ಕು ಸಿಗಬೇಕೆಂದು ಒತ್ತಡ ಬೀರುತ್ತಿದೆ. ಮುಂದಕ್ಕೆ 4 ರೂ. ದರದಲ್ಲಿ ಎಷ್ಟು ಮಂದಿ ರೈತರು ವಿದ್ಯುಚ್ಛಕ್ತಿಯನ್ನು ಪಡೆದು ಕೃಷಿ ಮಾಡಲು ಸಾಧ್ಯ.

ಹೀಗೆ, ಕರ್ನಾಟಕದಲ್ಲಿ ಮೊದಲೇ ಕೃಷಿ ಕ್ಷೇತ್ರವು ಇತರ ರಾಜ್ಯಗಳಿಂದ ಹಿಂದೆ ಇರುವಾಗ, ಈಗ ನೂತನ ಆರ್ಥಿಕ ನೀತಿಗಳ ಭಾಗವಾಗಿ, ನೂತನ ಕೃಷಿ ನೀತಿಯನ್ನು ಅನುಸರಿಸುತ್ತಿರುವ ರಾಜ್ಯ ಸರಕಾರವು ಇಡೀ ಕೃಷಿ ಕ್ಷೇತ್ರದ ಅಭಿವೃದ್ಧಿಯನ್ನು ಲಕ್ಷಾಂತರ ಬಡ ಮತ್ತು ಮಧ್ಯಮ ರೈತರ ಸಹಾಯದಿಂದ, ಅವರ ತೀವ್ರ ಭಾಗವಹಿಸುವಿಕೆಯ ಮೂಲಕ ಸಾಧಿಸುವ ಬದಲು ಕೆಲವೇ ಶ್ರೀಮಂತ ರೈತರು ಹಾಗೂ ಬಂಡವಾಳಶಾಹಿ ಕೃಷಿಕರ ಹಾಗೂ ಕಂಪನಿಗಳ ಮೂಲಕ ಅಭಿವೃದ್ಧಿ ಸಾಧಿಸಲು ಹೊರಟಂತೆ ಕಾಣುತ್ತದೆ. ಖಂಡಿತವಾಗಿ ಇದು ಅವನತಿಯ ದಾರಿ ಎನ್ನದೆ ಬೇರೆ ನಿರ್ವಾಹವಿಲ್ಲ.

ಕರ್ನಾಟಕದಲ್ಲೂ ರೈತರು ಈ ಅನಾಹುತಕಾರಿ ನೀತಿಗಳನ್ನು ಸೋಲಿಸಲು ಅವುಗಳ ಸ್ಥಾನದಲ್ಲಿ ಪರ್ಯಾಯ ಜನಪರ ನೀತಿಗಳನ್ನು ಅನುಸರಿಸುವಂತೆ ಮಾಡುವ ನಿಟ್ಟಿನಲ್ಲಿ ದಿಟ್ಟ ವರ್ಗ ಹೋರಾಟಗಳನ್ನು ಮಾಡಲು ಸನ್ನದ್ಧರಾಗುವುದೊಂದೇ ಅವರ ಮುಂದಿರುವ ಏಕಮೇವ ಹಾದಿ. ○

ಕೋಟ್ಯಾಂತರ ಭಾರತೀಯರಿಗೆ
ಸ್ವಾತಂತ್ರ್ಯವೆಂದರೆ
ಕೇವಲ ರಾಜಕೀಯ
ಸ್ವಾತಂತ್ರ್ಯವಾಗಿರಲಿಲ್ಲ.
ಈ ರಾಜಕೀಯ ಸ್ವಾತಂತ್ರ್ಯವನ್ನು
ಸಾರ್ಥಕಗೊಳಿಸಬೇಕಾದರೆ
ಹಸಿವು, ಬಡತನ, ಅಭದ್ರತೆಯಿಲ್ಲದ
ಒಂದು ಸಮಾಜವನ್ನು ಕಟ್ಟಬೇಕು.
ಈ ಹೋರಾಟ ಇನ್ನೂ ಸಾಗಿದೆ
ಜನತಾ ಪ್ರಜಾಪ್ರಭುತ್ವ ಕ್ರಾಂತಿಯತ್ತ



KRNM/BGS-405 MAG (2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್, ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು – 27 ಫೋನ್ ನಂ. 2236462, ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯ ರಸ್ತೆ ಗಾಂಧಿನಗರ, ಬೆಂಗಳೂರು–9 ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ಸ್ ರಸ್ತೆ ಬೆಂಗಳೂರು


MICO
Bosch Group
A strength of movement
Independent India needed to strengthen its development.
Movement of people, goods and services assumed vital importance.
MICO took up the challenge of bringing the world's best technologies from Bosch to India.
Today MICO is the leader in automotive components.
MICO looks back with pride on India's progress over 50 years of Independence.
50 YEARS